ಹೆಚ್.ಎ.ಎಲ್. ನಲ್ಲಿಯೂ ಕೂಡ ನೀರಿನ ಭವಣೆ ಇದೆ ಎನ್ನುವ ಮಾತನ್ನು ಅವರು ಹೇಳಿದರು ಆದರೆ ಅಲ್ಲಿ ಬೇರೆ ಕಾರಣ ಇದೆ. ಆ ಪ್ರದೇಶ ಬೆಂಗಳೂರು ನೀರು ಸರಬರಾಜು ಮಂಡಲಿಗೆ ಸೇರಿಲ್ಲ. ಮತ್ತೆ ಬಿ.ಡಿ.ಎ. ಗೂ ಸೇರಿಲ್ಲ. ಆದ್ದರಿಂದ ಒಂದು ರೀತಿಯಲ್ಲಿ ಇಲ್ಲಿಯ ಸಮಸ್ಯೆ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದೆ, ಈ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಲು ನಾಳೆ ಬೆಂಗಳೂರು ನಗರದ ಶಾಸಕರ ಸಭೆಯನ್ನು ಕರೆಯಲಾಗಿದೆ.

ಸಧ್ಯಕ್ಕೆ ಬೆಂಗಳೂರು ನಗರದಲ್ಲಿ ಒಂದು ಹೊತ್ತು ನೀರು ಸರಬರಾಜನ್ನು ಖೋತಾ ಮಾಡಿರುವುದನ್ನು ಇನ್ನು ಕಡಿಮೆ ಮಾಡುವುದಕ್ಕೆ ಸಾಧ್ಯ ಇದೆಯೋ ಎಂದು ಒಂದು ಪ್ರಶ್ನೆ ಇದೆ. ಇದು ಸಾಧ್ಯವಾಗುವುದಿಲ್ಲ. ಈ ಸಮಸ್ಯೆ ಪೂರ್ಣವಾಗಿ ಪರಿಹಾರವಾಗಬೇಕಾದರೆ ಕಾವೇರಿ ಎರಡನೇ ಹಂತದ ೩೦ ಎಂ.ಜಿ.ಡಿ. ನೀರು ಬರಬೇಕಾಗುತ್ತದೆ. ಇನ್ನು, ಬೇರೆ ಬೇರೆ ಪ್ರದೇಶಗಳಲ್ಲಿ ಏನಾದರೂ ತೊಂದರೆಗಳಿದ್ದರೆ, ವೈಯಕ್ತಿಕ ಸಮಸ್ಯೆಗಳಿದ್ದರೆ ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಮೈಕೆಲ್ ಬಿ. ಫರ್ನಾಂಡೀಸ್.– ಒಂದೂವರೆ ಇಂಚು ಅಳತೆಯ ಹಳೆಯ ಪೈಪುಗಳನ್ನು ಬದಲಾಯಿಸಿ ನಾಲ್ಕು ಇಂಚು ಅಳತೆಯ ಪೈಪುಗಳನ್ನು ವಾಟರ್ ಸಪ್ಲೈ ಬೋರ್ಡ್‌ನವರು ಅವರ ಖರ್ಚಿನಲ್ಲಿಯೇ ಹಾಕಬೇಕು.

ಶ್ರೀ ಜಿ. ನಾರಾಯಣಕುಮಾರ್.—ಜಲಮಂಡಳಿ ಒಂದೇ ಇಲಾಖೆಯಲ್ಲಿ ಒಳಚರಂಡಿ ಮತ್ತು ಜಲಮಂಡಳಿ ಎರಡೂ ಕೂಡ ಇರುವುದರಿಂದ ಎಲ್ಲಾ ವ್ಯವಸ್ಥೆಗಳನ್ನು ಸರಿಯಾಗಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಒಳಚರಂಡಿ ಮತ್ತು ಜಲಮಂಡಳಿಗಳನ್ನು ಏಕೆ ಪ್ರತ್ಯೇಕ ಇಲಾಖೆಗಳಾಗಿ ಮಾಡಬಾರದು ?

ಶ್ರೀ ಎಂ. ಚಂದ್ರಶೇಖರ್.—ಇದೊಂದು ದೊಡ್ಡ ಇಲಾಖೆ. ಇದರಲ್ಲಿ ಎರಡೂ ವಿಭಾಗಗಳಿಗೆ ಪ್ರತ್ಯೇಕವಾದ ಸಿಬ್ಬಂಧಿ ಬರುತ್ತಾರೆ. ಅವರವರ ಕೆಲಸಗಳನ್ನು ಅವರವರು ಮಾಡಿಕೊಂಡು ಹೋಗುತ್ತಾರೆ.

ಶ್ರೀ ಮೈಕೆಲ್ ಬಿ, ಫರ್ನಾಂಡೀಸ್.—೪೦ ಕಿಲೋಮೀಟರ್ ಪೈಪನ್ನು ವಾಟರ್ ಸಪ್ಲೈ ಬೋರ್ಡ್‌ನವರು ಹಾಕಿದ್ದಾರೆ. ಆದರೆ ಐ.ಟಿ.ಸಿ ಕಾಲೋನಿಯಲ್ಲಿ ಈ ರೀತಿ ಪೈಪು ಹಾಕಲು ಜನರಿಂದ ಹಣ ಕೇಳುತ್ತಿದ್ದಾರೆ, ಅಲ್ಲಿ ಇನ್ನೂರು ಜನರಿಗೆ ತುಂಬಾ ತೊಂದರೆಯಾಗಿದೆ. ಇದರ ಬಗ್ಗೆ ನೀವು ಒಂದು ತೀರ್ಮಾನಕ್ಕೆ ಬರಬೇಕು.

ಶ್ರೀ ಎಂ, ಚಂದ್ರಶೇಖರ್.—ಇದು ಸೀಮಿತವಾದ ಪ್ರಶ್ನೆ. ಇದನ್ನು ವಿಚಾರಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1983–84ನೇ ಸಾಲಿನ ಆಯುವ್ಯಯದ ಮೇಲೆ ಸಾಮಾನ್ಯ ಚರ್ಚೆ

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಅರ್ಥ ಸಚಿವರೂ ಹೌದು. ಅವರು ಈ ಸದನದ ಒಪ್ಪಿಗೆಗಾಗಿ ಮಂಡಿಸಿರತಕ್ಕಂಥ ಈ ಆಯುವ್ಯಯ ಪತ್ರದ ವಿಷಯದಲ್ಲಿ ನಾನು ಮಾತನಾಡುವುದಕ್ಕೆ ಎದ್ದು ನಿಂತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಆಯುವ್ಯಯ ಪತ್ರದ ಭಾಷಣದಲ್ಲಿ ಮೊದಲನೇ ಪುಟದಲ್ಲಿ ತಿಳಿಸಿರುವ ಹಾಗೆ' ಇದು ಒಂದು ಅಪೂರ್ವ ಸಂದರ್ಭ' ನಮ್ಮ ರಾಜ್ಯದ ರಾಜಕೀಯಕ್ಕೆ ಸೀಮಿತಗೊಳಿಸಿ ಮಾತನಾಡುವುದಾದರೆ ಇದು ಸ್ವಾತಂತ್ರ್ಯ ನಂತರ ಮೊಟ್ಟ ಮೊದಲನೇ ಅವಕಾಶ. ಈ ಮಾತನ್ನು ಮೊದಲನೇ ಪುಟದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ ಏನೆಂದರೆ ಅವರು ತಮಗೆ ಸಿಕ್ಕಿರತಕ್ಕಂಥ ಈ ಸದಾವಕಾಶವನ್ನು ಸದುಪಯೋಗ ಪಡಿಸಿಕೊಂಡು ಈ ಸದನದ ಒಪ್ಪಿಗೆಗಾಗಿ ಈ ಆಯುವ್ಯಯ ಪತ್ರವನ್ನು ಮಂಡನೆ ಮಾಡಿದ್ದಾರೆ, ಮಾಡಿದ ನಂತರ ಇದರ ಬಗ್ಗೆ ಈ ಸದನದ ಮಾನ್ಯ ಸದಸ್ಯರುಗಳು ಕೊಡತಕ್ಕಂಥ ಅಭಿಪ್ರಾಯಗಳನ್ನು ಇಲ್ಲಿ ಕುಳಿತುಕೊಂಡು ಕೇಳತಕ್ಕಂಥ ಸದಾವಕಾಶವನ್ನು ಅವರು ಇಟ್ಟುಕೊಳ್ಳಬೇಕಾಗಿತ್ತು. ಅದರಲ್ಲೂ ಅವರು ಮಾನ್ಯ ಅರ್ಥಸಚಿವರೂ ಆಗಿದ್ದಾರೆ. ಇಲ್ಲಿ ಒಂದು

ಸಂಪ್ರದಾಯ ಇರುವುದು ಮಾನ್ಯ ಉಪಾಧ್ಯಕ್ಷರಾದ ತಮಗೆ ಗೊತ್ತಿದೆಯೆಂದು ನಾನು ಭಾವಿಸಿದ್ದೇನೆ. ಯಾವ ಸಚಿವರು ತಮ್ಮ ಬೇಡಿಕೆಯನ್ನು ಮಂಡನೆ ಮಾಡುತ್ತಾರೆ, ಅವರು ಈ ಸದನದಲ್ಲಿ ಆ ಬೇಡಿಕೆಯ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಕೇಳತಕ್ಕ ಸೌಜನ್ಯತೆ ಮತ್ತು ಇಲ್ಲಿ ಚರ್ಚೆ ಆಗತಕ್ಕಂಥ ವಿಚಾರದಲ್ಲಿ ಅವರು, ಸಂಬಂಧಪಟ್ಟ ಸಚಿವರು ಈ ಸದನದಲ್ಲಿ ಇರಬೇಕು. ಅದರಲ್ಲೂ ಅರ್ಥಸಚಿವರು ಇರಲೇ ಬೇಕು. ಇದು ಹಿಂದಿನಿಂದಲೂ ನಡೆದುಕೊಂಡು ಬಂದಂತಹ ಒಂದು ಪದ್ಧತಿ. ಆದರೆ ಕೆಲವು ಸಂದರ್ಭಗಳಲ್ಲಿ ಕೆಲವು ಸಾಮಾನ್ಯ ವಿಷಯಗಳಿಗೆ ಚರ್ಚೆ ನಡೆದಾಗ ಮಂತ್ರಿ ಮಂಡಲದ ಬೇರೆ ಸದಸ್ಯರು ಅವುಗಳನ್ನು ಬರೆದುಕೊಂಡು ಸಂಬಂಧಪಟ್ಟ ಸಚಿವರು ಇಲ್ಲದೇ ಇದ್ದಾಗ ಅವರ ಪರವಾಗಿ ಉತ್ತರ ಕೊಡುವುದಕ್ಕೆ ಬರುತ್ತದೆ. ಮಾನ್ಯ ಶ್ರೀ ಲಕ್ಷ್ಮೀಸಾಗರ್‌ರವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದಂತಹವರು. ಅವರು ಕೂಡ ಇದೇ ಮಾತನ್ನು ಆಡಿದ್ದರು. ನಾವು ಕೂಡ ಇದೇ ಮಾತನ್ನು ಆಡಿದ್ದೇವೆ. ಆದರೆ ಅರ್ಥ ಸಚಿವರ ವಿಷಯ ಬಹಳ ಪ್ರಮುಖವಾದಂತಹ ವಿಚಾರ. ಈ ಸದನದಲ್ಲಿ ಇಂತಹ ಪ್ರಮುಖವಾದಂತಹ ವಿಷಯವನ್ನು ಚರ್ಚೆಗೆ ಇಟ್ಟುಕೊಂಡಾಗ ಸಂಬಂಧಪಟ್ಟ ಸಚಿವರು ಸದನದಲ್ಲಿ ಇರಬೇಕು. ಮಾತ್ರವಲ್ಲ ಇರಲೇ ಬೇಕಾಗುತ್ತದೆ. ಆದರೆ ಬಹಳ ಅನಿವಾರ್ಯ ಕಾರಣಗಳಿಂದಾಗಿ ಇಲ್ಲಿ ಇರಲಾಗದಂತಹ ಪ್ರಶ್ನೆ ಬಂದಾಗ, ಅದಕ್ಕೂ ಅವಕಾಶವಿದೆ ಎನ್ನುವಂತಹ ಅಭಿಪ್ರಾಯವೂ ಇದೆ. ಇದನ್ನು ನಾನು ಗಮನದಲ್ಲಿಟ್ಟುಕೊಂಡು ಈ ಮಾತನ್ನು ಆಡುತ್ತಿದ್ದೇನೆ. ನಾನು ಕೆಲವು ಪ್ರಮುಖವಾಗಿರತಕ್ಕಂಥ ಅಂಶಗಳನ್ನು ಈ ಆಯವ್ಯಯ ಪತ್ರದ ಬಗ್ಗೆ 'ಆಡಬೇಕು. ಇಲ್ಲಿ ಯಾವುದೇ ಸದಸ್ಯರು ಮಾತನಾಡಿದರೂ ಕೂಡ ಎಲ್ಲಾ ಕಾರ್ಯಕಲಾಪಗಳು ರೆಕಾರ್ಡ್ ಆಗುತ್ತವೆ' ನಂತರ ಅದನ್ನು ಓದಿ ಉತ್ತರ ಕೊಡುವುದಕ್ಕೂ ಬರುತ್ತದೆ. ಹಾಗಿದ್ದ ಮೇಲೆ ಸಚಿವರು ಇಲ್ಲಿ ಏಕೆ ಇರಬೇಕು? ಸಚಿವರು ಮನೆಯಲ್ಲೇ ಕುಳಿತುಕೊಂಡು ಸದನದ ಆ ಕಡೆ ಈ ಕಡೆಯವರ ಭಾಷಣಗಳು ಮುಗಿದ ಮೇಲೆ ನಂತರ ಬಂದು ಉತ್ತರ ಕೊಡಬಹುದು ಎನ್ನತಕ್ಕಂಥ ಒಂದು ಪ್ರಸಂಗವೂ ಇಲ್ಲಿ ಬಂದಿದೆ. ಸಾಮಾನ್ಯವಾದ ವಿಷಯ ಚರ್ಚೆಗೆ ಬಂದಾಗ ಆ ಪ್ರಸಂಗ ಬರುತ್ತದೆ. ಆದರೆ ಬಹಳ ಪ್ರಾಮುಖ್ಯವಾದ ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರದ ಪರವಾಗಿ ಉತ್ತರ ನಿರೀಕ್ಷೆ ಮಾಡುತ್ತಿದ್ದೇನೆ ಅರ್ಥಮಂತ್ರಿಗಳು ಇಲ್ಲಿ ಇರಬೇಕು. ಇದು ಸದನದ ಗೌರವ, ಮತ್ತು ಪ್ರತಿಷ್ಠೆಯ ಪ್ರಶ್ನೆ. ಮುಖ್ಯಮಂತ್ರಿಗಳು ಸದನದಲ್ಲಿ ಹಾಜರಿರಬೇಕು. ಒಂದು ವೇಳೆ ಅವರು ಇಲ್ಲದಿದ್ದರೆ ಏತಕ್ಕೆ ಇಲ್ಲ? ಇದಕ್ಕಿಂತ ಮುಖ್ಯವಾದ ವಿಷಯ ಅವರಿಗೆ ಯಾವುದು ಇದೆ ಎಂದು ಸರ್ಕಾರದ ಪರವಾಗಿ, ಅಥವಾ ಸರ್ಕಾರದ ಮುಖಾಂತರ ನಮಗೆ ತಿಳಿಸಿದರೆ, ನಿಜವಾಗಿಯೂ ಕೂಡ ಇದಕ್ಕಿಂತ ಬೇರೆ ದೊಡ್ಡ ಕಾರಣ ಇದೆ ಎಂದರೆ ನಾವು ಕೂಡ ಒಪ್ಪಿಗೆ ಕೊಡೋಣ. ಆದರೆ ಸಕಾರಣ ಇಲ್ಲದೇ, ಸಂಬಂಧಪಟ್ಟ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಇಲ್ಲದೇ ಇರತಕ್ಕಂಥ ವಿಚಾರದಲ್ಲಿ ತಕ್ಷಣ ನಮಗೆ ಸಕಾರಣವನ್ನು ಕೊಡಬೇಕು. ನಾವು ಇಲ್ಲಿ ನಾವು ಹೇಳಿದಂಥ ಅಭಿಪ್ರಾಯಗಳು ಬರೀ ರೆಕಾರ್ಡ್ ಆಗಲಿ ಎಂಬ ಒಂದು ಉದ್ದೇಶದಿಂದ ಮಾತ್ರವೇ ಭಾಷಣ ಮಾಡುತ್ತಿಲ್ಲ. ನಮ್ಮ ಭಾಷಣ ಸದನದ ಕಾರ್ಯಕಲಾಪಗಳಲ್ಲಿ ಬರುವುದು ಅದು ಒಂದು ಕಾರ್ಯವಿಧಾನ. ಆದ್ದರಿಂದ ತಮ್ಮ ಮುಖಾಂತರ ನಾನು ಸರ್ಕಾರದವರನ್ನು ಕೇಳಿ ಕೊಳ್ಳುತ್ತಿದ್ದೇನೆ. ಇಲ್ಲಿ ಮುಖ್ಯಮಂತ್ರಿಗಳು ಏತಕ್ಕಾಗಿ ಇಲ್ಲ? ಇವತ್ತು ಇಡೀ ದಿವಸ ಈ ಸದನದಲ್ಲಿ ಅವರನ್ನು ನಾವು ನೋಡಿಲ್ಲ. ಅವರು ಇಲ್ಲಿ ಇಲ್ಲದೇ ಇದ್ದರೆ ನಾವು ಭಾಷಣ ಮಾಡುವುದು ಅನಾವಶ್ಯಕ ಎನ್ನುವ ಭಾವನೆ ನಮ್ಮಲ್ಲಿ ಬರಬಹುದು. ಅದಕ್ಕೆ ಅವಕಾಶ ಕೊಡದ ರೀತಿಯಲ್ಲಿ ದಯಮಾಡಿ ತಾವು ಸರ್ಕಾರದಿಂದ ಉತ್ತರ ಕೊಡಿಸಬೇಕೆಂಬ ಈ ಮಾತನ್ನು ತಮ್ಮ ಮುಂದೆ ಇಟ್ಟಿದ್ದೇನೆ. ನಾನು ಭಾಷಣವನ್ನು ಪ್ರಾರಂಭ ಮಾಡುವುದಕ್ಕಿಂತ ಮೊದಲೇ ಸರ್ಕಾರದ ಪರವಾಗಿ ಹೇಳಿದರೆ ಬಹಳ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.—ಭಾಷಣ ಮುಂದುವರಿಸಬಹುದು. ಮಾನ್ಯ ಮುಖ್ಯಮಂತ್ರಿಗಳು ಬರಬಹುದು.

ಶ್ರೀ ಎಸ್. ಬಂಗಾರಪ್ಪ.—ಎಲ್ಲಿಗೆ ಹೋಗಿದ್ದಾರೆಂಬುದು ನಿಮಗೆ ಗೊತ್ತಿದೆಯೇ? ಅದು ನಮಗೆ ಬೇಕು.

ಶ್ರೀ ಎ. ಲಕ್ಷ್ಮೀಸಾಗರ್.--ಎಲ್ಲಿಗೆ ಹೋಗಿದ್ದಾರೆಂಬುದು ನನಗೆ ಗೊತ್ತಿಲ್ಲ. ಬರುವುದಕ್ಕೆ ಹೇಳಿಕಳುಹಿಸಿದ್ದೇನೆ.

ಶ್ರೀ ಕೆ. ಪಿ. ಶಾಂತಮೂರ್ತಿ.—ಅವರು ಖಾಸಗಿಯಾಗಿ ಹೋಗಿದ್ದಾರೋ ಅಥವಾ ಸಾರ್ವಜನಿಕವಾಗಿ ಹೋಗಿದ್ದಾರೋ ಇದು ನಮಗೆ ಗೊತ್ತಾಗಬೇಕು.

ಶ್ರೀ ಜೆ. ಡಿ. ಸೋಮಪ್ಪ.—ಮಂತ್ರಿಮಂಡಲ ಅಂದರೆ ಜಂಟಿ ಜವಾಬ್ದಾರಿ ಇದೆ. ಸದನದಲ್ಲಿ ನಮ್ಮ ಕಾನೂನು ಮಂತ್ರಿಗಳಿದ್ದಾರೆ. ಅವರಿಗೆ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆಂಬುದು ಗೊತ್ತಿರಬೇಕು. ಇಲ್ಲದಿದ್ದರೆ ಹೇಗೆ? ಸಾರ್ವಜನಿಕರ ಹಣವನ್ನು ಈ ರೀತಿ ಅಪವ್ಯಯ ಮಾಡುವುದು ಸರಿಯಲ್ಲ.

ಉಪಾಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಹೇಳಿರತಕ್ಕಂತಹ ಮಾತನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಬಂಗಾರಪ್ಪನವರು ಚರ್ಚೆಯನ್ನು ಪ್ರಾರಂಭ ಮಾಡಲಿ. ಮಾನ್ಯ ಮುಖ್ಯ ಮಂತ್ರಿಗಳನ್ನು ಕರೆಯಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಡಿ. ಚೌಡಯ್ಯ.—ಯಾರು ಈ ರಾಜ್ಯದ ಅರ್ಥ ಸಚಿವರಾಗಿದ್ದಾರೋ ಅವರು ಇಟ್ಟಂತಹ ಆಯವ್ಯಯದ ಮೇಲೆ ಚರ್ಚೆ ಮಾಡುವಾಗ ಅವರು ಈ ಸದನದಲ್ಲಿರಬೇಕು. ಮಾನ್ಯ ಸದಸ್ಯರು ಹೇಳತಕ್ಕಂತಹ ಮಾತುಗಳನ್ನು ಹಾಗೂ ಸದಸ್ಯರ ಭಾವನೆಗಳನ್ನು ಗಮನಿಸಿದರೆ ಉತ್ತರ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಕೆ. ಪಿ. ಶಾಂತಮೂರ್ತಿ.—ಈ ದಿವಸದ ಅವರ ಕಾರ್ಯಕ್ರಮ ಪ್ರತಿಯೊಬ್ಬರಿಗೂ ಗೊತ್ತಾಗಬೇಕು. ಅವರು ಹೋಗಿರುವುದು ಖಾಸಗಿಯಾಗಿಯೋ? ಅಥವಾ ಸಾರ್ವಜನಿಕವಾಗಿಯೋ? ಅದು ನಮಗೆ ಗೊತ್ತಾಗಬೇಕು.

ಶ್ರೀ ಜಿ. ನಾರಾಯಣಕುಮಾರ್.—ಮುಖ್ಯ ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ? ಮಾನ್ಯ ಲಕ್ಷ್ಮೀಸಾಗರ'ರವರು ಇಲ್ಲೇ ಇದ್ದಾರೆ. ಅವರೊಬ್ಬರನ್ನು ಬಿಟ್ಟರೆ ಬೇರೆ ಯಾರೂ ಇಲ್ಲಿ ಇಲ್ಲ. ನಾವು ಯಾರಿಗೆ ಹೇಳುವುದು. ಗೋಡೆಗೆ ಹೇಳೋಣವೇ?

ಶ್ರೀ ಕೆ. ಎಚ್. ರಂಗನಾಥ್.—ಈಗ ಸಭೆಯನ್ನು ಸ್ವಲ್ಪ ಸಮಯ ಮುಂದೂಡೋಣ. ಮಂತ್ರಿಗಳಿಗೆ ಹಾಗೂ ಅಧಿಕಾರಿಗಳಿಗೆ ಯಾವಾಗ ಅನುಕೂಲವಾಗುತ್ತದೋ ಆವಾಗ ಮತ್ತೆ ಸೇರೋಣ.

ಉಪಾಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಇದನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಶ್ರೀ ಬಂಗಾರಪ್ಪನವರು ಚರ್ಚೆಯನ್ನು ಪ್ರಾರಂಭ ಮಾಡಲಿ.

ಶ್ರೀ ಕೆ. ಎಚ್. ರಂಗನಾಥ್.—ಅದನ್ನೇ ಮಾನ್ಯ ಸದಸ್ಯರಾದ ಶ್ರೀ ಬಂಗಾರಪ್ಪನವರು ಹೇಳುತ್ತಿದ್ದಾರೆ. ಅವರು ಭಾಷಣವನ್ನು ಪ್ರಾರಂಭ ಮಾಡುವುದಕ್ಕೆ ಮುನ್ನ ಮುಖ್ಯ ಮಂತ್ರಿಗಳನ್ನು ಇಲ್ಲಿಗೆ ಕರೆಯಿಸಿ ಎಂಬುದಾಗಿ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

ಶ್ರೀ ಕೆ. ಎಚ್. ರಂಗನಾಥ್.—ಎಲ್ಲಾ ಅಧಿಕಾರಿಗಳಿಗೂ ಹಾಗೂ ಮಂತ್ರಿಗಳಿಗೂ ಯಾವಾಗ ಅನುಕೂಲವಾಗುತ್ತದೋ ಆವಾಗ ಮತ್ತೆ ಸಭೆ ಸೇರೋಣ. ನಾವು ಹೊರಗಡೆ ಇರುತ್ತೇವೆ. ಎಲ್ಲಿಯೂ ಹೋಗುವುದಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಎಷ್ಟು ಹೊತ್ತಿಗೆ ಮುಖ್ಯ ಮಂತ್ರಿಗಳನ್ನು ಈ ಸಭೆಗೆ ಕರೆಯಿಸುತ್ತೀರಿ? ಅದನ್ನು ದಯಮಾಡಿ ತಿಳಿಸಿ. ಅವರು ಇಲ್ಲಿ ಇಲ್ಲದಿದ್ದಾಗ ನಾವು ಯಾರಿಗೆ ಹೇಳಬೇಕು?

ಉಪಾಧ್ಯಕ್ಷರು.—ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಮಾನ್ಯ ಸದಸ್ಯರು ಸದನದ ಗಮನಕ್ಕೆ ತಂದಿದ್ದಾರೆ. ಅವರು ಕರೆಯಿಸುತ್ತೇನೆಂದು ಆಗಲೇ ನಾನು ಹೇಳಿದ್ದೇನೆ.

ಶ್ರೀ ಜಿ. ನಾರಾಯಣ ಕುಮಾರ್.—ಅವರು ಎಲ್ಲಿಗೆ ಹೋಗಿದ್ದಾರೆ? ಯಾವ ಕೆಲಸಕ್ಕೋಸ್ಕರ ಹೋಗಿದ್ದಾರೆ. ಎಷ್ಟು ಹೊತ್ತಿಗೆ ಅವರನ್ನು ಕರೆಯಿಸುತ್ತೀರಿ? ದಯಮಾಡಿ ಹೇಳಿ.

ಶ್ರೀ ಜೆ. ಡಿ. ಸೋಮಪ್ಪ.—೨೪ ಜನ ಮಂತ್ರಿ ಮಂಡಲದಲ್ಲಿ ಇಬ್ಬರು ಮಂತ್ರಿಗಳು ಇಲ್ಲಿ ಹಾಜರಿದ್ದಾರೆ. ಉಳಿದವರು ಎಲ್ಲಿಗೆ ಹೋಗಿದ್ದಾರೆ?

ಉಪಾಧ್ಯಕ್ಷರು.—ತಮ್ಮ ಅಭಿಪ್ರಾಯ ಸದನದ ಗಮನಕ್ಕೆ ಬಂದಿದೆ.

ಶ್ರೀ ಜಿ. ನಾರಾಯಣ ಕುಮಾರ್.—ಎಷ್ಟು ಹೊತ್ತಿಗೆ ಮಾನ್ಯ ಮುಖ್ಯ ಮಂತ್ರಿಗಳನ್ನು ಈ ಸಭೆಗೆ ಕರೆಯಿಸುತ್ತೀರಿ ದಯಮಾಡಿ ಹೇಳಿ? ಅವರು ಊರಿನಲ್ಲಿದ್ದಾರೋ? ಅಥವಾ ಇಲ್ಲವೇ, ಅದನ್ನಾದರೂ ತಾವು ಹೇಳಬೇಕು.

ಉಪಾಧ್ಯಕ್ಷರು.—ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರಾದ ಬಂಗಾರಪ್ಪನವರು ಚರ್ಚೆ ಪ್ರಾರಂಭ ಮಾಡುವುದಕ್ಕೆ ಅಣಿವು ಮಾಡಿಕೊಡಿ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದ ಪರವಾಗಿ ನಾನು ಸರಿಯಾದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ನನ್ನ ಚರ್ಚೆಯನ್ನು ಪ್ರಾರಂಭ ಮಾಡುತ್ತಿದ್ದೇನೆ. ಇನ್ನು ಸ್ವಲ್ಪ ಕಾಲದಲ್ಲಿ ಮುಖ್ಯ ಮಂತ್ರಿಗಳನ್ನು ಕರೆಯಿಸತಕ್ಕಂತಹ ವ್ಯವಸ್ಥೆಯನು ತಾವು ಮಾಡುತ್ತೀರಿ ಎನ್ನತಕ್ಕಂತಹ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಒಂದು ವೇಳೆ ಆ ಒಂದು ವ್ಯವಸ್ಥೆಯನ್ನು ಮಾಡದಿದ್ದರೆ ಆ ಮೇಲೆ ನಾವು ವಿಚಾರ ಮಾಡಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಈ ಸಾಲಿನ ಆಯವ್ಯಯ ಪತ್ರವನ್ನು ಅಂದರೆ ೧೯೮೩–೮೪ನೇ ಸಾಲಿನ ಆಯವ್ಯಯ ಪತ್ರವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಂಡನೆ ಮಾಡುತ್ತಾ ಅಪರೂಪವಾಗಿ ಸಿಕ್ಕಿರತಕ್ಕಂತಹ ಒಂದು ಸಂದರ್ಭ ಎನ್ನತಕ್ಕಂತಹ ಮಾತನ್ನು ತಿಳಿಸಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಅದಕ್ಕಾಗಿ ಹೆಣಗಾಡಿರತಕ್ಕಂತಹ ಜನಗಳು ನಾವು ಇಲ್ಲಿದ್ದೇವೆ. ಈ ಮಾತನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಸ್ವಾತಂತ್ರ್ಯ ನಂತರ ಈ ರಾಜ್ಯದಲ್ಲಿ ಜನತೆ ಕಾಂಗ್ರೆಸ್ ಪಕ್ಷದ ಆಡಳಿತವನ್ನು ಮಾತ್ರ ಸತತವಾಗಿ ಅವಿಚ್ಛಿನ್ನವಾಗಿ ನೋಡಿಕೊಂಡು ಬಂದಿರತಕ್ಕಂತಹದ್ದು. ಮೊಟ್ಟ ಮೊದಲನೆ, ಭಾರಿಗೆ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ಸೇತರರ ಸರ್ಕಾರವನ್ನು ರಚನೆ ಮಾಡುವುದಕ್ಕೆ ಒಂದು ಸದವಕಾಶವನ್ನು ಈ ರಾಜ್ಯದ ಜನತೆ ಮಾಡಿಕೊಟ್ಟರು. ನಾನು ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಇಲ್ಲಿ ಆಯವ್ಯಯ ಪತ್ರದಲ್ಲಿ ಒಂದು ಮಾತನ್ನು ಹೇಳಿದ್ದಾರೆ. "ಇದು ಕರ್ನಾಟಕದ ಪ್ರಪ್ರಥಮ ಜನತಾ ಸರ್ಕಾರದ ಆಯವ್ಯಯ ಅಂದಾಜು ಪತ್ರ" ಎಂಬುದಾಗಿ ಹೇಳಿದ್ದಾರೆ. ಕಾಲದ ಅಭಾವ ಬರಬಹುದು ಎನ್ನುವ ದೃಷ್ಟಿಯಿಂದ ನಾನು ಪೂರ್ತಿಯಾಗಿ ಓದುವುದಕ್ಕೆ ಹೋಗುವುದಿಲ್ಲ. ಅದೇ ಪುಟದ ಕೊನೆ ಸಾಲಿನಲ್ಲಿ "ಈ ಸರ್ಕಾರವು, ನಿಜವಾದ ಅರ್ಥದಲ್ಲಿ, ಜನತೆಗಾಗಿ ಜನತೆಯೇ ನಡೆಸುವ ಜನತಾ ಸರ್ಕಾರವೆನಿಸುವುದು" ಎನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಮಾತ್ರ ಸ್ಪಷ್ಟಪಡಿಸುತ್ತೇನೆ. ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ. ಕಳೆದ ಚುನಾವಣೆಯಲ್ಲಿ ಆದಂತಹ ಚುನಾವಣಾ ಪ್ರಣಾಳಿಕೆ ಏನಿದೆ ಅದರ ಹಿನ್ನಲೆಯಲ್ಲಿ ಈ ಮಾತನ್ನು ಹೇಳುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳೇ ನನಗೆ ಆಸ್ಪದ ಮಾಡಿ ಕೊಟ್ಟಿದ್ದಾರೆ. ಚುನಾವಣೆ ಪ್ರಣಾಳಿಕೆ ಎಂದು ಹೇಳಿದ ಮೇಲೆ ನಾವು ಚುನಾವಣೆಯಲ್ಲಿ ಹೊರಡಿಸಿರ ತಕ್ಕಂತಹ ಚುನಾವಣಾ ಪ್ರಣಾಳಿಕೆ ಈ ಸದನದ ಸ್ವತ್ತಾಗುತ್ತದೆ, ಜನತಾ ಪಕ್ಷವೇ ಈ ಒಂದು ಚುನಾವಣಾ ಪ್ರಣಾಳಿಕೆಯನ್ನು ಪ್ರತ್ಯೇಕವಾಗಿ ಇಟ್ಟು ಕರ್ನಾಟಕ ರಾಜ್ಯದ ಮಾನ್ಯ ಮತದಾರರ ಮುಂದೆ ಹೋಗಿದ್ದಿದ್ದರೆ ಆ ಮಾತನ್ನು ನಾನು ಒಪ್ಪುತ್ತಿದ್ದೆ. ನಾನು ಬೇಡ ಎಂಬುದಾಗಿ ಹೇಳುವುದಿಲ್ಲ. ಆ ಚುನಾವಣಾ ಪ್ರಣಾಳಿಕೆ ಇಲ್ಲಿ ನನ್ನ ಹತ್ತಿರ ಇದೆ. ತಾವು ಕೂಡ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದಂತಹವರು. ಇದು ಈ ಸದನದ ಎಲ್ಲ ಸದಸ್ಯರಿಗೂ ತಿಳಿದಿರತಕ್ಕಂತಹ ಹಾಗೂ ಗೊತ್ತಿರ ತಕ್ಕಂತಹ ವಿಚಾರವೂ ಹೌದು. ಜನತಾ ಪಕ್ಷ–ಕರ್ನಾಟಕ ಕ್ರಾಂತಿ ರಂಗದ ಚುನಾವಣಾ ಪ್ರಣಾಳಿಕೆ "ಜನತೆಯ ಕೈಗೆ ಅಧಿಕಾರ" ಈ ಒಂದು ಪ್ರಣಾಳಿಕೆ ಜನತಾ ಪಕ್ಷದ ಪ್ರಣಾಳಿಕೆ ಮಾತ್ರ ಅಲ್ಲವೆಂಬುದು ಇದರಿಂದ ಸ್ಪಷ್ಟವಾಗಿ ಅರ್ಥವಾಗುತ್ತದೆ. ಈ ಚುನಾವಣಾ ಪ್ರಣಾಳಿಕೆ ನಾವು ಏನು ಇಂಗ್ಲೀಷ್‌ನಲ್ಲಿ ಎಲೆಕ್ಷನ್ ಮ್ಯಾನಿಫೆಸ್ಟೋ ಎಂದು ಕರೆಯುತ್ತೇವೆಯೋ ಅದು ಜನತಾ ಮತ್ತು ಕ್ರಾಂತಿ ರಂಗ ಪಕ್ಷಗಳ ಏಕ ಪ್ರಣಾಳಿಕೆಯಾಗಿದೆ ಒಂದೊಂದು ಸಮಯದಲ್ಲೂ ಕರ್ನಾಟಕ ರಾಜ್ಯದ ಜನತೆ ಆ ಮಾತನ್ನು ಆಡಿದ್ದಾರೆ. ಏಕೆಂದರೆ ಜನತೆಯ ತೀರ್ಪು ಈ ಚುನಾವಣಾ ಪ್ರಣಾಳಿಕೆ ಆಧಾರವಾಗಿರಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ನಮ್ಮ ಅಕ್ಷರ ಜ್ಞಾನ ಇರತಕ್ಕಂತಹ ಜನ ಸುಮಾರು ೩೫ ರಿಂದ ೩೬ ಪರ್ಸೆಂಟ್

ಇದ್ದಾರೆ. ಇನ್ನೂ ಶೇಕಡ ೬೦ ರಿಂದ ೬೭ ಭಾಗದಷ್ಟು ಜನ ಅಕ್ಷರ ಜ್ಞಾನ ಇಲ್ಲದಂತಹವರು ಇದ್ದಾರೆ. ಇಂತಹ ವಿಚಾರಗಳನ್ನು ತಿಳಿದುಕೊಳ್ಳತಕ್ಕಂತಹ ಶಕ್ತಿ ಇಲ್ಲದವರು, ಓದು ಬಾರದೇ ಇರತಕ್ಕಂತಹ ಜನತೆ ನಮ್ಮ ರಾಜ್ಯದಲ್ಲಿದ್ದಾರೆಂಬುದು ಸುಸ್ಪಷ್ಟ. ಈ ಒಂದು ಪ್ರಣಾಳಿಕೆಯನ್ನು ಜನತೆ ಮುಂದೆ ಇಟ್ಟಾಗ ಎರಡು ಪಕ್ಷಗಳ ಒಂದಂ ಒಕ್ಕೂಟದಿಂದ ಜನತೆಯ ಮುಂದೆ ಹೋಗಿದ್ದೇವೆ ಎನ್ನುವ ಅಂಶ ಪ್ರತಿಯೊಬ್ಬ ಶಾಸಕರಿಗೂ ಮಾನ್ಯ ಮತದಾರರು ಚುನಾವಣೆಯಲ್ಲಿ ನೀಡಿದ್ದಾರೆಂಬುದನ್ನು ನಾನು ತಮ್ಮ ಮುಖಾಂತರ ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇನ್ನೂ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಮುಖ್ಯ ಮಂತ್ರಿಗಳು ತಮ್ಮ ಆಯವ್ಯಯ ಪತ್ರದಲ್ಲಿ ಜನತಾ ಪಕ್ಷ ಜನತೆಯ ಬೆಂಬಲ ಪಡೆದು ಜನತಾ ಪಕ್ಷ ಮಾತ್ರವೇ ಅಧಿಕಾರಕ್ಕೆ ಬಂದಿದೆ ಎನ್ನುವ ಅಂಶ ಏನಿದೆ, ಇದು ಸತ್ಯಕ್ಕೆ ಬಹಳ ದೂರವಾದ ವಿಚಾರ.

೨–೦೦ ಪಿ. ಎಂ.

ಅಷ್ಟೇ ಅಲ್ಲ, ಚುನಾವಣೆ ಕಳೆದ ಮೇಲೆ ಮಾನ್ಯ ಮುಂತ್ರಿಗಳು ಒಂದು ಮಾತು ಹೇಳಿದರು. ನಾನು ಅದನ್ನು ಈಗ ಹೇಳುವುದಕ್ಕೆ ಹೋಗದೆ ಇದ್ದರೂ ಕೂಡ ನಾನು ಅವರನ್ನು ಒಂದು ಮಾತು ಕೇಳುತ್ತೇನೆ. ಚುನಾವಣೆ ಸಮಯದಲ್ಲಿ ಜನತೆಗೆ ಏನು ಒಂದು ಅಭಿವಚನ ನೀಡಿದಿರಿ ಅದರಂತೆ ಕರ್ನಾಟಕದ ಜನತೆ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಮತದಾರರು ತಮಗೆ ಓಟು ಹಾಕಿದ್ದಾರೆ. ಅದ ರಿಂದ ನೀವು ಈಗ ಬಂದಿದ್ದೀರಿ, ಆದರೆ ಅದರಂತೆ ನೀವು ನಡೆದಿದ್ದೀರಾ ಎಂದು.

ಶ್ರೀ ಕೆ. ಜಿ. ಮಹೇಶ್ವರಪ್ಪ.—ನಾವು ಜನತಾ ಸರ್ಕಾರ ಎಂದು ಉಪಯೋಗಿಸಿದ್ದೇವೆ, ಜನತಾ ಪಕ್ಷ ಎಂದು ಉಪಯೋಗಿಸಿಲ್ಲ, ಅದನ್ನು ತಾವು ಗಮನದಲ್ಲಿಡಬೇಕು.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನೀವು ಇದು ಜನತಾ ಸರ್ಕಾರ ಅಲ್ಲ ಎಂದು ಒಪ್ಪಿ ಕೊಂಡರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಅದೇನೇ ಇರಲಿ, ಚುನಾವಣೆ ಸಮಯದಲ್ಲಿ ಕರ್ನಾಟಕದ ಜನತೆಯ ಮುಂದೆ ಏನು ಒಂದು ಪ್ರಣಾಳಿಕೆಯನ್ನು ಇಟ್ಟಿದ್ದೀವಿ ಅದನ್ನು ನಂಬಿ ನಿಮಗೆ ಅವರು ಮತ ಕೊಟ್ಟರು ನಂತರ ಫಲಿತಾಂಶವೂ ಕೂಡ ಪ್ರಕಟವಾಯಿತು. ಸಂತೋಷ. ನಂತರ ಅವರು ಮುಖ್ಯ ಮುಂತ್ರಿಗಳಾದ ಮೇಲೆ, ಪ್ರಮಾಣ ವಚನ ಸ್ವೀಕಾರ ಮಾಡಿದ ಮೇಲೆ ಒಂದು ಹೇಳಿಕೆ ಕೊಟ್ಟರು, ಆಗ ನಾನೂ ಕೂಡ ಒಂದು ಹೇಳಿಕೆ ನೀಡಿದ್ದೇನೆ. ಅದನ್ನೂ ನೋಡಿ. ಫ್ರಂಟ್ ಗೌರ್ನ್‌ಮೆಂಟ್ ಆಗ ಬೇಕು ಎಂದು ಹೇಳಿದೆ. ಏತಕ್ಕೆಂದರೆ ಜನತೆಯ ಮುಂದೆ ನಾವು ಜಂಟಿಯಾಗಿ ಹೋಗಿದ್ದರಿಂದ, ಜನತಾ ಪಕ್ಷ ಮತ್ತು ಕ್ರಾಂತಿ ರಂಗ ಇವೆರಡೂ ಒಟ್ಟಿಗೆ ಜನತೆಯ ಮುಂದೆ ಹೋಗಿದ್ದುದರಿಂದ ಇದನ್ನು ಫ್ರಂಟ್ ಗೌರ್ನ್‌ಮೆಂಟ್ ಎಂದು ಹೇಳಬೇಕು ಎಂದು ಹೇಳಿದಾಗ ಅವರು ಅದು ಸಾಧ್ಯವಿಲ್ಲ ಎಂದು ಹೇಳಿದರು. ಕರ್ನಾಟದ ಜನತೆ ಜನತಾ ಪಕ್ಷಕ್ಕೇನೇ ತಮ್ಮ ಮತವನ್ನು ಹಾಕಿದ್ದರೆ ಆಗ ಅವರು ಜನತಾ ಸರ್ಕಾರ ಎಂದು ಹೇಳಿ ಕೊಳ್ಳಬಹುದಾಗಿತ್ತು. ಅದಕ್ಕಿಂತ ಮೊದಲು ನಾವು ಗೌರ್ನರ್ ಅವರನ್ನು ಕಂಡಾಗ ಇದನ್ನು ಫ್ರಂಟ್ ಗೌರ್ನ್‌ಮೆಂಟ್ ಎಂದು ಹೇಳುತ್ತೇವೆ ಎಂದು ಹೇಳಿದರು. ಅಲ್ಲದೇ ಅವರು ಪತ್ರಿಕಾ ಹೇಳಿಕೆಯಲ್ಲೂ ಸಹ ಹೇಳಿದ್ದಾರೆ. ಆದರೆ ಈಗ ಕಾಲಾವಕಾಶ ಇಲ್ಲದೇ ಇರುವುದರಿಂದ ಅವರ ಬಗ್ಗೆ ವಿವರಣೆಗೆ ಹೋಗುವುದಿಲ್ಲ. ಇವರು ಹೀಗೆ ಮಾಡಿರುವುದರಿಂದ ಇದು ಕರ್ನಾಟಕದ ಜನತೆಗೆ ಅಪ ಚಾರ ಮಾಡಿದಂತಾಗುವುದಿಲ್ಲವೇ ? ಕ್ರಾಂತಿರಂಗ ಮತ್ತು ಜನತಾ ಪಕ್ಷ ಇವೆರಡೂ ಜಂಟಿಯಾಗಿ ಹೋಗಿ ಮುಂದೆ ನಾವು ಏನು ಒಂದು ಅಭಿವಚನವನ್ನು ಇಟ್ಟಿದ್ದೇವೊ ಅದರಂತೆ ಮಾಡದೇ ಇದ್ದರೆ ಇದು ಅಪಚಾರವಾದಂತಾಗುವುದಿಲ್ಲವೇ ? ಈಗ ನಾವೆಲ್ಲರೂ ಒಕ್ಕೂಟದಿಂದ ಕೆಲಸ ಮಾಡಿ ಈಗ ಬರೀ ಜನತಾ ಸರ್ಕಾರ ಎಂದು ಕರೆದರೆ ಅದು ಅಪಚಾರ ಮಾಡಿದಂತಾಗುವುದಿಲ್ಲವೇ ? ಚುನಾವಣಾ ಪ್ರಣಾಳಿಕೆಯಲ್ಲಿ ಹೇಗೆ ಇತ್ತು ಎನ್ನುವುದನ್ನಾದರೂ ನೋಡಿ. ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಕೇಳ ಬಯಸುತ್ತೇನೆ. ಇವರಿಗೆ ಜನತಾ ಸರ್ಕಾರವನ್ನು ರಚಿಸುತ್ತೇವೆ ಎನ್ನುವ ಶಕ್ತಿ ಇದ್ದಿದ್ದರೆ ಜಂಟೀ ಪ್ರಣಾಳಿಕೆಯನ್ನು ಏತಕ್ಕೆ ಮಾಡಿಸಬೇಕು ಎಂದು ಕೇಳುತ್ತೇನೆ. ಜಂಟೀ ಪ್ರಣಾಳಿಕೆಯಲ್ಲಿ ಆ ರೀತಿ ಮಾಡಿಸಿ ಜನತೆಯಿಂದ ಓಟನ್ನು ತೆಗೆದುಕೊಂಡು ಈಗ ಬರೀ ಜನತಾ ಸರ್ಕಾರ ಎಂದು ಕರೆದರೆ ಇದು ಕರ್ನಾಟಕದ ಜನತೆಗೆ ಅಪಚಾರ ಮಾಡಿದಂತಾಗುವುದಿಲ್ಲವೇ? ಈಗಲೂ ಕೂಡ ಈ ಜನತಾ ಸರ್ಕಾರದ ಇತರ ಮಿತ್ರ ಪಕ್ಷಗಳೊಂದಿಗೆ ಅಂದರೆ ಕ್ರಾಂತಿರಂಗ, ಸಿ.ಪಿ ಐ. ಸಿ.ಪಿ.ಎಂ. ಭಾರತೀಯ ಜನತಾ ಪಕ್ಷ ದೊಂದಿಗೆ ಸೇರಿಕೊಂಡು ರಚನೆಯಾಗಿದೆ. ಜನತಾ ಕ್ರಾಂತಿರಂಗ ಒಗ್ಗೂಡಿ ಪ್ರಣಾಳಿಕೆ ಮಾಡಿದ ಮೇಲೆ

ಈ ರೀತಿಯಾಗಿ ಸರ್ಕಾರ ರಚನೆ ಮಾಡಿಕೊಂಡಿರುವುದು ಜನತೆಗೆ ಕೊಟ್ಟಂಥಾ ಆಶ್ವಾಸನೆ ಏನು ಇತ್ತು ಅದು ತಪ್ಪಾಗುವುದಿಲ್ಲವೇ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಇದನ್ನೇ ಹೆಚ್ಚಾಗಿ ಬೆಳೆಸಿಕೊಂಡು ಹೋಗುವುದಕ್ಕೆ ನಾನು ಇಷ್ಟಪಡುವುದಿಲ್ಲ.

ಇನ್ನೊಂದು ವಿಚಾರ ಏನೆಂದರೆ ಮಾನ್ಯ ಎಸ್ ಆರ್. ಬೊಮ್ಮಾಯಿಯವರು ಪದೇ ಪದೇ ಹೇಳಿಕೆ ಕೊಟ್ಟಿದ್ದಾಗೆ ಅದೇನೆಂದರೆ ತರೀಕೆರೆ ಚುನಾವಣೆ ವಿಷಯವಾಗಿ. ಬೇಕಾದರೆ ಅದರ ಬಗ್ಗೆ ಪರ, ವಿರೋಧ ಚರ್ಚೆಯಾಗಲಿ, ಈಗ ನಾನು ಆ ವಿಷಯವಾ ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಈ ಆಯ್ಯವಯ ಪತ್ರವನ್ನು ಮಂಡನೆ ಮಾಡಿರತಕ್ಕದ್ದರ ಬಗ್ಗೆ ಒಂದು ವಿಚಾರವನ್ನು ಹೇಳಬೇಕಾಗಿದೆ. ಅದೇನೆಂದರೆ ಈ ಸರ್ಕಾರ ಏಕಪಕ್ಷೀಯವಾಗಿದ್ದರೆ, ಬರೀ ಜನತಾ ಪಕ್ಷದಿಂದ ಕೂಡಿದ್ದ ಸರ್ಕಾರವೇ ಆಗಿದ್ದರೆ ಆಗ ಯಾವುದೇ ರೀತಿಯ ಅಭ್ಯಂತರ ಇರಲಿಲ್ಲ. ಇದರಲ್ಲಿ ಹೇಳಿರತಕ್ಕಂಥ ಒಂದು ಅಂಶವನ್ನು ನಾವು ಗಣನೆಗೆ ತೆಗೆದುಕೊಂಡರೆ ನೀವು ಜನತೆಯಿಂದ ಬಹುದೂರ ಇದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. ಈ ಒಂದು ಪಕ್ಷವೇ ಬಹುಮತ ಪಡೆದು ಸರ್ಕಾರ ರಚನೆ ಮಾಡಿ ಈ ಆಯವ್ಯಯ ಪತ್ರವನ್ನು ಮಂಡಿಸಿದ್ದರೆ ಆಗ ಇದಕ್ಕೆ ಬೆಲೆ ಸಿಕ್ಕುತ್ತಿತ್ತು. ನೀವು ಈ ಬಗ್ಗೆ ಬಹುದೂರ ಇದ್ದರೂ ಕೂಡ ಈ ಒಂದು ಮಾತನ್ನು ಆಡಿದ್ದೀರಿ, ಅದಕ್ಕೆ ಯಾವದೇ ಕಾರಣ ಇರಬಹುದು, ಇದರ ಬಗ್ಗೆ ನಾನು ಹೆಚ್ಚು ವಿವರಣೆಗೆ ಈಗ ಹೋಗುವುದಿಲ್ಲ. ಈ ಒಂದು ಮಾತು ಸುಸ್ಪಷ್ಟ. ನಿಮ್ಮ ಮಂತ್ರಿಮಂಡಲವನ್ನು ರಚನೆ ಮಾಡುವುದಕ್ಕೋಸ್ಕರ ಈ ಒಂದು ಪಕ್ಷವನ್ನೇ ಬೆಳೆಸಿದ್ದೀರಿ ಅನ್ನುವುದು ನನಗೆ ಇದರಿಂದ ಗೊತ್ತಾಯಿತು. ನಿಮ್ಮ ಪಕ್ಷ ಬಹುಮತವನ್ನು ಪಡೆದುಕೊಂಡು ಬಂದು ಏಕಪಕ್ಷೀಯವಾಗಿ ಸರ್ಕಾರ ರಚನೆ ಮಾಡಿದ್ದರೆ ಆಗ ಈ ಮಾತು ಹೇಳುತ್ತಿರಲಿಲ್ಲ, ನಿಮಗೆ ನೇರವಾಗಿ ಜನತೆಯ ಮುಂದೆ ಹೋಗುವುದಕ್ಕೆ ಆಗ ಶಕ್ತಿ ಇರಲಿಲ್ಲ. ಕರ್ನಾಟಕದ ಕ್ರಾಂತಿರಂಗದ ಒಂದು ಶಕ್ತಿ ಇದ್ದುದರಿಂದಲೇ ಇದು ಸಾಧ್ಯವಾಯಿತು ಎನ್ನುವ ಮಾತನ್ನು ಹೇಳುತ್ತೇನೆ ಇಲ್ಲದೇ ಹೋಗಿದ್ದರೆ ನೀವೆ ನೇರವಾಗಿ ಹೋಗಿ ಚುನಾವಣೆಯನ್ನು ಎದುರಿಸಬೇಕಾಗಿತ್ತು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇತ್ತೀಚೆಗೆ ನಡೆದಂಥ ತರೀಕೆರೆ ಚುನಾವಣೆ ವಿಷಯವಾಗಿ ಒಂದು ಮಾತು ಹೇಳಿರುವುದರಿಂದ ನಾನು ಈ ಮಾತನ್ನು ಹೇಳಬೇಕಾಗಿದೆ ಏನೆಂದರೆ ತರೀಕರೆ ಚುನಾವಣೆಯಲ್ಲಿ ಆದಂಥ ಸೋಲು ಬಂಗಾರಪ್ಪ ಅವರಿಗೆ ಆದಂಥ ಸೋಲು ಎಂದು ಹೇಳಿದ್ದೀರಾ. ಅದಕ್ಕೆ ನಾನು ಈಗಲೇ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ ಅದರ ಆಸೆಯೂ ಇಲ್ಲ. ಒಂದುವೇಳೆ ಗೆದ್ದಿದ್ದರೆ ಜನತಾ ಪಕ್ಷದ ಗೆಲವು ಎನ್ನುತ್ತಿದ್ದರು. ಆದರೆ ಅಲ್ಲಿ ಸೋಲು ಆಗಿರುವುದು ಬಂಗಾರಪ್ಪನವರಿಗೆ ಆದ ಸೋಲು. ನೀವು ಎಷ್ಟು ಪರಮಾವಧಿಗೆ ಹೋಗಿದ್ದೀರಿ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ನಾನು ಇದನ್ನು ಇನ್ನೂ ಹೆಚ್ಚಿಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದಿನ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಮತ್ತು ಬಡ್ಜೆಟ್‌ನಲ್ಲಿ ಏನು ವ್ಯಾಖ್ಯಾನ ಮಾಡಿದ್ದರೋ ಅದನ್ನು ತೆಗೆದು ಹಾಕಿದ್ದರೆ ನಾನು ಮಾತನಾಡುವುದಕ್ಕೆ ಹೋಗುತ್ತಿರಲಿಲ್ಲ. ಈ ಮಂತ್ರಿಮಂಡಲದ ಮಿತವ್ಯಯದ ಖರ್ಚಿನ ಬಗ್ಗೆ ಏನು ಒಂದು ಕಳಕಳಿ ಇದೆ, ಇದು ಎಂದು ಹೇಳಿದ್ದಾರೋ ಅದು ಬಹಳ ಸಂತೋಷ. ಯಾರಿಗೇ ತಾನೇ ಸಂತೋಷವಾಗುವುದಿಲ್ಲ. ನಿಮಗೆ ಒಂದು ಮಾತನ್ನು ನಾನು ಹೇಳಬೇಕಾದರೆ ಹಿಂದಿನ ಮಂತ್ರಿ ಮಂಡಲದ ಗಾತ್ರ ಎಷ್ಟು ಇತ್ತು ಎನ್ನುವುದು ಗೊತ್ತೇ ? ಈಗ ನಿಮ್ಮ ಆಯವ್ಯಯ ಪತ್ರದಲ್ಲಿ ೧೬೦ ಕೋಟಿ ರೂಪಾಯಿಗಳ ಕೊರತೆ ಇವೆ ಎಂದು ತೋರಿಸಿದ್ದೀರಿ. ಅದರ ಬಗ್ಗೆ ನಾನು ಅಂಕಿಅಂಶಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇದು ಮುಂದೆಮುಂದಕ್ಕೆ ಹೋಗುತ್ತಾ ೨೨೫-೨೩೦ ಕೋಟಿ ರೂಪಾಯಿಗೆ ಹೋಗುತ್ತದೆ. ನಾಳೆ ದಿವಸ ಇದನ್ನು ನೋಡಿದರೆ ಈ ಇನ್‌ಫ್ಲೇಷನ್ ಜಾಸ್ತಿಯಾಗುತ್ತದೆಯೆ ವಿನಾ ಕಡಿಮೆಯಾಗುವುದಿಲ್ಲ. This deficit financing adds to the already existing inflationary trends in the country. ಇದನ್ನು ಮರೆಯಬಾರದು. ಇದು ಸಮಾಜಕ್ಕೆ ಹೊರೆಯಾಗುತ್ತದೆ. ಈ ಖರ್ಚನ್ನು ಕಡಿಮೆ ಮಾಡಬೇಕು. ಹಿಂದಿದ್ದ ಸರ್ಕಾರ, ಯಾರೇ ಮುಖ್ಯಮಂತ್ರಿಗಳಿರಲಿ ನನಗೇನೂ ಸಂಬಂಧವಿಲ್ಲ, ಆದರೆ ಅವರ ಖರ್ಚು ವೆಚ್ಚಗಳನ್ನು ಮತ್ತು ಉತ್ಪನ್ನವನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಿದ್ದರು. ಅಲ್ಲದೆ ಹಿಂದಿದ್ದ ಮಂತ್ರಿಮಂಡಲದ ಗಾತ್ರ ನೋಡಿದರೆ ೨೩ ಇತ್ತು, ಈಪೊತ್ತಿನ ಮಂತ್ರಿಮಂಡಲದ ಗಾತ್ರ ನೋಡಿದರೆ ೨೪ ಇದೆ, ಒಬ್ಬರು ಜಾಸ್ತಿ ಇದ್ದಾರೆ.

(ಶ್ರೀ ಬಿ. ಜಿ. ಬಣಕಾರ್ ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈವೊತ್ತಿನ ಆಯುವ್ಯಯ ಪತ್ರವನ್ನು ನೋಡಿದರೆ ಅದರಲ್ಲಿ ಅರ್ಧ ಭಾಗದಷ್ಟು ಪೇಜುಗಳನ್ನು ವೈನಸ್ ಮಾಡಬಹುದು. ಅಂಥ ಕೆಲವು ಭಾಷಣಗಳು ಇದರಲ್ಲಿ ಇವೆ. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಆದರೆ ಈಗ್ಗೆ ಸ್ವಲ್ಪ ದಿವಸದ ಹಿಂದೆ ರಾಜ್ಯಪಾಲರ ಭಾಷಣ ಏನು ಇತ್ತು ಅದು ಚೆನ್ನಾಗಿತ್ತು. ಅಷ್ಟು ಉದ್ದವಾಗಿರಲಿಲ್ಲ. ಈಗಿನ ಆಯುವ್ಯಯ ಪತ್ರ ಬಹಳ ಉದ್ದವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಹಿಂದಿನ ಮಂತ್ರಿಮಂಡಲದ ಗಾತ್ರ ೨೩ ಇತ್ತು ಈಗ ಇರತಕ್ಕದ್ದು ೨೪. ಇವರು ಹೇಗೆ ಖರ್ಚನ್ನು ಕಡಿಮೆ ಮಾಡಿರಬಹುದು ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. ಯಾವ ಬುದ್ಧಿವಾದವನ್ನು ರಾಜ್ಯದ ಜನತೆಗೆ ಮೆಚ್ಚತಕ್ಕ ರೀತಿಯಲ್ಲಿ ಇವರು ಹೇಳಲಿಕ್ಕೆ ಸಾಧ್ಯವಾಗುತ್ತದೆ ? ಇನ್ನೂ ಕೂಡ ಇವರ ಮಂತ್ರಿಮಂಡಲ ಉಬ್ಬುವ ಸಂದರ್ಭ ಇದೆ, ಇದು ಇನ್ನೂ ಮುಗಿದಿಲ್ಲ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಯಾವ ಕಾರಣವನ್ನು ಕೊಟ್ಟಿದ್ದಾರೆ ? ಏಕೆ ಮಂತ್ರಿಮಂಡಲವನ್ನು ದೊಡ್ಡದು ಮಾಡಬೇಕು ಎಂದರೆ, ರಾಜ್ಯದಲ್ಲಿ ಮೇಲ್ಮನೆ ಇದೆ ಅದಕ್ಕೋಸ್ಕರ ಮಂತ್ರಿಮಂಡಲದ ಗಾತ್ರವನ್ನು ದೊಡ್ಡದು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ, ಮಾನ್ಯ ಸದಸ್ಯರು ಇದನ್ನು ವಿಚಾರ ಮಾಡಬೇಕು. ಅವರು ಕೊಟ್ಟಿರತಕ್ಕ ಈ ಕಾರಣವನ್ನು ನಾವು ಒಪ್ಪಬಹುದೇ ? ಈ ರೀತಿಯಾಗಿ ಮಂತ್ರಿ ಮಂಡಲವನ್ನು ದೊಡ್ಡದು ಮಾಡಿ ರಾಜ್ಯ ಸರ್ಕಾರದ ಬೊಕ್ಕಸದ ಮೇಲೆ ಹೊರೆಯನ್ನು ಹೇರತಕ್ಕದ್ದು. ನೀತಿ ಪಾಠವನ್ನು ಹೇಳತಕ್ಕವರು ಮಾಡುವುದು ನ್ಯಾಯವೇ ? ಈ ಮಂತ್ರಿಮಂಡಲವನ್ನು ಎಷ್ಟು ಜಾಸ್ತಿ ಮಾಡುತ್ತಾರೆಂದು ಇನ್ನೂ ಗೊತ್ತಾಗಿಲ್ಲ. ಇದನ್ನು ಹಿಂದಿನ ಮಂತ್ರಿಮಂಡಲಕ್ಕೆ ಹೋಲಿಸಿದರೆ ಒಬ್ಬರೇ ಒಬ್ಬ ಮಂತ್ರಿಯವರು ಜಾಸ್ತಿಯೆಂದು ಕಾಣುತ್ತದೆ. ಇವರು ಇನ್ನು ಎಷ್ಟು ಜನರನ್ನು ತೆಗೆದುಕೊಳ್ಳುತ್ತಾರೆನ್ನುವುದು ಇರುವಂಥ ಪರಿಸ್ಥಿತಿಯ ಮೇಲೆ ನಿಂತಿರುತ್ತದೆ. ಈ ವಿಷಯ ತಮಗೂ ಕೂಡ ಗೊತ್ತಿದೆ. ಈ ಪರಿಸ್ಥಿತಿಯನ್ನು ಅವರು ತಿಳಿದುಕೊಂಡೇ ನಮ್ಮ ಪಕ್ಷದವರನ್ನು ಸುಮಾರು ೮–೧೦ ಜನರನ್ನು ಮಂತ್ರಿಗಳನ್ನಾಗಿ ಮಾಡಿಕೊಂಡರು. ಇದು ತಮ್ಮ ರಾಜಕೀಯ ಅಲ್ಲದೆ ಏನು ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಶ್ನೆ ಮಾಡಬೇಕಾಗಿದೆ. ಇವರು ಕ್ರಾಂತಿರಂಗದಲ್ಲಿ ಇದ್ದರೆ ತಮ್ಮನ್ನು ವಿರೋಧ ಮಾಡುತ್ತಾರೆಂದು ಸುಮಾರು ಜನರನ್ನು ಮಂತ್ರಿಗಳನ್ನಾಗಿ ಮಾಡಿದರು. ಇದು ಇಲ್ಲದೇ ಹೋದರೆ, ಇವರು ಯಾವ ಬೆದರಿಕೆಯಿಂದ ಮಂತ್ರಿಮಂಡಲದ ಗಾತ್ರವನ್ನು ದೊಡ್ಡದು ಮಾಡುವುದಕ್ಕೆ ಹೊರಟರು ಎಂದು ಪ್ರಶ್ನೆ ಮಾಡಬೇಕಾಗಿದೆ. ಇದು ಸರ್ವತಃ ರಾಜ್ಯದ ಬೊಕ್ಕಸದ ಮೇಲೆ ಬರೆ ಎಳೆಯುತಕ್ಕ ಕೆಲಸ.

ಒಬ್ಬ ಮಾನ್ಯ ಸದಸ್ಯರು.—ಇದು ಮಾನ್ಯ ಸದಸ್ಯರ ಬಜೆಟ್ ಭಾಷಣವೇ ?

ಶ್ರೀ ಎಸ್. ಬಂಗಾರಪ್ಪ.—ನೀವು ಮಂತ್ರಿಮಂಡಲದ ಗಾತ್ರವನ್ನು ತಿಳಿದುಕೊಳ್ಳಬೇಕು. ಇವರಿಗೆ ಸಂಬಳ ಸಾರಿಗೆ ಇತ್ಯಾದಿ ಎಷ್ಟು ಸರ್ಕಾರದಿಂದ ಖರ್ಚಾಗುತ್ತದೆ ಎನ್ನುವುದನ್ನೂ ತಾವು ತಿಳಿದುಕೊಳ್ಳಬೇಕು.

ಇವರಿಗೆ ಅಪರೂಪವಾಗಿ ಸಿಕ್ಕಿರತಕ್ಕ ಪ್ರಸಂಗವನ್ನು ಸದುಪಯೋಗಪಡಿಸಿಕೊಳ್ಳತಕ್ಕ ವ್ಯಾಖ್ಯಾನವನ್ನು ಮಾಡಿದ್ದಾರೆ. ಮಂತ್ರಿಮಂಡಲವನ್ನು ಜಾಸ್ತಿ ಮಾಡುವುದಕ್ಕೆ ಕೊಟ್ಟಿರತಕ್ಕ ಕಾರಣಗಳ ಹಿನ್ನೆಲೆಯಲ್ಲಿ ಇವರ ಉದ್ದೇಶ ಏನು ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ. ರಾಜಕೀಯ ಕಾರಣಗಳನ್ನು ಬಿಟ್ಟರೆ ಮಂತ್ರಿಮಂಡಲವನ್ನು ಜಾಸ್ತಿ ಮಾಡುವುದಕ್ಕೆ ಬೇರೆ ಏನು ಕಾರಣವಿದೆ ಎನ್ನುವುದನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಏತಕ್ಕಾಗಿ ತಾವು ತಮ್ಮ ನೀತಿಯಿಂದ ದಾರಿ ಬಿಟ್ಟು ಹೋಗಿದ್ದೀರಿ ಎಂದು ಕೇಳುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ಬೇರೆಯವರಿಗೆ ಬುದ್ಧಿ ಹೇಳುವಂಥ ಹಕ್ಕು ನಿಮಗೆ ಉಳಿದಿದೆಯೋ ಎನ್ನುವುದನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ಈ ಆಯುವ್ಯಯ ಪತ್ರಕ್ಕಿಂತ ಮೊದಲು ಕರ್ನಾಟಕದ ಕ್ರಾಂತಿರಂಗದ ಪ್ರಣಾಳಿಕೆಯೇ ಎಂದು ಇಟ್ಟುಕೊಳ್ಳೋಣ, ಅದರಲ್ಲಿ ಯಾವ ಅಭಿವಚನವನ್ನು ನಾವು ಜನತೆಗೆ ಹೇಳಿದ್ದೆವು ? ಅದನ್ನು ಓದಿರತಕ್ಕವರು ಇಲ್ಲಿದ್ದಾರೆ. ಪ್ರಣಾಳಿಕೆಯಲ್ಲಿ ಹಳ್ಳಿಗಳ ಏಳಿಗೆಗೆ ಹೆಚ್ಚಿನ ಗಮನವನ್ನು ಕೊಡುವ ಮಾತು ಇದೆ. ಗ್ರಾಮೀಣ ಅಭಿವೃದ್ಧಿಗೆ ಹೊಸ ವಿಚಾರಧಾರೆಗಳನ್ನು

ರೂಪಿಸುತ್ತೇವೆಂದು ಹೇಳಿದ್ದೇವೆ. ಅದೂ ಕೂಡ ಹಿಂದಿನ ಸರ್ಕಾರಕ್ಕೆ ವಿಭಿನ್ನವಾಗಿರತಕ್ಕ ರೀತಿಯಲ್ಲಿ ಆಡಳಿತ ಚುಕ್ಕಾಣಿಯನ್ನು ಹಿಡಿಯತಕ್ಕವರು ಈ ಮಾತನ್ನು ಹೇಳಿರತಕ್ಕವರು. ಇವರು ಗ್ರಾಮೀಣ ಅಭಿವೃದ್ಧಿಗೆ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿದ್ದಾರೆ ಎನ್ನುವುದನ್ನು ನಾನು ಕೇಳುತ್ತಿದ್ದೇನೆ. ನಾನು ಬರೀ ಗ್ರಾಮಾಂತರ ಪ್ರದೇಶಗಳಿಗೆ ಮಾತ್ರ ನನ್ನ ಮಾತನ್ನು ಸೀಮಿತವಾಗಿಟ್ಟುಕೊಂಡು ಮಾತನಾಡುತ್ತಿದ್ದೇನೆ. ಪಟ್ಟಣಗಳಲ್ಲಿಯೂ ಇಂದು ಹೆಚ್ಚೆಟ್ಟು ಒತ್ತುತಕ್ಕ ಜನ ಇದ್ದಾರೆ. ನಿರುದ್ಯೋಗಿಗಳು ಇದ್ದಾರೆ. ಹಳ್ಳಿಗಳಲ್ಲಿಯೂ ವಿದ್ಯಾವಂತ ನಿರುದ್ಯೋಗಿಗಳು, ಅವಿದ್ಯಾವಂತ ನಿರುದ್ಯೋಗಿಗಳು ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ವರ್ಷಕ್ಕೆ ೭೫ ಸಾವಿರ ಜನರಿಗೆ ಉದ್ಯೋಗವನ್ನು ಕೊಡತಕ್ಕ ಮಾತನ್ನು ಹೇಳಿದ್ದಾರೆ. ನಾನು ಈ ಆಯವ್ಯಯ ಪತ್ರವನ್ನು ಓದಿದ್ದೇನೆ, ಇದರಲ್ಲಿ ೫–೧೦ ಜನರಿಗೆ ಕೆಲಸವನ್ನು ಕೊಡತಕ್ಕ ಒಂದು ವಿಚಾರಧಾರೆಯನ್ನು ಇಟ್ಟುಕೊಂಡಿದ್ದೇವೆನ್ನತಕ್ಕ ಮಾತನ್ನು ಹೇಳಿದ್ದಾರೆ. ಇದರಿಂದ ಇವರು ಜನತೆಗೆ ಕೊಟ್ಟಿರತಕ್ಕ ಮಾತು ಉಳಿಯುವುದಕ್ಕೆ ಕಾರಣವಾಯಿತೇ ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೆ. ಈಗ ಇರತಕ್ಕ ನಿರುದ್ಯೋಗ ಸಮಸ್ಯೆಯ ವಿಚಾರದಲ್ಲಿ ಯಾವುದೇ ಒಂದು ಹೊಸ ಧೋರಣೆಯನ್ನು ತಾವು ಹೇಳದೆ ಬರೀ ಎಂಪ್ಲಾಯ್‌ಮೆಂಟ್ ಆಫೀಸ್ ಬಗ್ಗೆ ಹೇಳಿದ್ದೀರಿ. ನಿರುದ್ಯೋಗಿಗಳಿಗೆ ಉದ್ಯೋಗ ಕೊಡಲಿಕ್ಕೆ ಇದರಲ್ಲಿ ಯಾವ ಒಂದು ವಾಕ್ಯವನ್ನೂ ಕೂಡ ಹೇಳಿಲ್ಲ. ತಮ್ಮ ಪ್ರಣಾಳಿಕೆ ಎಲ್ಲಿ ಹೊರಟು ಹೋಯಿತು ? ಒಂದು ಕಡೆ ಮಾತ್ರ ಉದ್ಯೋಗಾವಕಾಶಗಳ ಬಗ್ಗೆ ಬ್ಯಾಂಕ್‌ನವರ ಮಾತನ್ನು ಪಡೆಯತಕ್ಕ ವಿಚಾರಧಾರೆ ಮಾತ್ರ ಇದೆ. ಇದು ಅಧಿಕಾರ ಕೈಗೆ ಸಿಕ್ಕಮೇಲೆ ಆಡುವಂಥ ಮಾತೇ ? ಇವರ ಮನಸ್ಸಿನಲ್ಲಿ ಇದಕ್ಕೆ ಮೊದಲು ಏನು ಇತ್ತು ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆಯವ್ಯಯದಲ್ಲಿ ಪ್ರೊಡಕ್ಟೀವ್ ಎಂಪ್ಲಾಯ್‌ಮೆಂಟ್ ಈ ರೀತಿಯಾಗಿ ಇರತಕ್ಕ ಯೋಜನೆಯನ್ನು ತಯಾರು ಮಾಡುತ್ತೇವೆ ಎಂದು ಹೇಳಿದ್ದಾರೆ. ನಾನು ಇದನ್ನು ಓದಿದ ಮೇಲೆ ಯಾವ ರೀತಿಯಿಂದಲೂ ಇದರ ಬಗ್ಗೆ ಯೋಜನೆಯನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲ ಎಂದು ನನಗೆ ಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ. ಬರೀ ಅವರೊಂದಿಗೆ ಮಾತುಕತೆ ನಡೆಸಿದ್ದೇವೆ ಅವರು ಒಪ್ಪಿದ್ದಾರೆ ಏನು ಒಪ್ಪಿದ್ದಾರೆ ಅದನ್ನು ಸ್ಪಷ್ಟವಾಗಿ ಒಂದು ಯೋಜನೆಯ ಮುಖಾಂತರ ಇದರಲ್ಲಿ ನಮೂದು ಮಾಡಬೇಕಾಗಿತ್ತು. ರಾಜ್ಯದಲ್ಲಿರತಕ್ಕ ಯುವಕರ ಬಗ್ಗೆ, ಸ್ಟೈಪೆಂಡರಿ ಗ್ರಾಜುಯೇಟ್ಸ್ ಬಗ್ಗೆ ಇವರು ಯಾವ ಪ್ರಸ್ತಾಪವನ್ನೂ ಕೂಡ ಮಾಡಿಲ್ಲ. ಹಿಂದಿನ ಸರ್ಕಾರದ ಬಗ್ಗೆ ಇವರು ಭಾಷಣ ಮಾಡಿದ್ದು ಮಾಡಿದ್ದೆ. ನಿಮ್ಮ ಮೇಲೆ ನಂಬಿಕೆ ಇಟ್ಟು ಅಧಿಕಾರವನ್ನು ನಿಮ್ಮ ಕೈಗೆ ಕೊಟ್ಟಿದ್ದೇವೆ. ಆದರೆ ಸ್ಟೈಪೆಂಡರಿ ಗ್ರಾಜುಯೇಟ್ಸ್ ವಿಷಯ ಎಲ್ಲಿಗೆ ಹೋಯಿತು. ಇನ್ನು ಉಳಿದಿರತಕ್ಕ ನಾನ್ ಸ್ಟೈಪೆಂಡರೀಸ್, ಎಸ್.ಎಸ್.ಎಲ್.ಸಿ. ಓದಿರತಕ್ಕವರು ಹಳ್ಳಿಗಳಲ್ಲಿ ತುಂಬಿಬಿಟ್ಟಿದ್ದಾರೆ. ಈ ಜನರಿಗೆ ಇಂಥ ಒಂದೇ ಒಂದು ಅವಕಾಶವನ್ನು ನಮ್ಮ ಸರ್ಕಾರದವರು ಮಾಡಿದ್ದೇವೆಂದು ಹೇಳಿದ್ದೀರಾ ? ಆ ಒಂದು ಮಾತು ಇದರಲ್ಲಿದ್ದಿದ್ದರೆ ನಾನು ನಿಜವಾಗಿಯೂ ಸಂತೋಷ ಪಡುತ್ತಿದ್ದೆ. ಐದು ವರ್ಷದ ಅವಧಿಯಲ್ಲಿ ವ್ಯಾಪಕವಾದ ಕಾರ್ಯಕ್ರಮಗಳನ್ನು ನಿಜವಾಗಿಯೂ ಇಟ್ಟಿದ್ದರೆ ನಾನು ಮನಃಪೂರ್ವಕವಾಗಿ ಇವರು ಕೆಲಸ ಮಾಡಿದ್ದಾರೆ ಎಂದು ಅಭಿಪ್ರಾಯವನ್ನು ಇಟ್ಟುಕೊಳ್ಳುತ್ತಿದ್ದೆ. ಇದರಿಂದ ಸುಮಾರು ಜನರು ಇಟ್ಟಿರತಕ್ಕ ನಂಬಿಕೆಗೆ ನಾಳೆ ಮೋಸ ಬರಬಹುದು. ಅಧಿಕಾರ ಕೈಗೆ ಸಿಕ್ಕಮೇಲೆ ಆಡಳಿತ ನಡೆಸುವುದು ಸುಲಭ ಆದರೆ ಜನತೆಯ ಮುಂದೆ ನಿಂತು ಇಂಥ ಕೆಲಸ ಮಾಡಿದ್ದೇವೆ ಅಧಿಕಾರದ ಚುಕ್ಕಾಣಿಯನ್ನು ಹಿಡಿದು ಇಂಥ ಕೆಲಸ ಮಾಡಿದ್ದೇವೆಂದು ಹೇಳತಕ್ಕ ಮಾತು ಇದರಲ್ಲಿಲ್ಲ ಎಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೇ, ಈ ಕಾರ್ಮಿಕರ ಕಲ್ಯಾಣದ ಬಗ್ಗೆ ಕೂಡ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ ; ಸುಮಾರು ೪೦ ಲಕ್ಷ ಜನರಿಗೆ ಸೈಟು, ಮನೆಗಳನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಅದರಲ್ಲಿ ಹೇಳಿದ್ದಾರೆ. ತಾವೂ ಕೂಡ ಅದನ್ನು ನೋಡಿದ್ದೀರಿ ಎಂದು ನಾನು ಭಾವಿಸಿದ್ದೇನೆ. ಈ ಬಜೆಟ್ ಭಾಷಣದಲ್ಲಿ ಹೌಸಿಂಗ್ ಬೋರ್ಡ್ ಏನಿದೆ ಅದರ ಮುಖಾಂತರ ಕಟ್ಟಿಸತಕ್ಕಂಥ ಮನೆಗಳ ವಿಚಾರವನ್ನು ಒಂದು ಕಡೆ ಹೇಳಿದ್ದಾರೆ ಮತ್ತು ಹಾಗೆಯೇ ಈ ಜನತಾ ಮನೆಗಳನ್ನು ಕಟ್ಟಿಸತಕ್ಕಂಥ ವಿಚಾರದಲ್ಲಿ ಅಲ್ಲಿ ಬಾಕಿ ಕಟ್ಟದೇ ಉಳಿದಿರತಕ್ಕ ಮನೆಗಳಿಗೋಸ್ಕರ ಸುಮಾರು ೧೧.೮೫ ಕೋಟಿ ರೂಪಾಯಿಗಳನ್ನು ಮಾತ್ರ ಇದರಲ್ಲಿ ಇಟ್ಟಿದ್ದಾರೆ. ಹೊಸದಾಗಿ ಕಟ್ಟತಕ್ಕಂಥ ಮನೆಗಳಿಗೆ ಬಜೆಟ್‌ನಲ್ಲಿ ಏನೂ ಅವಕಾಶ ಮಾಡಿಲ್ಲ. ಹೊಸದಾಗಿ ಮನೆಗಳನ್ನು ಕಟ್ಟುವುದಕ್ಕೋಸ್ಕರವಾಗಿ ಈ ಬಜೆಟ್‌ನಲ್ಲಿ

ಹಣವನ್ನು ಇಟ್ಟಿಲ್ಲ. ಇಲ್ಲಿ ಹೊಸದಾಗಿ ಚುನಾವಣೆಯಲ್ಲಿ ಗೆದ್ದು ಬಂದಿರತಕ್ಕಂಥ ಮಾನ್ಯ ಸದಸ್ಯರುಗಳೂ ಇದ್ದಾರೆ. ಹಾಗೆಯೇ ಹಳೆಯ ಮಾನ್ಯ ಸದಸ್ಯರುಗಳೂ ಇದ್ದಾರೆ. ನಾವೆಲ್ಲಾ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋದಾಗ ಆ ಜನರಿಗೆ ನಾವು ಏನೆಂದು ಮಾತು ಕೊಡಬೇಕು ಎಂಬುದೇ ಗೊತ್ತಾಗದಾಗಿದೆ. ಹಿಂದೆ ಮಂಜೂರಾಗಿರತಕ್ಕಂಥ ಮನೆಗಳನ್ನು ಕಟ್ಟಿ ಪೂರ್ಣಗೊಳಿಸುವ ಬಗ್ಗೆ ೧೧.೮೫ ಕೋಟಿ ರೂಪಾಯಿಗಳನ್ನು ೧೯೮೩-೮೪ನೇ ಸಾಲಿಗೆ ಇಟ್ಟುಕೊಂಡಿದ್ದಾರೆಂದು ಇದರಲ್ಲಿ ಹೇಳಿದ್ದಾರೆಯೇ ಹೊರತು ಹೊಸದಾಗಿ ಮನೆಗಳನ್ನು ಕಟ್ಟಿಸತಕ್ಕಂಥ ವಿಚಾರದಲ್ಲಿ ಹೇಳಿಲ್ಲ. ಇದೊಂದು ಬಹಳ ಅಪಾಯಕಾರಿಯಾದ ಸೂಚನೆ. ಈ ಬಗ್ಗೆ ೨ ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆ ಎಂಬ ಬಗ್ಗೆ ಒಂದು ಆಶ್ವಾಸನೆ ಇದೆ. ಆದರೆ ಇದರಲ್ಲಿ ಅದಕ್ಕಾಗಿ ಹಣ ಎಲ್ಲಿದೆ? ಇದಕ್ಕಾಗಿ ಬಜೆಟ್‌ನಲ್ಲಿ ನಮೂದು ಮಾಡಿಲ್ಲ. ಅದಕ್ಕಾಗಿ ಬಜೆಟ್‌ನಲ್ಲಿ ಒಂದು ರೂಪಾಯಿಯನ್ನೂ ತೆಗೆದು ಇಟ್ಟಿಲ್ಲ; ಈ ೨ ಲಕ್ಷ ಮನೆಗಳನ್ನು ಕಟ್ಟುತ್ತೇವೆ ಎಂದು ಆಶ್ವಾಸನೆ ಕೊಟ್ಟಿರತಕ್ಕಂಥಾದ್ದು ಏನಿದೆ ಅದು ಒಂದು ದೊಡ್ಡ ಅಂಕಿಅಂಶ ಎಂಬುದು ತಮಗೆ ಗೊತ್ತಿದೆ. ಅದಕ್ಕಾಗಿ ಬಜೆಟಿನಲ್ಲಿ ಹಣವನ್ನು ಇಡದೇ ಆ ಗುರಿಯನ್ನು ಮುಟ್ಟತಕ್ಕಂಥ ಪರಿಸ್ಥಿತಿ ಹೇಗೆ ಎಂದು ನಾನು ಕೇಳುತ್ತಿದ್ದೇನೆ. ಈ ಬಗ್ಗೆ ನಾನು ಹಿಂದಿನ ಸರ್ಕಾರದವರ ಬಗ್ಗೆ ಮಾತನಾಡುತ್ತಾ ಇಲ್ಲ. ಹಿಂದಿನ ಸರ್ಕಾರದವರು ತಪ್ಪು ಮಾಡಿದ್ದಾರೆ.....

ಶ್ರೀ ಕೆ. ಜಿ. ಮಹೇಶ್ವರಪ್ಪ.—ನೀವು ಮಂತ್ರಿಗಳಾಗಿದ್ದಾಗ ಬಹಳ ಕಡಿಮೆ ಮನೆಗಳನ್ನು ಕಟ್ಟಿದ್ದೀರಿ. ಅದಕ್ಕೆ ಏನು ಹೇಳುತ್ತೀರಿ?

ಶ್ರೀ ಎಸ್. ಬಂಗಾರಪ್ಪ.—ನಾವು ಹಿಂದೆ ತಪ್ಪು ಮಾಡಿದ್ದೇವೆ ಎಂದೇ ಇಟ್ಟುಕೊಳ್ಳೋಣ. ಆದರೆ ನೀವು ಈಗ ಏನು ಮಾಡುತ್ತಿದ್ದೀರಿ ಎಂಬುದೇ ಈಗಿನ ಪ್ರಶ್ನೆ. ಇದು ಬಹಳ ಮುಖ್ಯವಾದ ಪ್ರಶ್ನೆ. ಹಿಂದೆ ಇದ್ದವರು ತಪ್ಪು ಮಾಡಿದ್ದಾರೆ ಎನ್ನುವ ಕಾರಣಕ್ಕಾಗಿಯೇ ಜನ ಅವರನ್ನು ಚುನಾವಣೆಯಲ್ಲಿ ಸೋಲಿಸಿ ನಿಮ್ಮನ್ನು ಅಧಿಕಾರಕ್ಕೆ ತಂದು ಕುಳ್ಳಿರಿಸಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಈಗ ನಾನು ಹೇಳತಕ್ಕಂಥ ವಿಚಾರ ತಮಗೂ ಗೊತ್ತಿದೆ. ಆದರೆ ಇದು ಮಾನ್ಯ ಮಹೇಶ್ವರಪ್ಪನವರಿಗೆ ಗೊತ್ತಿದೆಯೋ ಇಲ್ಲವೋ—ಅದು ನನಗೆ ಗೊತ್ತಿಲ್ಲ. ೧೯೭೨ನೇ ಇಸವಿಯಲ್ಲಿ ಜಾಗ ಇಲ್ಲದವರಿಗೆ ಜಾಗ ಕೊಡತಕ್ಕಂಥ ಕಾರ್ಯಕ್ರಮ ಪ್ರಾರಂಭವಾಯಿತು. ಅದು ಆಗಿ ಒಂದೆರಡು ವರ್ಷಗಳಲ್ಲಿಯೇ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಕಾರ್ಯಕ್ರಮ ಪ್ರಾರಂಭವಾಯಿತು. ಆಗಿನಿಂದಲೂ ಕೂಡ ಈ ಕಾರ್ಯಕ್ರಮ ಸತತವಾಗಿ ನಡೆದುಕೊಂಡು ಬಂದಿದೆ. ಆದರೆ ಈ ಸಾರಿಯ ಬಜೆಟ್ ಭಾಷಣದಲ್ಲಿ ಈ ಬಗ್ಗೆ ಹೊಸದಾಗಿ ಮನೆಗಳನ್ನು ಕಟ್ಟಿಸುತ್ತೇವೆ ಎನ್ನತಕ್ಕಂಥ ಮಾತು ಇಲ್ಲವಲ್ಲ ಎಂದು ಮಾನ್ಯ ಬಂಗಾರಪ್ಪನವರು ಹೇಳುವಾಗ ಮಾನ್ಯ ಮಹೇಶ್ವರಪ್ಪನವರಿಗೆ ಏತಕ್ಕೆ ಕೋಪ ಬಂದಿದೆಯೋ ನನಗಂತೂ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅವರಿಗೆ ಕೋಪ ಬಂದಿಲ್ಲ. ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಕೇಳತಕ್ಕಂಥ ವಿಚಾರ ಇಷ್ಟೆ; ಈ ಸದನದ ಸದಸ್ಯರು ಅವರವರ ಕ್ಷೇತ್ರಕ್ಕೆ ಹೋದಾಗ ಮತದಾರರು 'ಈ ಸರ್ಕಾರದವರು ಎಷ್ಟು ಜನತಾ ಮನೆಗಳನ್ನು ಕಟ್ಟಿಸುತ್ತಾರೆ' ಎಂದು ಕೇಳಿದರೆ ಅವರಿಗೆ ಯಾವ ರೀತಿ ಉತ್ತರ ಹೇಳಬೇಕು ಎನ್ನತಕ್ಕಂಥ ವಿಚಾರವನ್ನು ನಾನು ಕೇಳುತ್ತಿದ್ದೇನೆ. ಅವರು ನಮಗೆ ಅರ್ಜಿಗಳನ್ನು ಕೊಡುತ್ತಾರೆ; ಮನೆಗಳನ್ನು ಕೊಡಿಸಿ ಎಂದು ಕೇಳುತ್ತಾರೆ. ಅವರಿಗೆ ಮನೆಗಳನ್ನು ಕೊಡಿಸುತ್ತೇವೆ ಎಂದು ಹೇಳತಕ್ಕಂಥ ಧೈರ್ಯ ಯಾರಿಗೂ ಇಲ್ಲವಲ್ಲ ಎನ್ನುವುದಕ್ಕಾಗಿ ನಾನು ಹೇಳುತ್ತಿದ್ದೇನೆ. ಈ ಜನರನ್ನು ನಾವು ಹೇಗೆ ಒಪ್ಪಿಸಬೇಕು? ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಒಂದು ಕೆಲಸವಮಾಡಬೇಕು; ಏನೆಂದರೆ, ಈ ಜನತಾ ಮನೆಗಳಿಗೆ ಸಂಬಂಧಪಟ್ಟಹಾಗೆ ಹೊಸದಾಗಿ ಒಂದು ಸ್ಟೇಟ್‌ಮೆಂಟನ್ನು ಮಾಡಬೇಕು. ಇಲ್ಲದಿದ್ದರೆ ಯಾವುದೇ ಒಬ್ಬ ಎಂ.ಎಲ್.ಎ. ತನ್ನ ಮತದಾರರ ಕ್ಷೇತ್ರಕ್ಕೆ ಹೋಗಿ ಅವರಿಗೆ ಮುಖ ತೋರಿಸುವುದಕ್ಕಾಗುವುದಿಲ್ಲ. ಇದು ಸಣ್ಣ ವಿಚಾರ ಅಲ್ಲ; ಈ ಬಗ್ಗೆ ನಾನು ಸರ್ಕಾರದವರಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—'ನಾವು ಏತಕ್ಕೆ ಹೋಗಬೇಕು, ಇಲ್ಲೇ ಇದ್ದುಬಿಡುತ್ತೇವೆ' ಎಂದು ಕೆಲವರು ಹೇಳಿಬಿಡುತ್ತಾರೆ;

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳುತ್ತಾ ಇದ್ದೆ; ಏನೆಂದರೆ, ಈ ಜನತಾ ಮನೆಗಳನ್ನು ಬಡಜನರಿಗಾಗಿ ಕಟ್ಟತಕ್ಕಂಥಾದ್ದು ಇದೆ. ಕೂಲಿ ಮಾಡತಕ್ಕಂಥ ವರ್ಗ ಏನಿದೆ, ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದಿರತಕ್ಕಂಥ ವರ್ಗ ಏನಿದೆ ಅವರಿಗಾಗಿ ಕಟ್ಟತಕ್ಕಂಥ ಮನೆಗಳು ಇಂತಹ ಈ ಜನತಾ ಮನೆಗಳನ್ನು ಈ ಸಾಲಿನಲ್ಲಿ ಇಷ್ಟನ್ನು ಹೊಸದಾಗಿ ಕಟ್ಟುತ್ತೇವೆ ಎನ್ನತಕ್ಕಂಥ ಮಾತನ್ನು ಬಜೆಟ್‌ನಲ್ಲಿ ಎಲ್ಲೂ ಹೇಳದೇ ಇರುವುದರಿಂದ ನಮಗೆ ಈ ವಿಚಾರದಲ್ಲಿ ಈ ಸರ್ಕಾರದ ನೀತಿ ಏನು ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಏನೆಂದರೆ ಜನತೆಯ ಮತವನ್ನು ಪಡೆಯುವುದಕ್ಕೋಸ್ಕರ ಇವರು ಹೂಡಿರತಕ್ಕ ಸನ್ನಾಹ ಅಥವಾ ಸಂಚು ಎನ್ನತಕ್ಕಂಥಾದ್ದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಆದ್ದರಿಂದ ನಾವು ಇದರ ಜೊತೆಗೆ ಸೇರಿ ತಪ್ಪು ಮಾಡಿದ್ದೇವೆ ಎನ್ನುವ ಮಾತನ್ನು ಕೆಲವರು ಹೇಳಿದ್ದಾರೆ. ಹೀಗೆ ತಪ್ಪು ಮಾಡಿದ್ದನ್ನು ಮುಚ್ಚಿಡತಕ್ಕ ಸ್ವಭಾವ ನನಗಾಗಲೀ ಅಥವಾ ಕ್ರಾಂತಿರಂಗ ಪಕ್ಷಕ್ಕಾಗಲೀ ಇಲ್ಲ. ಇಂತಹ ಒಂದು ಪರಿಸ್ಥಿತಿಯಿಂದಾಗಿ ಮಾನ್ಯ ಮಹೇಶ್ವರಪ್ಪನವರು ಅವರ ಕ್ಷೇತ್ರಕ್ಕೆ ಹೋದಾಗ ಈ ಜನತಾ ಮನೆಗಳ ವಿಚಾರದಲ್ಲಿ ಹಳ್ಳಿಗರಿಗೆ ಉತ್ತರ ಕೊಡುವುದೂ ಕೂಡ ಅವರಿಗೆ ಕಷ್ಟವಾಗುತ್ತದೆ ಎನ್ನತಕ್ಕಂಥ ಮಾತನ್ನು ಅವರಿಗೆ ಹೇಳುತ್ತಿದ್ದೇನೆ. ಈ ಕಾರ್ಮಿಕರ ವಿಚಾರದಲ್ಲಿ ಕೂಡ ಹಾಗೆಯೇ ಆಗಿದೆ. ಪ್ರೊಫೆಷನಲ್ ಟ್ಯಾಕ್ಸನ್ನು ತೆಗೆಯುತ್ತೇವೆ ಎಂದು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ ವೃತ್ತಿ ತೆರಿಗೆಯ ಬಗ್ಗೆ ಸರ್ಕಾರದವರು ಈ ಬಜೆಟ್‌ನಲ್ಲಿ ಕೂಡ ಪ್ರಸ್ತಾಪ ಮಾಡಿದ್ದಾರೆ. ಈಗ ಮುನಿಸಿಪಾಲಿಟಿಗಳಿಗೆ ಮತ್ತೊಂದು ಚುನಾವಣೆಯನ್ನು ನಡೆಸುತ್ತಿದ್ದೇವೆ; ಅಲ್ಲಿ ಸಂಪನ್ಮೂಲಗಳ ಕೊರತೆಯಾಗಿದೆ; ಚುನಾವಣೆಗಳ ನಂತರ ಈ ವೃತ್ತಿ ತೆರಿಗೆಯನ್ನು ರದ್ದು ಮಾಡಬೇಕೇ ಅಥವಾ ಹಾಗೆಯೇ ಬಿಡಬೇಕೇ ಎಂಬ ಬಗ್ಗೆ ಅವರೊಡನೆ ಯೋಚನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಮುನಿಸಿಪಾಲಿಟಿಯವರನ್ನು ಕೇಳಿದರೆ ಅವರು ಏನು ಹೇಳುತ್ತಿದ್ದಾರೆ ಎಂದರೆ, ಈಗಾಗಲೇ ಆಕ್ಟ್ರಾಯ್ ರದ್ದಾಗಿರುವುದರಿಂದ ಅದರಿಂದ ಬರುತ್ತಿದ್ದಂತಹ ಹಣ ನಿಂತುಹೋಗಿದೆ; ನಮ್ಮಲ್ಲಿ ಹಣ ಇಲ್ಲದೇ ಇರುವುದ ರಿಂದ ಮುನಿಸಿಪಾಲಿಟಿಯ ಬಾಗಿಲನ್ನು ಮುಚ್ಚುವ ಸ್ಥಿತಿಗೆ ಬಂದಿದ್ದೇವೆ; ಹಣ ಇಲ್ಲ ಎಂದರೆ ರೋಡ್ ರಿಪೇರಿ ಹೇಗೆ ಮಾಡಿಸಬೇಕು, ನಲ್ಲಿ ಹೇಗೆ ಹಾಕಿಸಬೇಕು, ಬೀದಿ ದೀಪ ಹೇಗೆ ಹಾಕಿಸಬೇಕು? ಎಂದು ಕೇಳುತ್ತಿದ್ದಾರೆ ಅದಕ್ಕೋಸ್ಕರ ಈ ವೃತ್ತಿ ತೆರಿಗೆ ಇರಲಿ ಎಂದು ಅವರು ಹೇಳುತ್ತಿದ್ದಾರೆ. ಅವರು ಏನೇ ಹೇಳಿದರೂ ಕೂಡ ಸರ್ಕಾರದವರಿಗೆ ಈ ಬಗ್ಗೆ ಸರ್ಕಾರದ ನೀತಿ ಏನು ಎಂಬ ಬಗ್ಗೆ ಸ್ಪಷ್ಟಪಡಿಸತಕ್ಕಂಥ ಒಂದು ಸ್ಥೈರ್ಯ ಮನೋಭಾವನೆ ಇರಬೇಕಾಗಿತ್ತು ಎಂಬುದೇ ನನ್ನ ಅಭಿಪ್ರಾಯ. ಈ ವೃತ್ತಿ ತೆರಿಗೆಯನ್ನು ತೆಗೆಯುವುದಕ್ಕೂ ಸಾಧ್ಯವಿಲ್ಲ, ಅದನ್ನು ಹಾಗೆಯೇ ಬಿಡುವುದಕ್ಕೂ ಸಾಧ್ಯವಿಲ್ಲ ಎನ್ನತಕ್ಕಂಥ ಪರಿಸ್ಥಿತಿಯಲ್ಲಿದ್ದಾರೆ. ಸರ್ಕಾರಕ್ಕೆ ಈ ಬಗ್ಗೆ ಸ್ಥೈರ್ಯ ಸಾಲದು. ಈ ಬಗ್ಗೆ ಸರ್ಕಾರದವರು ಒಂದು ಸ್ಪಷ್ಟ ಅಭಿಪ್ರಾಯವನ್ನು ಈ ಸದನದಲ್ಲಿ ನಿರೂಪಣೆ ಮಾಡಬೇಕು ಎಂದು ನಾನು ಹೇಳುತ್ತಿದ್ದೇನೆ. ಇನ್ನೊಂದು ವಿಚಾರ ಏನಿದೆ ಎಂದರೆ, ರೈತರ ಬಗ್ಗೆ ಕಳಕಳಿ ಇರತಕ್ಕಂಥ ವಿಚಾರ. ನಮ್ಮ ಈ ಸದನದಲ್ಲಿ ಮಂಡ್ಯ ಜಿಲ್ಲೆಯ ಶಾಸಕರೂ ಇದ್ದಾರೆ. ನನಗೆ ಬಹಳ ಸಂತೋಷವಾಗಿದೆ. ನಾನೂ ಕೂಡ ಒಬ್ಬ ರೈತನ ಮಗನೆ. ರೈತರ ಬಗ್ಗೆ ಹೋರಾಟ ಮಾಡತಕ್ಕಂಥವರ ಬಗ್ಗೆ ನನಗೆ ಮಾತನಾಡುವುದಕ್ಕೆ ಸಂತೋಷವೆನಿಸುತ್ತದೆ.

ಶ್ರೀ ಕೆ.ಜಿ. ಮಹೇಶ್ವರಪ್ಪ.—ಈಗ ನೀವು ರೈತರ ಕೆಲಸ ಜಾಸ್ತಿ ಮಾಡುತ್ತಾ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ರೈತರ ಬಗ್ಗೆ ಕೆಲಸ ಮಾಡುತ್ತಿರುವುದಕ್ಕೆ 'ಬಂಗಾರಪ್ಪ ಕಮಿಟಿಯ' ವರದಿ ಕೊಟ್ಟಿದೇ ಸಾಕ್ಷಿ. ಇದಕ್ಕಿಂತ ಇನ್ನೇನು ಮಾಡಬೇಕೆಂಬುದನ್ನು ಮಾನ್ಯ ಮಹೇಶ್ವರಪ್ಪ ನವರೇ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಸ್ವತಃ ರೈತರು ಆಗಿಲ್ಲ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈ ಅಸೆಂಬ್ಲಿಯಲ್ಲಿ ನನ್ನನ್ನು ಖಾಯಂ ಆಗಿ ಇಟ್ಟುಕೊಂಡು ಬಿಟ್ಟಿದ್ದಾರೆ, ಅದಕ್ಕೆ ನಾನೇನು ಮಾಡಲಿ? ಈ ರೈತರ ವಿಚಾರದಲ್ಲಿ ಹೇಳಬೇಕು ಎಂದರೆ, ಅವರಿಗೆ ಅನ್ಯಾಯವಾಗಿದೆ, ಅವರ ಮೇಲೆ ಗೋಲೀಬಾರ್ ನಡೆಯಿತು ಎಂದು ಹೇಳಿಕೊಂಡು ನಾವೆಲ್ಲಾ ಜನತೆಯ ಮುಂದೆ ಚುನಾವಣೆಗೆ ಹೋದೆವು, ಮತ್ತು ಅದರಲ್ಲಿ ಗೆದ್ದು ಬಂದಿದ್ದೇವೆ. ಈ ವಿಷಯದ ಹಿನ್ನಲೆಯಲ್ಲಿ ಮತ್ತು ಅವರ ಬೇಡಿಕೆಯ ಹಿನ್ನಲೆಯಲ್ಲಿ ರೈತರ ಪ್ರತಿನಿಧಿಗಳು, ರೈತಸಂಘಗಳ ಅಧ್ಯಕ್ಷರುಗಳು ಬಂದು ಮಾತಂಕತೆ ಆಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ತಾವು ಈ ಜನತಾ ಮನೆಗಳಿಗೆ ಸರ್ಕಾರದವರು ದುಡ್ಡೇ ಇಟ್ಟಿಲ್ಲ ಎಂದು ಹೇಳುತ್ತಿದ್ದೀರಿ. ಅದಕ್ಕಾಗಿ ಹೇಳುತ್ತಿದ್ದೇನೆ, ತಾವು ದಯವಿಟ್ಟು ಬಜೆಟ್ ಭಾಷಣದ ೧೭ನೇ ಪುಟದಲ್ಲಿ ಫಸ್ಟ್ ಪ್ಯಾರಾ ನೋಡಿ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ನಾನೇ ಓದುತ್ತೇನೆ, ಅದರಲ್ಲಿ ಏನಿದೆ ಎಂದರೆ, ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ೧೯೮೩-೮೪ರಲ್ಲಿ ೧೧,೨೦೦ಕ್ಕೂ ಹೆಚ್ಚು ಮನೆಗಳ ನಿರ್ಮಾಣದ ಒಂದು ಬೃಹತ್ ಯೋಜನೆಯನ್ನು ಕೈಕೊಳ್ಳಲಿದೆ. ಈ ಮನೆಗಳ ಪೈಕಿ ೮೦೦೦ ಮನೆಗಳ ನಿರ್ಮಾಣಕ್ಕೆ ಹುಡ್ಕೊ ನೆರವು ದೊರೆಯಲಿದೆ. ೩೨೦೦ ಮನೆಗಳ ನಿರ್ಮಾಣಕ್ಕೆ ಇತರ ಮೂಲಗಳಿಂದ ಹಣ ಒದಗಿಸಲಾಗುವುದು. ಈ ಯೋಜನೆಯ ಒಟ್ಟು ವೆಚ್ಚ ಸುಮಾರು ೧೭ ಕೋಟಿ ರೂಪಾಯಿಗಳು. ಹುಡ್ಕೋದಿಂದ, ರಾಜ್ಯ ಸರ್ಕಾರವು ಸಾಲವನ್ನೆತ್ತುವ ಮೂಲಕ ಮತ್ತು ಮನೆಗಳ ಹಂಚಿಕೆ ಪಡೆದವರಿಂದ ಠೇವಣಿಯನ್ನು ಪಡೆಯುವ ಮೂಲಕ ಇದಕ್ಕೆ ಬೇಕಾಗುವ ಹಣವನ್ನು ದೊರಕಿಸಿಕೊಳ್ಳಲಾಗುವುದು. ಈ ಬೃಹತ್ ಯೋಜನೆಗೆ ಬೇಕಾಗುವ ಹಣದ ಸಂಗ್ರಹಣೆ ಸಲುವಾಗಿ ಮಂಡಲಿಯು ತನ್ನ ಸಾಲ ವಸೂಲಿ ಕಾರ್ಯಕ್ರಮವನ್ನು ತೀವ್ರಗೊಳಿಸಲು ಉದ್ದೇಶಿಸಿದೆ. ಹಾಗೆಯೇ ಜನತಾ ವಸತಿ ಯೋಜನೆಯ ಮೇರೆಗೆ ಈಗಾಗಲೇ ಮಂಜೂರಾಗಿರುವ ಗೃಹನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಆದ್ಯತೆ ನೀಡುತ್ತೇವೆ. ೧೯೮೩-೮೪ರ ಬಜೆಟ್ಟಿನಲ್ಲಿ ಈ ಉದ್ದೇಶಕ್ಕಾಗಿ ೧೧.೮೫ ಕೋಟಿ ರೂಪಾಯಿಗಳಿಗೆ ಏರ್ಪಾಟು ಮಾಡಲಾಗಿದೆ ಎಂದು ಇದೆ. ಇದು ಹೌಸಿಂಗ್ ಬೋರ್ಡ್‌ಗೆ ಸಂಬಂಧಪಟ್ಟಂತಹ ಪ್ರಶ್ನೆ. ಆದರೆ ಕೊನೆಯ ಸಾಲಿನಲ್ಲಿ ಈ ಜನತಾ ವಸತಿ ಯೋಜನೆಯ ಮೇರೆಗೆ ಮಂಜೂರಾಗಿರುವ ಗೃಹನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ೧೯೮೩-೮೪ರಲ್ಲಿ ಬಜೆಟ್‌ನಲ್ಲಿ ೧೧.೮೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಹೊಸ ಜನತಾ ಮನೆಗಳಿಗೆ ಹಣ ಎಲ್ಲಿ ಇಟ್ಟಿದ್ದಾರೆ? ಆ ವಾಕ್ಯ ಎಲ್ಲಿದೆ ಇಲ್ಲಿ?

ಶ್ರೀ ಎಂ. ರಘುಪತಿ.—ಹೋದಸಾರಿ ೧ ಲಕ್ಷ ೨೦ ಸಾವಿರ ಮನೆಗಳನ್ನು ಕಟ್ಟಿಸುತ್ತೇವೆಂದು ಘೋಷಣೆ ಮಾಡಿದರು. ಅದರಲ್ಲಿ ಕೇವಲ ೧೭ ಸಾವಿರ ಮನೆಗಳನ್ನು ಮಾತ್ರ ಪೂರೈಸಿದ್ದಾರೆ. ಅದರಲ್ಲಿ ಉಳಿದಿರತಕ್ಕಂಥಾದ್ದನ್ನು ಪೂರೈಸಿ ಮತ್ತೆ ನಾವು ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ರಘುಪತಿಯವರು ಹೇಳಿದ್ದು ಬಹಳ ಒಳ್ಳೆಯದಾಯಿತು. ಪ್ರಶ್ನೋತ್ತರ ಕಾಲದಲ್ಲಿ ಒಂದು ವಿಚಾರ ಬಂತು. ಇದೇ ಸದನದಲ್ಲಿ ಮಾನ್ಯ ಮಂತ್ರಿಯವರು ೨ ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಎಲ್ಲಿದೆ ಹಣ? ಅದಕ್ಕಾಗಿ ಈ ಬಜೆಟ್‌ನಲ್ಲಿ ಒಂದು ರೂಪಾಯಿಯನ್ನು ಕೂಡ ಇಟ್ಟಿಲ್ಲ.

ಶ್ರೀ ಎಂ. ರಘುಪತಿ.—ಇವೆ.

ಶ್ರೀ ಎಸ್. ಬಂಗಾರಪ್ಪ.—ಎಲ್ಲಿದೆ? ಹಣ ಇಲ್ಲದೇ ನೀವು ನಾವೂ ಏನೂ ಮಾಡುವುದಕ್ಕೆ ಆಗುವುದಿಲ್ಲ.

2–30 ಪಿ ಎಂ.

ಶ್ರೀ ಎಂ. ರಘುಪತಿ.—ಈಗ ತೆಗೆದುಕೊಂಡಿರತಕ್ಕ ಮನೆಗಳೆಲ್ಲಾ ಪೂರ್ತಿ ಆದತಕ್ಷಣ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ನನ್ನ ಪ್ರಶ್ನೆಯನ್ನು ಮಾನ್ಯಮಂತ್ರಿಗಳು ಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕು. ಹಿಂದೆ ಬಾಕಿ ಉಳಿದಿರುವ ಹಣ ತಾವು ಈಗ ಖರ್ಚುಮಾಡಿದ್ದು. ಹೊಸ ಮನೆಗಳಿಗೆ ಒಂದು ಲಕ್ಷ, ಎರಡು ಲಕ್ಷ ಕೊಡಬೇಕಾದರೆ ಈ ಭಾಷಣದಲ್ಲಿ ಬರಬೇಕಾಗಿತ್ತು. ಅದಲ್ಲದೇ ಹೋದರೆ, You will have no right even to spend a single rupee. ನಿಮಗೆ ಹಕ್ಕು ಬರುವುದಿಲ್ಲ. ಎರಡು ಬಡ್ಜೆಟ್ ಇಡುವುದಕ್ಕೆ ಕಾನ್‌ಸ್ಟಿಟ್ಯೂಷನ್ ಪ್ರಕಾರ ಸಾಧ್ಯವಿದೆಯೇ? ಇಲ್ಲ ಮಾನ್ಯ ಅಧ್ಯಕ್ಷರೆ, ನಾನು ರೈತರ ವಿಚಾರದಲ್ಲಿ ಮಾತನಾಡುತ್ತಿದ್ದೆ. ರೈತ ಸಂಘದ ಪ್ರತಿನಿಧಿಗಳು, ಅಧ್ಯಕ್ಷರು ಬಂದು ಮಾತನಾಡಿದರು, Mutual discussion is the best way in a democratic set up. I welcome it ಮಾತುಕತೆ ಮಾಡಿ ಸೂಕ್ತ ತೀರ್ಮಾನಕ್ಕೆ ಬರಬೇಕು. ರೈತರ ಪ್ರತಿನಿಧಿಗಳ ಜೊತೆ ಮಾತನಾಡಿ, ಮುಂದೆ ಸದನದಲ್ಲಿ ಆಯುವ್ಯಯ ಮಂಡನೆ

ಮಾಡುತ್ತೇವೆ, ಆ ಪತ್ರದಲ್ಲಿ ತೆಗೆದುಗೊಂಡ ತೀರ್ಮಾನದ ಬಗ್ಗೆ ನಮೂದು ಮಾಡುತ್ತೇವೆ, ಬಹಳಷ್ಟು ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿದರು. ನಾವು ಇದರಲ್ಲಿ ರೈತರಿಗೆ ಯಾವರೀತಿ ಸೌಲಭ್ಯಗಳನ್ನು ಸರ್ಕಾರದವರು ಕೊಟ್ಟಿದ್ದಾರೆಂದು ನೋಡಿದ್ದೇವೆ. ೯ ಕೋಟಿ ರೂಪಾಯಿಗಳ ಒಂದು ಐಟಂ. ಏಳೂವರೆ ಕೋಟಿ ರೂಪಾಯಿಗಳ ಒಂದು ಐಟಂ ೫ ಕೋಟಿ ರೂಪಾಯಿಗಳ, ೨ ಕೋಟಿ ರೂಪಾಯಿಗಳ ೨ ಕೋಟಿ ರೂಪಾಯಿಗಳ ೯೦ ಲಕ್ಷ ರೂಪಾಯಿ ಇದೆ ಒಟ್ಟು ೩೬ ಕೋಟಿ ರೂಪಾಯಿಗಳಾಗುತ್ತದೆ. ಉದಾಹರಣೆಗೆ ನಾನು ಇಲ್ಲಿ ಎರಡು ಸಾಲುಗಳನ್ನು ಓದುತ್ತೇನೆ.

> ‘ದೀರ್ಘಾವಧಿ, ಅಲ್ಪಾವಧಿ, ಮಧ್ಯಮಾವಧಿ ಮತ್ತು ಮಧ್ಯಮಾವಧಿ (ಪರಿವರ್ತನೀಯ) ಸಾಲದ ಪೈಕಿ ಇಡೀ ಅಸಲನ್ನು ೩೦–೬–೧೯೮೩ ಕ್ಕಿಂತ ಮುಂಚೆ' ಸಂದಾಯ ಮಾಡುವ ರೈತರಿಗೆ ೩೦-೬-೧೯೮೨ರ ವರೆಗೆ ಅಸಲಿನ ಮೇಲೆ ಬಾಕಿ ಇರುವ ಇಡೀ ಬಡ್ಡಿ ಮೊತ್ತಕ್ಕಷ್ಟೇ ಸೀಮಿತವಾದ ಸಬ್ಸಿಡಿ ನೀಡಿಕೆ – ೯ ಲಕ್ಷ ರೂಪಾಯಿ''.

ಜೂನ್ ೩೦ ಅಂದರೆ ಇದೇ ವರ್ಷ. ಹೀಗೆ ಅನುಬಂಧ ೧-೨-೩-೪ ಎಂದು ಬರುತ್ತದೆ. ಇದು ಕೆಲವು ಷರತ್ತುಗಳನ್ನು ಇಟ್ಟು ಕೊಟ್ಟಿರತಕ್ಕ ಸೌಲಭ್ಯಗಳು. ಮಾನ್ಯ ಅಧ್ಯಕ್ಷರೆ, ೩೦–೬–೧೯೮೩ ರೊಳಗೆ ಕರ್ನಾಟಕ ರಾಜ್ಯದ ರೈತ ಯಾರು ತನ್ನ ಅಸಲನ್ನು ಕಟ್ಟುತ್ತಾನೆ ಅವನಿಗೆ ಮಾತ್ರ ಈ ಸೌಲಭ್ಯ ಸಾಧ್ಯ. ಈ ಸದನದಲ್ಲಿ ಮಾನ್ಯ ಸದಸ್ಯರು ಯಾವುದೇ ಪಕ್ಷಕ್ಕೆ ಸೇರಿರಬಹುದು. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ೧೯ ಜಿಲ್ಲೆಗಳಲ್ಲಿ ೧೬ ಜಿಲ್ಲೆಗಳು ಬರಗಾಲದ ದವಡೆಗೆ ಸಿಕ್ಕಿವೆ ಎನ್ನುವ ಹೇಳಿಕೆ ಕೂಡ ಬಡ್ಜೆಟ್‌ನಲ್ಲಿದೆ. ಮಳೆ ಇಲ್ಲ ಬೀದರ್, ಗುಲ್ಬರ್ಗ ಕಡೆ ಕೆರೆ ತುಂಬುತ್ತಾ ಇಲ್ಲ, ಬಿಜಾಪುರದಲ್ಲಿಕೆರೆ ತುಂಬುತ್ತಾ ಇಲ್ಲ. ಜನ ಗುಳೇ ಕಟ್ಟಿಕೊಂಡು ಬೊಂಬಾಯಿ ಕಡೆಗೆ ಹೋಗಿದ್ದಾರೆ. ಗುಲ್ಬರ್ಗದಲ್ಲಿ ಜನ ಊರು ಬಿಟ್ಟು ಹೋಗಿದ್ದಾರೆ. ಅನೇಕ ಊರುಗಳಲ್ಲಿ ಜನಗಳೇ ಇಲ್ಲ. ನಾವು ಚುನಾವಣೆ ಸಮಯದಲ್ಲಿ ಮತ್ತು ಚುನಾವಣೆಗೆ ಮುಂಚೆ ಪ್ರವಾಸ ಮಾಡಿದಾಗ ನೋಡಿದ್ದೇವೆ. ಅನೇಕ ಜಿಲ್ಲೆಗಳಲ್ಲಿ ಜನ ಊರು ಬಿಟ್ಟು ಹೋಗಿದ್ದಾರೆ. ಸರ್ವೇಸಾಮಾನ್ಯವಾಗಿ ಜನತಾ ಸರ್ಕಾರ ಬಂದಮೇಲೆ ಬರಗಾಲ ಬಂತು ಎನ್ನುವಂಥ ಮಾತನ್ನು ನಾನು ಇಲ್ಲಿಆಡುತ್ತಾ ಇಲ್ಲ. ಇರತಕ್ಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ವಿಷಯವನ್ನು ಹೇಳುತ್ತಾ ಇದ್ದೇನೆ. ೨೦–೩೦–೪೦–೫೦–೧೦೦ ಎಕರೆ ಇರತಕ್ಕವರು ಇವತ್ತಿನ ದಿವಸ ಕೂಲಿ ಮಾಡುತ್ತಿದ್ದಾರೆ. ೧೯೭೨ರಲ್ಲಿ ಬರಗಾಲ ಬಂದಾಗ ೧೫೦ ಎಕರೆ ಇಟ್ಟುಕೊಂಡಿರತಕ್ಕವರು ಕೂಲಿ ಮಾಡುವುದಕ್ಕೆ ಬೆಂಗಳೂರಿಗೆ ಬಂದರು. ಆಗ ನಾನು ಸದನದ ನಿಯೋಗದಲ್ಲಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಆದ್ದರಿಂದ ಇಷ್ಟು ಎಕರೆ ಭೂಮಿಯನ್ನು ಹೊಂದಿದ್ದಾರೆನ್ನುವುದು ಮುಖ್ಯವಲ್ಲ. ೩೦–೬–೧೯೮೩ರ ಒಳಗೆ ಯಾರು ಅಸಲನ್ನು ಕಟ್ಟುತ್ತಾರೆ. ಜನರು ಬಾಂಬೆ ಕಡೆಗೆ ಹೊರಟು ಹೋಗಿದ್ದಾರೆ, ಅವರು ಅಸಲು ಕಟ್ಟುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ? ಕೃಷ್ಣಾ ಮೇಲ್ದಂಡೆ ಯೋಜನೆ, ನಾರಾಯಣಪುರ ಡ್ಯಾಂ ಆಲಮಟ್ಟಿ, ಕಾವೇರಿ ಬೇಸಿನ್‌ನಲ್ಲಿರತಕ್ಕವರು ಅಂದರೆ ಎಲ್ಲೆಲ್ಲಿ ನೀರಾವರಿ ಸೌಲಭ್ಯ ಪಡೆದಿದ್ದಾರೆ ಅಂತಹವರಿಂದ ವಸೂಲಾತಿಯನ್ನು ಕಡ್ಡಾಯವಾಗಿ ಮಾಡಲೇಬೇಕು, ಅದಕ್ಕೆ ಸಂಪೂರ್ಣವಾಗಿ ನಾನು ಬೆಂಬಲ ಕೊಡುತ್ತೇನೆ. ಪ್ರತಿ ವರ್ಷ ಬರಗಾಲದ ದವಡೆಗೆ ಸಿಕ್ಕಿರತಕ್ಕ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಚಿತ್ರದುರ್ಗ ಜಿಲ್ಲೆ, ಮಾನ್ಯ ರಂಗನಾಥ್‌ರವರ ಜಿಲ್ಲೆ ನ್ಯಾಷನಲ್ ಹೈವೇ ಬರತಕ್ಕಂಥಾದ್ದು, ಅಲ್ಲಿ ೮–೯ ವರ್ಷಗಳಿಂದ ಸತತವಾಗಿ ಬೆಳೆಗಳು ಒಣಗಿ ನಿಂತಿರತಕ್ಕ ಪರಿಸ್ಥಿತಿಯನ್ನು ನೋಡಿದ್ದೇವೆ, ತಮ್ಮ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಅನೇಕ ಭಾಗಗಳನ್ನು ನೋಡಿದ್ದೇನೆ, ಸತತವಾಗಿ ಬರಗಾಲದ ದವಡೆಗೆ ಸಿಕ್ಕಿನರಳುತ್ತಾ ಇರತಕ್ಕ ಪ್ರದೇಶಗಳಲ್ಲಿ ಇರತಕ್ಕ ರೈತರು ೩೦–೬–೧೯೮೩ ರೊಳಗೆ ಅಸಲನ್ನು ತುಂಬಿದರೆ ೯ ಕೋಟಿ ರೂಪಾಯಿ ಸಬ್ಸಿಡಿ ಕೊಡುತ್ತೇವೆ ಎನ್ನತಕ್ಕ ತಮ್ಮ ಮಾತನ್ನು ನೋಡಿದರೆ ಹಿಂದಿದ್ದ ಸರ್ಕಾರದವರು ರೈತರಿಗೆ ೮೦ ಕೋಟಿ ಚಿಲ್ಲರೆ ರೂಪಾಯಿಗಳ ಸಹಾಯವನ್ನು ಮಾಡುತ್ತೇವೆಂದು ಯಾವ ರೀತಿ ನಂಬಿಸಿದರೋ ಅದೇ ರೀತಿಯಲ್ಲಿ ಈ ನಿಮ್ಮ ಮಾತು ಹಿಂದಿನ ಸರ್ಕಾರದ ಮಾತನ್ನು ಪುನಃಪ್ರತಿಪಾದನೆ ಮಾಡಿದಂತಾಗಿದೆ. ೩೦–೬ ೧೯೮೩ರೊಳಗೆ ಅಸಲನ್ನು ಪಾವತಿ ಮಾಡತಕ್ಕವರು Not even 2 to5% ಎನ್ನುವುದನ್ನು ಸ್ಪಷ್ಟವಾಗಿ ನಾವು ಇಟ್ಟುಕೊಳ್ಳಬೇಕು. ಹಿಂದಿನ ಸರ್ಕಾರದಲ್ಲಿ ಶ್ರೀಮಾನ್ ವೀರಪ್ಪ ಮೊಯಿಲಿಯವರು ಇದೇರೀತಿ ತಿಳಿಸಿದರು. ಇಷ್ಟನೇ ತಾರೀಖಿನೊಳಗೆ ಹಣ ಕೊಟ್ಟರೆ ಸೌಲಭ್ಯ ಕೊಡುತ್ತೇವೆಂದು ಹೇಳಿದಿರಿ ಆದರೆ ಆ ಸೌಲಭ್ಯವನ್ನು, ತಾವು ಕೊಡಲಿಕ್ಕೆ ಆಗುವುದಿಲ್ಲ. ಈಗಲೂ ಹಿಂದೆ ಇದ್ದ ಅದೇ ಪರಿಸ್ಥಿತಿ. ಆದ್ದರಿಂದ ರೈತರಿಗೆ ಸೌಲಭ್ಯಗಳನ್ನು ಕೊಟ್ಟಿದ್ದೇವೆ ಎಂದು ಹೇಳಿ, ಸಂಪೂರ್ಣವಾಗಿ ರೈತರನ್ನು ಮತ್ತೆ ನಂಬಿಸಿ ವಂಚನೆ ಮಾಡತಕ್ಕ ಮೋಸದ ಆಯವ್ಯಯಪತ್ರ ಇದು

ಎಂದು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಈ ರೀತಿಯಾದ ನಿಮ್ಮ ಆಯವ್ಯಯ ಪತ್ರವನ್ನು ಸದನದ ಒಪ್ಪಿಗೆಗಾಗಿ ಮಂಡನೆ ಮಾಡುತ್ತೀರಿ ಎಂದು ನಾನು ನಿರೀಕ್ಷಣೆ ಮಾಡಿರಲಿಲ್ಲ. ಆದರೆ ರೈತರ ಬೇಡಿಕೆ ಇದೆ. ಇಷ್ಟನೇಯ ತಾರೀಖಿನೊಳಗೆ ಅಸಲನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ರೈತ ಸಂಘದ ಪ್ರತಿನಿಧಿಗಳನ್ನು ಸಂಚಿಸಿ, ಈ ರೀತಿಯಾದ ಆಯವ್ಯಯ ಪತ್ರವನ್ನು ತಂದು ಕರ್ನಾಟಕ ರಾಜ್ಯದಲ್ಲಿ ಚಳುವಳಿ ಹೂಡಿರತಕ್ಕ ರೈತರನ್ನು ಯಾವ ರೀತಿ ನೀವು ಸಮಾಧಾನ ಮಾಡುತ್ತೀರಿ ?

ಇನ್ನು ಆಹಾರ ಧಾನ್ಯಗಳ ಬಗ್ಗೆ ಹೇಳಬೇಕಾಗಿದೆ ಭತ್ತ, ರಾಗಿ, ಜೋಳ, ನವಣೆ, ಸಜ್ಜೆ ಮುಂತಾದ ಧಾನ್ಯಗಳಿಗೆ ಬೆಲೆಯನ್ನು ನಿಗದಿ ಮಾಡುವ ಹಕ್ಕು ರಾಜ್ಯ ಸರ್ಕಾರಕ್ಕೆ ಬರುವುದಿಲ್ಲ, ಇದು ಅಗ್ರಿಕಲ್ಚರಲ್ ಪ್ರೈಸ್ ಫಿಕ್ಸೇಷನ್ ಕಮಿಷನ್‌ನವರಿಗೆ ಸಂಬಂಧಪಟ್ಟಿದ್ದು. ಕರ್ನಾಟಕ ಸರ್ಕಾರದ ನೀತಿ ಈ ರೀತಿ ಇದೆ ಎಂದು ಆಯವ್ಯಯ ಪತ್ರದಲ್ಲಿ ಮಂಡನೆ ಮಾಡಿ, ಎತ್ತಿನ ಗಾಡಿ ಬಾಡಿಗೆಯ ರೀತಿ ಯಲ್ಲಾದರೂ ಸಹಾಯ ಕೊಡುತ್ತೇವೆಂದು ಹೇಳಬೇಕಾಗಿತ್ತು. ಅದನ್ನೂ ಹೇಳಲಿಲ್ಲ. ರೈತರಿಗೆ ಸಂಬಂಧಪಟ್ಟ ಸಾಲದ ಮರುಪಾವತಿ ವಿಚಾರ ಮತ್ತು ಅವರ ಬೆಳೆಗೆ ನ್ಯಾಯವಾದ ಬೆಲೆ ದೊರಕಿಸಿ ಕೊಡತಕ್ಕ ಬಗ್ಗೆ, ಕೃಷಿ ಕಾರ್ಮಿಕರ ಬಗ್ಗೆ ಒಂದು ಮಾತೂ ಇದರಲ್ಲಿ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಕೃಷಿ ಕಾರ್ಮಿಕರಿಗೆ ಉದ್ಯೋಗವನ್ನು ಕೊಡುತ್ತೇವೆ. ಇಲ್ಲದೇ ಹೋದರೆ, ೨ ರೂಪಾಯಿಗಳನ್ನು ಪ್ರತಿ ದಿವಸ ಕೊಡುತ್ತೇವೆ ಎಂದು ಹೇಳಿದರು. ಆ ಎರಡು ರೂಪಾಯಿಗಳ ಬಗ್ಗೆ ಇದರಲ್ಲಿ ಪ್ರಸ್ತಾಪ ಇಲ್ಲ. ಜನತೆಗೆ ಕೊಟ್ಟಿರತಕ್ಕದ್ದು ಒಂದು ಮಾತು, ಸದನದ ಒಪ್ಪಿಗೆಗೆ ಇಟ್ಟಿರತಕ್ಕದ್ದು ಮತ್ತೊಂದು ವಿಷಯ.

ಹೀಗಾಗಿ ರೈತರಿಗೆ ಸಂಬಂಧಪಟ್ಟ ಯಾವ ಯಾವ ಸಮಸ್ಯೆಗಳಿಗೋಸ್ಕರವಾಗಿ ನೀವು ಸೌಲಭ್ಯ ವನ್ನು ಕೊಡತಕ್ಕ ವಿಚಾರ ಮಾಡಿದ್ದೀರಿ ಮತ್ತು ಇವತ್ತು ತಾವು ಏನು ಹೇಳಿದ್ದೀರಿ ? ನೀರು ಬಾರದೇ ಇರತಕ್ಕ ಬಾವಿಗಳಿಗೆ ಕೆಲವು ನಿಯಮಗಳನ್ನು ಸಡಿಲಗೊಳಿಸತಕ್ಕ ಕೆಲಸವನ್ನು ಮಾಡಿದ್ದೇವೆ ಎನ್ನತಕ್ಕ ವ್ಯಾಖ್ಯಾನವನ್ನು ಮಾಡಿದ್ದೀರಿ. ಇದನ್ನೇ ಹಿಂದಿನವರು ಸಹ ಹೇಳಿಕೊಂಡು ಬಂದು ಒಂದು ಪರಿಪಾಠ ಮಾಡಿಕೊಂಡು ಬಂದಿದ್ದರು. ಕರ್ನಾಟಕ ರೈತ ಸಂಘದವರು ನೀರು ಬಾರದೇ ಇರತಕ್ಕಂಥ ಬಾವಿಗಳಿಗೆ ಕೊಟ್ಟ ಸಾಲವನ್ನು ವಜಾ ಮಾಡುತ್ತೀರಿ, ಮನ್ನಾ ಮಾಡಬಹುದು ಎನ್ನುವ ಮಾತನ್ನು ಸರ್ಕಾರದವರು ಹೇಳಬಹುದೆಂದು ನಿರೀಕ್ಷಣೆ ಮಾಡಿದ್ದರು. ಈಗ ಕೋಲಾರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಮಳೆ ಬಂದಿಲ್ಲ. ಅದೇ ರೀತಿ ಕರ್ನಾಟಕ ರಾಜ್ಯದ ಅನೇಕ ಜಿಲ್ಲೆಗಳಲ್ಲಿಯು ಪರಿಸ್ಥಿತಿ ಹದಗೆಟ್ಟು ಹೋಗಿದೆ. ಇಂಥಾ ಸಂದರ್ಭದಲ್ಲಿ ರೈತರಿಗೆ ಸೌಲಭ್ಯಗಳನ್ನು ಕೊಡುವುದರ ಬಗ್ಗೆ ಎರಡು ಮಾತುಗಳನ್ನು ಆಡುವ ಬದಲು ನೀತಿ ನಿಯಮಗಳ ವಿಚಾರದ ಬಗ್ಗೆ ಮಾತ್ರ ಹೇಳಿದ್ದೀರಿ. ಆದುದರಿಂದ ಇದರ ಬಗ್ಗೆ ನಾವು ಸಂಪೂರ್ಣವಾಗಿ ವಿಚಾರ ಮಾಡಬೇಕಾಗಿದೆ ಇನ್ನು ಭೂಸುಧಾರಣೆಯ ಬಗ್ಗೆ ತಮಗೆ ಗೊತ್ತಿದೆ. ಶ್ರೀಮಾನ್ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ೧೯೭೪ರಿಂದ ಈಚೆಗೆ ಅದು ಜಾರಿಗೆ ಬಂತು ತಮಗೆ ಗೊತ್ತಿರುವ ಹಾಗೆ ನಾನೂ ಕೂಡ ಕಂದಾಯ ಸಚಿವನಾಗಿದ್ದ ಕಾಲದಲ್ಲಿ ಅನೇಕ ಕಾರ್ಯಕ್ರಮಗಳನು ಮಾಡಬೇಕೆಂದಿದ್ದೆ. ಕಾರಣಾಂತರದಿಂದ ಅದು ಸಾಧ್ಯವಾಗ ಲಿಲ್ಲ. ಗೇಣಿದಾರರಿಗೆ ಗೇಣಿಯನ್ನು ಕಂತುಗಳನ್ನು ಕೊಡುವ ಬಗ್ಗೆ ಮತ್ತು ಸಣ್ಣ ಹಿಡುವಳಿದಾರರಿಗೆ ಏಕ ಗಂಟಿನಲ್ಲಿ ಪರಿಹಾರವನ್ನು ಪಾವತಿ ಮಾಡಬೇಕು ಎನ್ನುವ ಬಗ್ಗೆ ಆಯವ್ಯಯ ಪತ್ರದಲ್ಲಿ ನೋಡಿದರೆ ಒಂದು ಮಾತೂ ಇಲ್ಲ. ನಿಮ್ಮ ಪ್ರಣಾಳಿಕೆಯಲ್ಲಿ ಮಾತ್ರ ಅದರ ಬಗೆ ಹೇಳಿದ್ದೀರಿ. ನಿಮ್ಮ ಚುನಾವಣಾ ಪ್ರಣಾಳಿಕೆಯ ೫ನೇ ಪುಟದಲ್ಲಿ ಈ ಬಗ್ಗೆ ಹೇಳಿದ್ದೀರಿ. ಉಳುವವನಿಂದ ಭೂಮಿ ಒಡೆತನದ ಯಾವ ಪಾಲೂ ಪಡೆಯುವುದಿಲ್ಲವೆಂದು ಹೇಳಿದ್ದೀರಿ ಅದನ್ನು ರದ್ದು ಮಾಡುತ್ತೇವೆಂದು ಹೇಳಿದ್ದೀರಿ, ಆದರೆ ಅದರ ಬಗ್ಗೆ ಆಯವ್ಯಯ ಪತ್ರದಲ್ಲಿ ಒಂದೂ ಮಾತೂ ಕೂಡ ಇಲ್ಲ. ಭೂ ಸುಧಾರಣೆಯ ಬಗ್ಗೆ ಒಂದು ಮಾತು ಕೂಡ ಇಲ್ಲ. ಮತ್ತೆ ಚುನಾವಣಾ ಪ್ರಣಾಳಿಕೆಯಲ್ಲಿ ಸೀಲಿಂಗ್ ಲಿಮಿಟ್ ಬಗ್ಗೆ ಇದೆ, ಇದರ ಬಗ್ಗೆ ಕೂಡ ಏನು ಅಭಿಪ್ರಾಯವಿದೆ ಎಂಬುದನ್ನು ಸಹ ಇಲ್ಲಿ ಸ್ಪಷ್ಟಪಡಿಸಿಲ್ಲ. ಇದು ಮತ್ತೊಂದು ವಿಚಾರ. ಉಳುವವನೇ ಹೊಲದ ಒಡೆಯನಾಗಬೇಕು ಎನ್ನತಕ್ಕ ಮಾತನ್ನು ಚುನಾವಣಾ ಭಾಷಣದಲ್ಲಿ ಮಾಡಿದ್ದೀರಿ. ನಾನು ಭಾಷಣ ಮಾಡಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ನಾನೇ ಹೆಚ್ಚಾಗಿ ತಿರುಗಾಡಿ ಭಾಷಣ ಮಾಡಿದವನು, ನಾನು ಹೆಚ್ಚಾಗಿ ಪ್ರವಾಸ ಮಾಡಿದ್ದೇನೆ. ಅದನ್ನು ತಾವೆಲ್ಲರೂ ಒಪ್ಪುತ್ತೀರೆಂದು ನಂಬಿದ್ದೇನೆ. ಆಗ ನಾವು ಅಲ್ಲಿ ಏನು ಹೇಳಿದ್ದೆವು ಎಂದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ, ನಮ್ಮ ಕೈಗೆ ಸರ್ಕಾರ ಬಂದರೆ ನಮ್ಮದೇ ಸರ್ಕಾರ ಎನ್ನತಕ್ಕ ಭಾವನೆ ಬಂದರೆ, ಯಾರಿಗೆ ೨, ೩, ೪ ಎಕರೆ ಇದೆ,

ಅರ್ಧ ಎಕರೆ ಇವೆ, ಅಂಥವನಿಗೆ ಈ ಕಂತನ್ನು ಕೊಡತಕ್ಕಂಥದರ ಬಗ್ಗೆ ನಾವು ವಿಚಾರ ಮಾಡುತ್ತೇವೆ ಎನ್ನತಕ್ಕ ಮಾತನ್ನು ಕೂಡ ಹೇಳಿದ್ದೆವು. ಆದರೆ ಅದರ ಬಗ್ಗೆಯೂ ಕೂಡ ಆಯವ್ಯಯ ಪತ್ರದಲ್ಲಿ ಒಂದು ಮಾತೂ ಕೂಡ ಪ್ರಸ್ತಾಪವಾಗಿಲ್ಲ. ಏತಕ್ಕೆಂದರೆ ಭೂ ಸುಧಾರಣೆಯನ್ನು ಜಾರಿಗೆ ಕೊಡತಕ್ಕದರ ಬಗ್ಗೆ ಹೃದಯ ಸಿರಿವಂತಿಕೆ ಇರಬೇಕಾಗುತ್ತದೆ, ಸಮಾಜದಲ್ಲಿ ಯಾರು ದುರ್ಬಲವರ್ಗದವರು ಇದ್ದಾರೆ, ಯಾರು ದಲಿತರು, ಹರಿಜನ ಗಿರಿಜನರು ಯಾರು ನಿರ್ಗತಿಕರು ಇದ್ದಾರೆ ಅಂಥವರನ್ನು ಮೇಲಕ್ಕೆ ಎತ್ತಬೇಕು ಎನ್ನತಕ್ಕ ಹೃದಯ ವಿಶಾಲತೆ ಇರಬೇಕು. ಆದರೆ ಚಿಕ್ಕ ಹೃದಯ ಇರತಕ್ಕಂಥವರ ಕೈಗೆ ಅಧಿಕಾರ ಸಿಕ್ಕರೆ ಅವರಿಂದ ಇಂಥವರನ್ನು ಮೇಲಕ್ಕೆ ಎತ್ತುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಮಾತನ್ನು ನಾನು ಸ್ಪಷ್ಟಪಡಿಸಬಯಸುತ್ತಿದ್ದೇನೆ. ಏತಕ್ಕೆಂದರೆ ಭೂ-ಸುಧಾರಣೆಯ ಬಗ್ಗೆ ಆಯವ್ಯಯ ಪತ್ರದಲ್ಲಿ ಪ್ರಸ್ತಾಪವನ್ನೇ ಮಾಡಿಲ್ಲ ಆದುದರಿಂದ ನಾವು ಇದರ ಬಗ್ಗೆ ಅಭಿಪ್ರಾಯ ಕೊಡಬೇಕಾಗಿಲ್ಲ. ಗೇಣಿದಾರರ ಕಂತಿನ ವಿಚಾರವನ್ನು ಪ್ರಸ್ತಾಪ ಮಾಡದೇ ಇರತಕ್ಕಂಥ ಆಯವ್ಯಯ ಪತ್ರ ಇದು ಇದಕ್ಕೆ ಏನು ಹೇಳುತ್ತೀರಿ ? ಆದುದರಿಂದ ಗೇಣಿದಾರರ ಬಗ್ಗೆ ನಿಮ್ಮ ಅಭಿಪ್ರಾಯವೇನಿದೆ ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತಿದೆ ನೀವು ಅವರ ಬಗ್ಗೆ ಒಂದು ಮಾತನ್ನು ಸಹ ಹೇಳಿಲ್ಲ. ಇನ್ನು ಸಣ್ಣಪುಟ್ಟ ಭೂ ಮಾಲೀಕರು ಏನು ಇದ್ದಾರೆ ಅವರಿಗೆ ಪರಿಹಾರಧನವನ್ನು ಏಕಗಂಟಿನಲ್ಲಿ ಕೊಡತಕ್ಕ ವಿಚಾರದಲ್ಲೂ ಸಹ ಪ್ರಣಾಳಿಕೆಯಲ್ಲಿ ಕೊಡತಕ್ಕದರ ಬಗ್ಗೆ ಹೇಳಿದ್ದೀರಿ ಆದರೆ ನಿಮ್ಮ ಆಯವ್ಯಯ ಪತ್ರದಲ್ಲಿ ಅದರ ಪ್ರಸ್ತಾಪವನ್ನೇ ಮಾಡಿಲ್ಲ, ಇವತ್ತು ವಿಧವೆಯರು, ಮತ್ತೊಬ್ಬರು ಯಾರು ಬಡವರು ಆಗಿರುತ್ತಾರೆ, ಯಾರು ಭೂಮಿಯ ಒಡೆತನವನ್ನು ಕಳೆದುಕೊಂಡಿರುತ್ತಾರೆ, ಅಂಥವರಿಗೆ ಏಕಗಂಟಿನಲ್ಲಿ ಹಣವನ್ನು ಕೊಟ್ಟರೆ ಅವರ ಮುಂದಿನ ಜೀವನಕ್ಕೆ ಒಂದು ಮಾರ್ಗವಾಗುತ್ತಿತ್ತು. ತಾವು ಅದರ ಬಗ್ಗೆ ಯಾವ ವಿಚಾರವನ್ನೂ ಪ್ರಸ್ತಾಪ ಮಾಡಿಲ್ಲ, ಇಲ್ಲಿ ತಮ್ಮ ನೀತಿ ಏನು ಎನ್ನತಕ್ಕದ್ದನ್ನು ಸಹ ಹೇಳಿಲ್ಲ. ಅಧ್ಯಕ್ಷರೇ, ಈ ಆಯವ್ಯಯ ಪತ್ರವನ್ನು ಈ ಸದನದಲ್ಲಿ ಮಂಡಿಸುವುದಕ್ಕಿಂತ ಮುಂಚಿತವಾಗಿ ಮಂತ್ರಿಮಂಡಲದಲ್ಲಿ ಇಟ್ಟು ಒಪ್ಪಿಗೆ ಪಡೆಯಬೇಕಾಗಿರುತ್ತದೆ. ಆದುದರಿಂದ ತಮ್ಮ ಮೂಲಕ ಮಂತ್ರಿಮಂಡಲದ ಎಲ್ಲಾ ಸದಸ್ಯರು ಅಲ್ಲಿ ಏನು ಮಾಡುತ್ತಿದ್ದರು ಎಂದು ನಾನು ಕೇಳಬಯಸುತ್ತೇನೆ. ನೀವು ಗೇಣಿದಾರರ ಬಗ್ಗೆ ಯಾವ ಮಾತನ್ನೂ ಪ್ರಸ್ತಾಪ ಮಾಡಿಲ್ಲ ನಾಳೆಯ ದಿವಸ ನೀವು ರೈತರನ್ನು ಹೇಗೆ ಎದಿರುಸುತ್ತೀರಿ ? ನಾಳೆಯ ದಿವಸ ಸ್ಥಳೀಯ ಸಂಸ್ಥೆಗಳ ಚುನಾವಣೆ ಆಗಬಹುದು, ಮತ್ತೆ ಯಾವುದೇ ಒಂದು ಚುನಾವಣೆ ಆಗಬಹುದು, ಯಾವ ಜನತೆಯ ಮುಂದೆ ನೀವು ಏನು ಭರವಸೆಯನ್ನು ನೀಡಿ ಬಂದಿದ್ದೀರೋ ಅದನ್ನು ಈಡೇರಿಸದೇ ಇರುವ ಬಗ್ಗೆ ಅವರು ಕೇಳಿದರೆ ಅದನ್ನು ಯಾವ ಧೈರ್ಯದಿಂದ ನಿಮಗೆ ಎದುರಿಸುವುದಕ್ಕೆ ಬರುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ ಇಷ್ಟು ಅಲ್ಲದೆ ಇನ್ನು ಬಳಕೆದಾರರ ವಿಚಾರದಲ್ಲಿ ಒಂದು ಮಾತು. ಇವತ್ತು ಬೆಲೆ ಏರಿಕೆಯ ಬಗ್ಗೆ ಒಂದು ಚಕಾರ ಶಬ್ದವನ್ನೂ ಆಡಿಲ್ಲ ಬಡ್ಜೆಟ್‌ನಲ್ಲಿ ಬೆಲೆಗಳ ಬಗ್ಗೆ ನೀತಿ ನಿರೂಪಣೆಯನ್ನು ಮಾಡಬೇಕಾಗಿರುತ್ತದೆ. ಕೃಷಿ ಕಾರ್ಮಿಕರಿದ್ದಾರೆ, ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕ ನೌಕರರಿದ್ದಾರೆ, ಸಮಾಜದ ಎಲ್ಲಾ ವರ್ಗದವರೂ ಇರುತ್ತಾರೆ ಅವರೆಲ್ಲರಿಗೂ ಅನುಕೂಲವಾಗುವ ಹಾಗೆ ಬೆಲೆಗಳ ಬಗ್ಗೆ ನಿಮ್ಮ ನೀತಿ ಏನು ಎನ್ನುವ ಬಗ್ಗೆ ಇದರಲ್ಲಿ ಹೇಳಬೇಕಾಗಿರುತ್ತದೆ. ಆದರೆ ಅದರ ಬಗ್ಗೆ ಕೂಡ ಹೇಳಿಲ್ಲ. ಇನ್ನು ಭ್ರಷ್ಟಾಚಾರ ನಿರ್ಮೂಲನ ಮಾಡುವ ಬಗ್ಗೆ ಏನಾದರೂ ಹೇಳಿದ್ದಾರೆಯೇ ಎಂದರೆ ಇಲ್ಲ. ಲೋಕಾಯುಕ್ತ ವಿಚಾರದ ಬಗ್ಗೆ ಪ್ರಸ್ತಾಪವಿದೆ ಅದನ್ನು ಬಿಟ್ಟರೆ ಭ್ರಷ್ಟಾಚಾರವನ್ನು ನಿಲ್ಲಿಸುವುದಕೋಸ್ಕರವಾಗಿ ಯಾವುದೇ ಒಂದು ವಿಧವಾದ ಕಾರ್ಯಕ್ರಮವನ್ನು ಹಾಕಿಕೊಂಡಿರುವ ಬಗ್ಗೆ ಚಕಾರ ಕೂಡ ಹೇಳಿಲ್ಲ. ಆದುದರಿಂದ ಈಗಿರತಕ್ಕ ಪರಿಸ್ಥಿತಿಗೆ ಏನು ಮಾಡುತ್ತೀರಿ ಎಂದು ಕೇಳುತ್ತೇನೆ. ನೀವು ಇದನ್ನು ನಿಲ್ಲಿಸುವುದಕ್ಕಾಗುವುದಿಲ್ಲ, ಇದು ಮುಖ್ಯ ಮಂತ್ರಿಗಳವರಿಂದ ಆಗುವುದಿಲ್ಲವೆಂದು ನನಗೆ ಗೊತ್ತಿದೆ. ಏತಕ್ಕೆಂದರೆ ಒಂದು ವಿಚಾರ ನಾನು ಪ್ರಸ್ತಾಪ ಮಾಡಿ ಹೇಳುವುದಾದರೆ ನಮ್ಮ ಮುಖ್ಯ ಮಂತ್ರಿಗಳವರು ಅಧಿಕಾರ ವಹಿಸಿ ಕೊಂಡಾದ ಮೇಲೆ ಒಂದು ಆರ್ಡರ್‌ನ್ನು ಮಾಡಿದ್ದಾರೆ ಅದು ಬಹಳ ಚೆನ್ನಾಗಿದೆ. ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಇದು ಯಾವುದಕ್ಕೂ ಅವಕಾಶ ಕೊಡದೇ, ಮಂತ್ರಿಗಳೇ ಇರಲಿ, ಸದಸ್ಯರೇ ಇರಲಿ, ಇಲ್ಲವೇ ಸಾರ್ವಜನಿಕರಿಂದ ಯಾವುದೇ ಒತ್ತಡ ಬೀಳಲಿ, ಯಾರು ಎಷ್ಟೇ ರೆಸಿಸ್ಟ್ ಮಾಡಲಿ ಅದಕ್ಕೆ ಮಣಿಯದೇ ಇರುವಂಥಾವರನ್ನು ಶಕ್ತಿವಂತ ಮುಖ್ಯಮಂತ್ರಿಗಳೆಂದು ಕರೆಯುತ್ತಾರೆ. ಮಾನ್ಯ ಅಧ್ಯಕ್ಷರೇ ನಮ್ಮ ಮುಖ್ಯಮಂತ್ರಿಗಳವರು ಅಧಿಕಾರ ವಹಿಸಿಕೊಂಡಿದ್ದು ಜನವರಿ ೧೧ನೇ ತಾರೀಖು ಎಂದು ಕಾಣುತ್ತದೆ. ಅಧಿಕಾರ ವಹಿಸಿಕೊಂಡ ೯ ದಿವಸಗಳ ನಂತರ ಒಂದು

ಆರ್ಡರ್ ಮಾಡಿದ್ದಾರೆ. ೧೯-೧-೧೯೮೩ರಂದು ಈ ಜಿ.ಓ. ಆಗಿದೆ. ಇದು ಶ್ರೀ ರಾಚಯ್ಯನವರ ಅಳಿಯ ಅವರಿಗೆ ಸಂಬಂಧಪಟ್ಟ ವಿಷಯ. ಡಾ॥ ಬಸವರಾಜ್ ಎನ್ನತಕ್ಕವರು He is a Professor in Paediatrics in Mysore Medical College... ನಿಮ್ಮಂಥ ರಾಜಕಾರಣಿಯವರ ಕೈಯಲ್ಲಿ ಹಣ ಕೊಟ್ಟರೆ, ರಾಜ್ಯದ ಜನತೆಯ ಗತಿ ಏನಾಗುತ್ತದೆ ಎನ್ನುವುದಕ್ಕೆ ಈ ಉದಾಹರಣೆ ಹೇಳುತ್ತಿದ್ದೇನೆ. ಇದು ಕಡಿಮೆ ಕಾಲದಲ್ಲಿ ಆಗಿರತಕ್ಕದ್ದು ಇನ್ನು ಜಾಸ್ತಿ ಕಾಲವಾದ ನಂತರ ಏನು ಆಗಬಹುದು ಎನ್ನುವ ಶಂಕೆ ಇದೆ ಅದಕ್ಕಾಗಿ ತಾವು ಉತ್ತರ ಕೊಡುವಾಗ ನಾನು ಪ್ರಸ್ತಾಪ ಮಾಡಿದ್ದಕ್ಕೆ ಉತ್ತರ ಕೊಡಿ ತಮ್ಮ ಉತ್ತರವನ್ನು ರಾಜ್ಯದ ಜನತೆಗೆ ತಾವು ಒಪ್ಪಿಸುವುದಾದರೆ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದುದರಿಂದ ಈ ರಾಜ್ಯದ ಜನತೆಯ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದೇನೆ. ಡಾ॥ ಬಸವರಾಜ್ ಇವರು ಸರ್ಕಾರದ ಸಹಾಯಕ್ಕಾಗಿ ೧೦-೧೧-೧೯೮೨ರಲ್ಲಿ ಅರ್ಜಿಯನ್ನು ಕೊಟ್ಟಿದ್ದಾರೆ. ಕೊಟ್ಟಿರಬಹುದು ಯಾವಾಗಲಾದರೂ ಕೊಟ್ಟಿರಬಹುದು. ಅವರಿಗೆ ಕ್ರಾನಿಕ್ ಲೀವರ್ ಡಿಸೀಸ್ ಇದೆಯಂತೆ. ಪಾಪ ಅವರು ಗುಣಮುಖರಾಗಲೀ ಅದರ ಬಗ್ಗೆ ನಾನು ಏನೂ ಮಾತನಾಡುತ್ತಿಲ್ಲ. ಆದರೆ I am questioning the propriety of the Government in passing this order...ಈ ವಿಷಯಕ್ಕೆ ಮಾತ್ರ ಸೀಮಿತಗೊಳಿಸುತ್ತಿದ್ದೇನೆ. ಈ ಡಾಕ್ಟರ್‌ರವರು ಬಹಳ ಒಳ್ಳೆಯ ಪರಿಣಿತರು ಇರಬಹುದು ಅವರು ಅತಿ ಶೀಘ್ರವಾಗಿ ಗುಣಮುಖರಾಗಲಿ ಅದರ ಬಗ್ಗೆ ನನ್ನದೇನು ಇಲ್ಲ. ಆದರೆ ಬಸವರಾಜ್‌ರವರು ೧೧-೧೧-೧೯೮೨ರಂದು ಅರ್ಜಿ ಕೊಟ್ಟರು. ಅವರು ಹಿಂದಿನ ಸರ್ಕಾರ ಇದ್ದಾಗ ಕೊಟ್ಟಿದ್ದರು. ಲೀವರ್ ಡೀಸಿಸ್‌ಗೋಸ್ಕರವಾಗಿ ನಾನು ಅಮೇರಿಕಾಕ್ಕೆ ಹೋಗಬೇಕಾಗಿದೆ. ಅದಕೋಸ್ಕರವಾಗಿ ಹಣದ ಸಹಾಯ ಮಾಡಿ ಎಂದು ಸರ್ಕಾರಕ್ಕೆ ಅರ್ಜಿ ಕಳುಹಿಸಿಕೊಟ್ಟಿದ್ದರು ಅದು ಹಾಗೆಯೇ ಇತ್ತು. ಈ ಸರ್ಕಾರ ಜನವರಿ ೧೦ನೇ ತಾರೀಖು ಅಸ್ತಿತ್ವಕ್ಕೆ ಬಂತು. ಬಂದಮೇಲೆ, ಅಷ್ಟರೊಳಗೆ ಅಲ್ಲಿರತಕ್ಕ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನವರು ಇವರನ್ನು ಯು.ಎಸ್.ಎ.ಗೆ ಕಳುಹಿಸಬೇಕೆಂದು ಬರೆದಿದ್ದಾರೆ. ಅಂದರೆ ಇಂಡಿಯಾ ದೇಶದಲ್ಲಿ ಲೀವರ್‌ನ್ನು ಟ್ರೀಟ್‌ಮೆಂಟ್ ಮಾಡತಕ್ಕದು ಎಲ್ಲಿಯೂ ಇಲ್ಲವೇ ? ಕರ್ನಾಟಕ ರಾಜ್ಯದಲ್ಲಿ ಇಲ್ಲದಿದ್ದರೆ ಹೋಗಲಿ ಭಾರತ ದೇಶದಲ್ಲಿ ಎಲ್ಲಿಯೂ ಇರಲಿಲ್ಲವೇ ? ಬೊಂಬಾಯಿನಲ್ಲಿರತಕ್ಕ ಜೆಸ್‌ಲೋಕ್ ಆಸ್ಪತ್ರೆ, ಫೇಮಸ್ ಆಸ್ಪತ್ರೆ ಅಲ್ಲಿಗಾದರೂ ಕಳುಹಿಸಬಹುದಾಗಿತ್ತು ಅದಕ್ಕೂ ವ್ಯವಸ್ಥೆ ಮಾಡಲಿಲ್ಲ. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟಿನವರು ಬರೆಯುವಾಗ ಅವರೂ ಕೂಡ ಬೇಜವಾಬ್ದಾರಿಯಿಂದ ರೆಕಮಂಡ್ ಮಾಡಿದ್ದಾರೆ. ಶ್ರೀಮಾನ್ ರಾಚಯ್ಯನವರು ವಿದ್ಯಾಇಲಾಖೆಯ ಮಂತ್ರಿಗಳಾದರು. ಇವರ ಖಾಸಾ ಅಳಿಯ ಡಾ॥ ಬಸವರಾಜ್ ಇದರಿಂದ ಅವರು ಸ್ಪಷ್ಟವಾಗಿ ಮುಖ್ಯಮಂತ್ರಿಗಳ ಮೇಲೆ ಪ್ರಭಾವ ಬೀರುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶ ಮಾಡತಕ್ಕ ಉದ್ದೇಶ ಇರಲಿಲ್ಲ, ಆದರೆ ಅವರು ಮಾತನಾಡತಕ್ಕ ಧಾಟಿ ನೋಡಿದರೆ ಅನವಶ್ಯಕವಾಗಿ ಒಬ್ಬರ ಮೇಲೆ ಆಪಾದನೆ ಆಗುವ ಹಾಗೆ ಕಾಣುತ್ತದೆ. ಬಂಗಾರಪ್ಪನವರಿಗೆ ಹೇಳಬಯಸುತ್ತೇನೆ; ಇದಕ್ಕಿಂತ ಡಿಸರ್ವಿಂಗ್ ಕೇಸು ನನ್ನ ದೃಷ್ಟಿಯಲ್ಲಿ ಬೇರೆ ಯಾವುದೂ ಇರಲಿಲ್ಲ, ರಾಚಯ್ಯನವರು ನನ್ನ ಹತ್ತಿರ ಇವರ ಬಗ್ಗೆ ಒಂದು ಶಬ್ದ ಕೂಡ ಹೇಳಿಲ್ಲ, ನಾನು ಆರ್ಡರ್ ಪಾಸ್ ಮಾಡುವವರೆಗೆ ರಾಚಯ್ಯನವರಿಗೆ ಇದು ಗೊತ್ತಿಲ್ಲ ಒಬ್ಬ ಅತ್ಯಂತ ಮೇಧಾವಿ ಅಧಿಕಾರಿ ಅವರು, ಅವರಿಗೆ ಇಲ್ಲಿ ಗುಣವಾಗದೆ ಇದ್ದಂತಹ ಒಂದು ಕಾಯಿಲೆ ಇತ್ತು. ಅವರು ಹರಿಜನರ ಪಂಗಡಕ್ಕೆ ಸೇರಿದವರು. ಅವರ ಬಗ್ಗೆ ವೈದ್ಯರ ಶಿಫಾರಸ್ಸು ಬರುತ್ತದೆ. ಬೆಂಗಳೂರಿನಲ್ಲಾಗಲೀ ಅಥವಾ ಕರ್ನಾಟಕದಲ್ಲಾಗಲೀ ಅದರ ಉಪಚಾರವಾಗುವ ಸಾಧ್ಯತೆ ಇಲ್ಲ. ಬಾಂಬೆಯ ಜೆಸ್ಲೋಕ್ ಆಸ್ಪತ್ರೆಯಲ್ಲಾಗಲೀ ಅಥವಾ ಆಲ್ ಇಂಡಿಯ ಮೆಡಿಕಲ್ ಇನ್ಸ್‌ಸ್ಟಿಟ್ಯೂಟ್‌ನಲ್ಲಿ ಆಗಬೇಕು. ಅಗತ್ಯ ಬಿದ್ದರೆ ವಿದೇಶಕ್ಕಾದರೂ ಹೋಗಬೇಕು ಎಂದು. ಅವರು ನಮ್ಮ ಸರ್ಕಾರೀ ನೌಕರರು, ಇಲ್ಲಿಯವರೆಗೆ ಅವರ ಮೇಲೆ ಯಾವುದೇ ರೀತಿಯ ಅಪ್ರಾಮಾಣಿಕತೆಯ ಮತ್ತೊಂದು ಆಕ್ಷೇಪಣೆಯ ದೂರು ಇಲ್ಲ. ಇದು ಒಂದೇ ಅಲ್ಲ, ಇದೇ ರೀತಿ ಸರ್ಕಾರೀ ನೌಕರರಿಗೆ ಸಹಾಯ ಮಾಡಿದಂತಹ ಉದಾಹರಣೆಗಳು ಹಿಂದೆ ಬೇಕಾದಷ್ಟು ಇವೆ, ಇದನ್ನು ಸ್ವಜನ ಪಕ್ಷಪಾತವೆಂದು ಯಾವ ರೀತಿ ಹೇಳುತ್ತೀರಿ ? ಅವರೇನು ನನ್ನ ಬಂಧುವೆ ? ಸಂಬಂಧಿಕರೇ ? ನಾನು ಪೂರಾ ಕೇಸ್ ನೋಡಿದ ಮೇಲೆ ನನ್ನ ಮನಸ್ಸಿಗೆ ಖಾತ್ರಿಯಾಯಿತು, ಇದಕ್ಕೆ ಸಹಾಯ ಮಾಡಬೇಕು ಇಲ್ಲದಿದ್ದರೆ ಅವರು ಉಳಿಯುವುದಿಲ್ಲ ಎಂದು. ಸತ್ಯವಾಗಿ ಹೇಳುತ್ತೇನೆ, ರಾಚಯ್ಯನವರಿಗೆ ಆರ್ಡರ್ ಪಾಸ್ ಮಾಡಿದ ಮೇಲೆ ಗೊತ್ತಾಯಿತೇ ವಿನಹ ಅದಕ್ಕೆ ಮೊದಲು ಗೊತ್ತಿರಲಿಲ್ಲ ಮತ್ತು ಅವರು ಈ ವಿಚಾರದಲ್ಲಿ ಒಂದು ಶಬ್ದ ಕೂಡ ನನಗೆ ಹೇಳಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದು ಮುಖ್ಯ ಮಂತ್ರಿಗಳ ಅಭಿಪ್ರಾಯ. ನಾನು ಈ ವಿಚಾರದಲ್ಲಿ ಸ್ಪಷ್ಟಪಡಿಸುತ್ತೇನೆ ಇಷ್ಟೊಂದು ನಯವಾಗಿ ತೂರಿಸುವುದಕ್ಕಾಗುವುದಿಲ್ಲ. ಈ ಆಜ್ಞೆಯಲ್ಲಿ ಜೆಸ್ಲೋಕ್ ಆಸ್ಪತ್ರೆಗೆ ವಿಮಾನದಲ್ಲಿ ಕಳುಹಿಸಿಕೊಡಬೇಕೆಂಬ ಮಾತನ್ನು ಹೇಳಿದ್ದಾರೆ. ಅವರು ಹರಿಜನರು, ಒಳ್ಳೆಯ ಅಧಿಕಾರಿಗಳು ಮೇಧಾವಿಗಳು ಇರಬಹುದು, ಆ ಬಗ್ಗೆ ನನ್ನ ವ್ಯಾಖ್ಯಾನ ಏನೂ ಇಲ್ಲ. ಆದರೆ ನೀವು ಆಜ್ಞೆ ಹೊರಡಿಸಿ ೪೦ ಸಾವಿರ ರೂಪಾಯಿಗಳನ್ನು ಮಂಜೂರ್ಮಾಡಿ ಅದನ್ನು ಟ್ಯಾಕ್ಸ್ ಪೇಯರ್ಸ್ ಮನಿಯಿಂದ ಕೊಡಬೇಕೆಂದು ಹೇಳಿದ್ದೀರೇ ವಿನಹ ಮುಖ್ಯ ಮಂತ್ರಿಗಳ ನಿಧಿಯಿಂದ ಕೊಡತಕ್ಕದ್ದು ಎಂದು ಹೇಳಿಲ್ಲ. ಇದನ್ನು ನಾನು ಕೇಳುತ್ತಿದ್ದೇನೆ. The Reference number is No. HFW 528 MSC 82 dated 18th January 1983. "The expenditure in this behalf should be debited to the Budget-280-Medical and Medical charge during the current financial year." ನಿಜವಾಗಿ ಒಬ್ಬ ಮೇಧಾವಿ ವೈದ್ಯ ಬಡವನಿದ್ದು ಅವನಿಗೆ ತೊಂದರೆ ಇದ್ದರೆ ಅದಕ್ಕೆ ಮುಖ್ಯ ಮಂತ್ರಿಗಳ ನಿಧಿಯಿಂದ ಕೊಡತಕ್ಕದ್ದು ನ್ಯಾಯ ಸಮ್ಮತವಾಗಿದೆ. ಆದರೆ ನೀವು ಜನ ಕೊಟ್ಟಿರತಕ್ಕ ತೆರಿಗೆ ಹಣ ಏನಿದೆ ಅದರ ಮೇಲೆ ಹೇಗೆ ಚಾರ್ಜ್ ಮಾಡಿದಿರಿ ಎಂಬುದು ನನ್ನ ಪ್ರಶ್ನೆ; ಮುಖ್ಯ ಮಂತ್ರಿಗಳ ನಿಧಿಯಿಂದ ಕೊಡಬಹುದಾಗಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ಮುಖ್ಯ ಮಂತ್ರಿಗಳ ನಿಧಿಯನ್ನು ಮಾನ್ಯ ಗುಂಡೂರಾಯರು ಹೋಗುವುದಕ್ಕೆ ಮೊದಲೇ ಖರ್ಚು ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನೀವು ಮತ್ತೊಂದು ಸಾರಿ ಮುಖ್ಯ ಮಂತ್ರಿಗಳ ನಿಧಿ ಸಂಗ್ರಹ ವಾಗುವವರೆಗೆ ತಡೆಯಬಹುದಾಗಿತ್ತು

ಶ್ರೀ ರಾಮಕೃಷ್ಣ ಹೆಗಡೆ.—ಖಾಯಿಲೆ ತಡೆಯುತ್ತದೆಯೆ ?

ಶ್ರೀ ಎಸ್. ಬಂಗಾರಪ್ಪ.—ನೀವು ಕೊಡುವ ಉತ್ತರ ನನಗೆ ಗೊತ್ತಿಲ್ಲವೆ ? ಖಾಯಿಲೆ ತಡೆಯುತ್ತದೆಯೋ ಎಂಬ ಪ್ರಶ್ನೆ ಕೇಳುತ್ತಿದ್ದೀರಿ. ಅದಕ್ಕೆ ನಾನು ಹೇಳುತ್ತೇನೆ. ಸಾರ್ವಜನಿಕರ ತೆರಿಗೆ ಹಣ ನಿಮ್ಮ ನಿಧಿ ಅಲ್ಲ. ೧೯-೧-೮೩ರಂದು ಆಜ್ಞೆ ಮಾಡಿದ ದಿವಸ ಮುಖ್ಯ ಮಂತ್ರಿಗಳ ನಿಧಿಯಲ್ಲಿ ಹಣ ಎಷ್ಟಿತ್ತು ಎಂಬುದನ್ನು ಸದನದ ಮುಂದೆ ತಾವು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಇಡಬೇಕೆಂದು ಒತ್ತಾಯ ಮಾಡುತ್ತೇನೆ. ಅವರನ್ನು ವಿಮಾನದಲ್ಲಿ ಕಳುಹಿಸುವುದರ ಜೊತೆಗೆ ಅವರೊಡನೆ ಮತ್ತೊಬ್ಬ ಅಟೆಂಡೆಂಟ್ ಕೂಡ ವಿಮಾನದಲ್ಲಿ ಹೋಗಬೇಕು ಈ ಆಜ್ಞೆಯನ್ನು ನೋಡಿದರೆ ಇದೆಲ್ಲಾ ಗೊತ್ತಾಗುತ್ತದೆ. ಇದು ಗವರ್ನಮೆಂಟ್ ಸರ್ವೆಂಟ್ ಅಟೆಂಡೆನ್ಸ್ ರೂಲ್ಸನ್ನು ರಿಲ್ಯಾಕ್ಸ್ ಮಾಡಿ ಕೊಟ್ಟಿರತಕ್ಕ ಆಜ್ಞೆ. ರಾಚಯ್ಯನವರು ನನಗೆ ಹೇಳಲಿಲ್ಲ ಎಂಬ ಮಾತನ್ನು ಆಡಿದರು. ನೀವು ಅಧಿಕಾರಕ್ಕೆ ಬಂದದ್ದು ಜನವರಿ ೧೦ರಂದು. ೧೭ಕ್ಕೆ ಅವರ ಮನವಿ ಬರುತ್ತದೆ. ೧೯ಕ್ಕೆ ನೀವು ಆಜ್ಞೆಮಾಡಿದ್ದೀರಿ. ಈ ಕಾಲದ ಅವಧಿಯನ್ನು ನೋಡಿದರೆ ನೀವು ಏನೇ ಹೇಳಬಹುದು. ಆದರೆ ಸತ್ಯವನ್ನು ಮರೆಮಾಚಿದ್ದೀರಿ ಎಂದು ನನ್ನ ಅಭಿಪ್ರಾಯ. ಅವರು ಅರ್ಜಿ ಸಲ್ಲಿಸಿರತಕ್ಕದ್ದು ೧೧-೧೧-೧೯೮೨ರಲ್ಲಿ. ಹಿಂದಿನ ಸರ್ಕಾರದವರು, ಹಣ ಮಂಜೂರ್ಮಾಡುವುದಕ್ಕೆ ಬೇಕಾದಷ್ಟು ಕಾಲ ಇದ್ದರೂ ಮಾಡಿರಲಿಲ್ಲ. ಡಾ. ಬಸವರಾಜ್‌ರವರು ಬಡವರೇನಲ್ಲ. ಅವರು ೪ ವರ್ಷಗಳ ಕಾಲ ಇರಾನ್‌ನಲ್ಲಿ ಕೆಲಸ ಮಾಡಿ ಲಕ್ಷಾಂತರ ರೂಪಾಯಿ ಸಂಪಾದಿಸಿದ್ದಾರೆಂದು ಗೊತ್ತಾಗಿದೆ. ಜೊತೆಗೆ ಅವರಿಗೆ ಮೈಸೂರಿನಲ್ಲಿ ಸುಮಾರು ೮-೧೦ ಲಕ್ಷ ರೂಪಾಯಿ ಬೆಲೆ ಬಾಳುವ ಮನೆ ಇದೆ. ಇದನ್ನು ನೋಡಿದರೆ ಅವರು ಬಡವರೇ, ಅವರಿಗೆ ಹಣ ಕೊಡಬಹುದೇ ಎಂಬ ಪ್ರಶ್ನೆ ಬರುತ್ತದೆ. ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಹೊಸದಾಗಿ ಕಟ್ಟಿರುವ ದೊಡ್ಡ ಮನೆಯನ್ನು ಹೊಂದಿರುವ ವ್ಯಕ್ತಿಗೆ ೪೦ ಸಾವಿರ ರೂಪಾಯಿಗಳನ್ನು ಕೊಡುವ ಅವಶ್ಯಕತೆ ಈ ಕರ್ನಾಟಕ ಸರ್ಕಾರಕ್ಕೆ ಏನಿತ್ತು ? ಇದನ್ನಾದರೂ ಮಾನ್ಯ ಮುಖ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡಿದ್ದರೆ ಒಳ್ಳೆಯದಾಗಿತ್ತು. ಇವತ್ತು ಅನೇಕ ಬಡವರು ತಮ್ಮ ತೊಂದರೆಗಳನ್ನು ತೋಡಿಕೊಂಡು ಸಾವಿರಾರು ಅರ್ಜಿಗಳನ್ನು ಕಳುಹಿಸಿದ್ದಾರೆ. ಹೀಗೆ ಕಳುಹಿಸಿರತಕ್ಕ ಎಷ್ಟು ಅರ್ಜಿಗಳನ್ನು ನೋಡಿದ್ದೀರಿ ? ನಮಗೆ ಕೈಯಿಲ್ಲ, ಕಾಲಿಲ್ಲ ಎಂದು ನಮ್ಮ ಮನೆಗೆ ಅನೇಕರು ಬಂದಿದ್ದರು.

ಒಬ್ಬರು ಮಾನ್ಯ ಸದಸ್ಯರು.—ಎಂಥೆಂಥವರು ಏನೇನೋ ಆಗುವಾಗ ಒಬ್ಬ ಹರಿಜನರು ಶ್ರೀಮಂತರಾಗಿದ್ದರೆ ಅದು ಹೆಮ್ಮೆಯ ವಿಚಾರ. ಅದೇನು ದೊಡ್ಡ ವಿಚಾರವಲ್ಲ.

ಛೇರ್ಮನ್.—ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಒಬ್ಬರು ಮಾನ್ಯ ಸದಸ್ಯರು.—ಮಾನ್ಯ ಬಂಗಾರಪ್ಪನವರು ಅಧಿಕಾರ ಬಿಟ್ಟು ಎಷ್ಟು ವರ್ಷವಾಯಿತು ? ಆದರೆ ಇವತ್ತು ಅವರು ಇರತಕ್ಕ ಸರ್ಕಾರೀ ಭವನಕ್ಕೆ ಕೊಡುತ್ತಿರತಕ್ಕ ಬಾಡಿಗೆ ಎಷ್ಟು ?

ಛೇರ್ಮನ್.—ನಿಮಗೆ ಅವಕಾಶ ಸಿಕ್ಕಿದಾಗ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ವಿಷಯ ಚರ್ಚೆಗೆ ಬಂದಾಗ ಹೇಳಿ, ಅವರು ಆಸ್ತಿ ಮಾಡಿಕೊಂಡಿರುವುದಕ್ಕೆ ವಿರೋಧವಿಲ್ಲ, ಕಾನೂನು ಮಿತಿಯಲ್ಲಿ ಮಾಡಿಕೊಳ್ಳಲಿ. ಆದರೆ ಆ ರೀತಿ ಆಸ್ತಿ ಇರುವವರಿಗೆ ೪೦ ಸಾವಿರ ರೂಪಾಯಿಗಳನ್ನು ಸರ್ಕಾರ ಕೊಡತಕ್ಕ ಅವಶ್ಯಕತೆ ಏನಿತ್ತು ? ನೀವು ಅವರ ಚರಿತ್ರೆಯನ್ನು ತಿಳಿದುಕೊಳ್ಳದೆ ಈ ರೀತಿ ಆಜ್ಞೆ ಮಾಡಿ ಸರ್ಕಾರದ ಬೊಕ್ಕಸದಿಂದ ಅದರಲ್ಲೂ ಟ್ಯಾಕ್ಸ್ ಪೇಯರ್ಸ್ ಮನಿಯಿಂದ ಹಣ ಕೊಟ್ಟಿದ್ದೀರಲ್ಲ ಇದರ ಔಚಿತ್ಯವೇನು ಎಂಬುದು ನನ್ನ ಪ್ರಶ್ನೆ. ತಾವು, ರಾಚಯ್ಯನವರು ನನಗೇನೂ ಹೇಳಲಿಲ್ಲ. ನಾನು ಆಜ್ಞೆ ಮಾಡಿದ್ದೇನೆಂದು ಹೇಳಿದಿರಿ. ಈ ಉತ್ತರವನ್ನು ಒಪ್ಪತಕ್ಕ ಜನರು ನಾವಲ್ಲ. ಈ ಅಭಿಪ್ರಾಯವನ್ನು ಬಿಡಬೇಕು. ಇವತ್ತು ೪೦ ಸಾವಿರ ರೂಪಾಯಿ ಕೊಟ್ಟರೆ ನಾಳೆ ೪೦ ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ. ಈ ರೀತಿಯಾಗಿ ಹಣ ಖರ್ಚು ಮಾಡುವುದನ್ನು ನಾವು ಒಪ್ಪುವುದಿಲ್ಲವೆಂದು ಹೇಳುತ್ತಿದ್ದೇನೆ ಈ ಆಯವ್ಯಯ ಪತ್ರದಲ್ಲಿ ತೆರಿಗೆ ಹಾಕಿರತಕ್ಕ ಪಟ್ಟಿ ಏನಿದೆ ಇದನ್ನು ಸುಮಾರಾಗಿ ಈ ಸದನದ ಸದಸ್ಯರು ಒಪ್ಪುವುದಿಲ್ಲವೆಂದು ಅಂದುಕೊಂಡಿದ್ದೇನೆ. ಸಿಮೆಂಟಿನ ಮೇಲಿನ ತೆರಿಗೆಯನ್ನು ೧೧ರಿಂದ ೧೫ ಪರ್ಸೆಂಟಿಗೆ ಏರಿಸಿದ್ದಾರೆ. ಇದೇ ರೀತಿ, ಟೀ, ಕಡಲೇಕಾಯಿ ಬೀಜದ ಮೇಲೆ ಹಾಕಿರತಕ್ಕ ತೆರಿಗೆಯಿಂದ ರೈತರಿಗೆ ಎಷ್ಟು ಪೆಟ್ಟು ಬಿದ್ದಿದೆ ಎಂಬುದು ರೈತರಾಗಿರತಕ್ಕ ತಮಗೆ ಗೊತ್ತಿದೆ. ಹತ್ತಿ ಮೇಲೆ ೩ ರಿಂದ ೪ ಪರ್ಸೆಂಟ್ ಅಂದರೆ ಒಂದು ಪರ್ಸೆಂಟ್ ಹಾಕಿದ್ದೇವೆ; ಅದೇನು ಜಾಸ್ತಿ ಅಲ್ಲವೆಂದು ಹೇಳಬಹುದು. ಆದರೆ ಆ ಭಾರವೆಲ್ಲ ಜನರ ಮೇಲೆ ಬೀಳುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಪುನಃ ಮಧ್ಯೆ ಪ್ರವೇಶಿಸಬೇಕಾಗಿದೆ. ಜನರ ಮೇಲೆ ತೆರಿಗೆ ಬೀಳುತ್ತದೆಯೋ ಇಲ್ಲವೋ ಎಂಬ ಬಗ್ಗೆ ವಿವರಣೆ ಕೊಡಬಯಸುತ್ತೇನೆ. ಇವತ್ತು ಎಣ್ಣೆ ಗಿರಣಿಗಳು ಯಾವುದೇ ರೀತಿಯಲ್ಲಿ ಕರ ಕೊಡುವುದಿಲ್ಲ. ಅವರಿಗೆ ಸಂಪೂರ್ಣವಾಗಿ ತೆರಿಗೆಯನ್ನು ಮಾಫಿ ಮಾಡಿದ್ದೇವೆ. ಎಣ್ಣೆ ಗಿರಣಿಗಳು ಏನು ಲಾಭ ಮಾಡುತ್ತವೆ ಆ ಲಾಭದಲ್ಲಿ ಸ್ವಲ್ಪವನ್ನಾದರೂ ಸರ್ಕಾರ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಕಡಲೆಕಾಯಿ ಮತ್ತು ಕಡಲೆಕಾಯಿ ಬೀಜದ ಮೇಲೆ ತೆರಿಗೆ ಹಾಕಿದ್ದೇವೆಯೇ ಹೊರತು ಬೇರೇನು ಅಲ್ಲ. ಇದರಿಂದ ರೈತರಿಗೇನು ಭಾರವಾಗುವುದಿಲ್ಲ ; ಅವರೇನು ಕೊಡಬೇಕಾದುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ರೈತರು ಕೂಡ ಬಿತ್ತನೆ ಮಾಡುವುದಕ್ಕೆ ಕಡಲೆಕಾಯಿ ಬೀಜ ತೆಗೆದುಕೊಳ್ಳುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.— ಎಷ್ಟು ತೆಗೆದುಕೊಳ್ಳುತ್ತಾರೆ ?

೩ ಗಂಟೆ

ಶ್ರೀ ಕೆ ಎಚ್. ರಂಗನಾಥ್.—ನನ್ನ ಟೌನಿನಿಂದ ರಾಯಚೂರು ಜಿಲ್ಲೆಗೆ ಬಹಳ ಪಾಲು ಕಡ್ಲೇಕಾಯಿ ಬೀಜ ಹೋಗುತ್ತದೆ. ಗುಜರಾತ್ ಮತ್ತು ತಮಿಳುನಾಡಿಗೆ ಹೋಗುತ್ತದೆ. ಹಿಂದಿನ ಕಾಲದ ತರಹ ಕಡ್ಲೇಕಾಯಿ ಬೀಜವನ್ನು ರೈತರೇ ತಮ್ಮ ಮನೆಯಲ್ಲಿ ಬಿತ್ತನೆಗೆ ಮಾಡಿಕೊಳ್ಳುವುದಿಲ್ಲ. ಅವರೂ ಕೊಂಡು ಕೊಳ್ಳುತ್ತಾರೆ. ಬೀಜ ತೆಗೆದುಕೊಂಡು ಡೀಕಾರ್ಡಿಕೇಟ್ ಮಾಡಿ ಪಾರಾಟ ಮಾಡುವವರಿದ್ದಾರೆ. ಸರ್ಕಾರದವರು ತೆರಿಗೆ ಹಾಕತಕ್ಕದ್ದು ಒಂದು ವಿಷಯ. ಒಂದು ಎಕರೆಗೆ ೪೦ ಕೆ. ಜಿ. ಬೀಜ ಬೇಕಾಗಿದ್ದರೆ ಡೀಕಾರ್ಡಿಕೇಟ್ ಮಾಡುವುದರಿಂದ ೭೦ ಕೆ. ಜಿ. ಬೀಜವನ್ನು ಬಳಸುತ್ತಿದ್ದಾರೆ. ಅಂದರೆ ೩೦ ಕೆ. ಜಿ. ನಷ್ಟವಾಗುತ್ತಿದೆ. ಸರಿಯಾಗಿ ಜರ್ಮಿನೇಟ್ ಆಗುವುದಿಲ್ಲ ಎಂದು ಹಾಗೆ ಮಾಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ವಿಚಾರಿಸಿ ಸರಿಯಾದ ಮಾಹಿತಿ ತರಿಸಿಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.— ಇಂಡೈರೆಕ್ಟಾಗಿ ರೈತರ ಮೇಲೆ ಬೀಳುತ್ತದೆ ಎಂಬುದು ನನ್ನ ಅಭಿಪ್ರಾಯ ಮಾನ್ಯ ರಂಗನಾಥ್‌ರವರು ಹೇಳಿದ್ದು ಸರಿ. ಫಿಲೇಚರ್ ರೇಷ್ಮೆ ಬಿಟ್ಟು ಮಿಲ್ ನೂಲುಗಳಿಗೆ ೩ ರಿಂದ ೪ ಪರ್ಸೆಂಟ್‌ಗೆ ತೆರಿಗೆ ಹಾಕಿದ್ದೀರಿ. ಜನಸಾಮಾನ್ಯರು ಉಪಯೋಗ ಮಾಡತಕ್ಕ ಅವಶ್ಯಕ ವಸ್ತುಗಳ ಮೇಲೆ ಕೂಡ ತೆರಿಗೆ ಹಾಕಿದ್ದೀರಿ. ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಗೆ ಮಾರಾಟ ತೆರಿಗೆ ಹಾಕಿರುವುದು ಲಂಚಕ್ಕೆ ದಾರಿಮಾಡಿಕೊಟ್ಟಿದೆ. ಟರ್ನ ಓವರ್ ಮೇಲೆ ಇಷ್ಟು ತೆರಿಗೆ ಕೊಡಬೇಕು ಎಂದು ನಿಗದಿ ಮಾಡಿದ್ದೀರಿ. ಆದರೂ ಅಧಿಕಾರಿಗಳು ಲಂಚದ ಹಾವಳಿ ನಡೆಸಲು ಇಲ್ಲಿ ಸಾಧ್ಯವಾಗುತ್ತದೆ. ನಾನು ಇಡೀ ಬಜೆಟ್ಟನ್ನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ ಆ ರೀತಿ ಮಾಡಿದರೆ ಅದು ದೊಡ್ಡ ರಾದ್ಧಾಂತ ಆಗಬಹುದು ಎಂದು ನನ್ನ ಅನಿಸಿಕೆ. ಕೆಲವು ವಸ್ತುಗಳ ಮೇಲೆ ತೆರಿಗೆಯನ್ನು ಕಡಿಮೆ ಮಾಡಿದ್ದೇವೆ ಎಂಬ ಮಾತನ್ನು ಹೇಳಿದ್ದೀರಿ. ಟ್ರ್ಯಾಕ್ಟರುಗಳು ಮತ್ತು ಬಿಡಿ ಭಾಗಗಳು ಇತ್ಯಾದಿಗಳ ಬಗ್ಗೆ ಆಯವ್ಯಯದಲ್ಲಿ ಹೇಳಿದ್ದೀರಿ. ಯಾಂತ್ರಿಕ ಉಪಕರಣಗಳು, ಟ್ರ್ಯಾಕ್ಟರುಗಳು ಇದನ್ನೆಲ್ಲಾ ಉಪಯೋಗಿ ಮಾಡಿ ಬೇಸಾಯ ಮಾಡಬಾರದು ಎಂಬ ಭಾವನೆ ನನ್ನದಲ್ಲ. ಅದಕ್ಕೆ ಉತ್ತೇಜನ ಕೊಡಬೇಕು. ಇದರಿಂದ ಶಕ್ತಿವಂತ ರೈತ ಉಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಜನಸಾಮಾನ್ಯರು ಉಪಯೋಗಿಸತಕ್ಕ ಉಪಕರಣಗಳ ಬಗ್ಗೆ ತೆರಿಗೆ ರಿಯಾಯಿತಿ ಕೊಟ್ಟಿದ್ದರೆ ಒಪ್ಪುತ್ತಿದ್ದೆ. ನಮ್ಮ ಕರ್ನಾಟಕದಲ್ಲಿರತಕ್ಕ ರೈತರು ವ್ಯವಸಾಯಕ್ಕೆ ಏನು ಮಾಡುತ್ತಿದ್ದಾರೆ ಎಂಬ ಬಗ್ಗೆ ನೋಡಬೇಕು. ಎಷ್ಟು ಜನ ರೈತರ ಮನೆಯಲ್ಲಿ ಎಷ್ಟು ಜೊತೆ ಎತ್ತುಗಳಿವೆ, ಎಷ್ಟು ನೇಗಿಲುಗಳಿವೆ, ಎಷ್ಟು ನೊಗಗಳಿವೆ, ಗಾಡಿ ಎಷ್ಟಿವೆ ಎಂಬ ಬಗ್ಗೆ ಅಂಕಿ ಅಂಶ ಇಲ್ಲ. ನಾನು ಕಂದಾಯ ಮತ್ತು ಕೃಷಿ ಮಂತ್ರಿಯಾಗಿದ್ದಾಗ ಈ ಬಗ್ಗೆ ಒಂದು ಪ್ರೊಫಾರ್ಮ ತಯಾರು ಮಾಡಿಸಿದ್ದೆ. ಆ ಮೇಲೆ ಕೆಲವು ಕಾರಣಗಳಿಂದ ನಾನು ರಾಜೀನಾಮೆ ಕೊಡಬೇಕಾಯಿತು. ಅದು ಬೇರೆ ವಿಚಾರ. ಆದರೆ ಇದು ಬಹಳ ಮುಖ್ಯವಾಗಿರತಕ್ಕ ವಿಷಯ ಎಂಬುದು ತಮಗೂ ಗೊತ್ತು. ಒಂದು ಕೇರಿಯಲ್ಲಿ ೨೦ ರೈತರ ಮನೆಗಳಿದ್ದರೆ ೧೦-೧೨ ಮನೆಗಳಲ್ಲಿ ಮಾತ್ರ ಎತ್ತು ಮತ್ತು ಗಾಡಿ ಇರುತ್ತದೆ. ಬೇರೆಯವರ ಹತ್ತಿರ ಇರುವುದಿಲ್ಲ. ಇಲ್ಲದೇ ಇರುವವರು ಬೇರೆಯವರ ಹತ್ತಿರ ಹೋಗಿ ತೆಗೆದುಕೊಂಡು ಬರುತ್ತಾರೆ. ಈ ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಡಬೇಕಾಗುತ್ತದೆ. ಇಂಥ ಮೂಲಭೂತ ವ್ಯವಸ್ಥೆಗೆ ಗಮನ ಕೊಡದಿದ್ದರೆ ಉತ್ಪಾದನೆಗೆ ಕೂಡ ಪೆಟ್ಟು ಬೀಳುತ್ತದೆ. ಯಂತ್ರೋಪಕರಣಗಳನ್ನು ಉಪಯೋಗ ಮಾಡದೇ ವ್ಯವಸಾಯ ಮಾಡತಕ್ಕ ರೈತರ ಪ್ರಮಾಣ ಜಾಸ್ತಿ ಇದೆ. ಈ ವರ್ಗದವರಿಗೆ ನೀವು ಏನು ಮಾಡಿದ್ದೀರಿ. ನೀರಾವರಿ ವಿಚಾರದಲ್ಲಿ ಹೇಳುವುದಾದರೆ, ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕ ಯೋಜನೆಗಳಿಗೆ ನಾವು ಹೆಚ್ಚಾಗಿ ಹಣವನ್ನು ತೆಗೆದಿಡತಕ್ಕ ಕೆಲಸವನ್ನು ಮಾಡಿದ್ದೇವೆ ಎಂಬ ಮಾತನ್ನು ಆಯ-ವ್ಯಯ ಭಾಷಣದಲ್ಲಿ ಹೇಳಿದ್ದೀರಿ. ಈಗಿನ ಕಾಸ್ಟ್ ಲೆಕ್ಕ ಹಾಕಿಕೊಳ್ಳುತ್ತಾ ಹೋದರೆ ನೀವು ಇಟ್ಟಿರುವ ಹಣ ಜಾಸ್ತಿಯಾಗುವುದಿಲ್ಲ. ಹೋದಸಾರಿ ಇದಕ್ಕೆ ೪೦ ಕೋಟಿ ಇಟ್ಟಿದ್ದರೆ ಈ ಸಾರಿ ೪೪ ಕೋಟಿ ಇಟ್ಟಿದ್ದೀರಿ. ಅಂದರೆ ಈ ಸಾರಿ ೪ ಕೋಟಿ ರೂಪಾಯಿಗಳು ಜಾಸ್ತಿಯಾಗಿವೆ. ಕಾವೇರಿ ಜಲಾನಯದ ಪ್ರದೇಶದ ಯೋಜನೆಗೆ ಇಟ್ಟಿರುವ ಹಣ ಅತೀ ಕಡಿಮೆಯಾಗಿರತಕ್ಕ ಹಣ. ಈ ರೀತಿ ಹಣ ಒದಗಿಸಿದರೆ ಈಗಿರತಕ್ಕ ಯೋಜನೆಗಳು ನಿಗದಿಪಡಿಸಿದ ಕಾಲಾವಧಿಯಲ್ಲಿ ಮುಗಿಯುವುದಿಲ್ಲ. ಈ ಬಗ್ಗೆ ವಿಚಾರಮಾಡಿ ಹೆಚ್ಚಿನ ಹಣವನ್ನು ತೆಗೆದಿಡದಿದ್ದರೆ ಈ ಯೋಜನೆಗಳನ್ನು ಮುಗಿಸುವುದಕ್ಕಾಗುವುದಿಲ್ಲ. ಪದೇಪದೇ ಬರಗಾಲಕ್ಕೆ ತುತ್ತಾಗುತ್ತಿರತಕ್ಕ ಪ್ರದೇಶವಾದ ಬೀದರ್ ಜಿಲ್ಲೆಯ ಕಾರಂಜ ಪ್ರಾಜೆಕ್ಟನ್ನು ನಾನು ಚುನಾವಣೆ ಸಮಯದಲ್ಲಿ ಹೋಗಿದ್ದಾಗ ನೋಡಿದ್ದೆ. ಆ ಸಮಯದಲ್ಲಿ ಅಧಿಕಾರಿಗಳ ಹತ್ತಿರವೂ ಮಾತನಾಡಿದೆ, ಅಧಿಕಾರಿಗಳು, ಸ್ವಾಮಿ ಹಣ ಇಲ್ಲದೇ ಇರುವುದರಿಂದ ನಮ್ಮ ಆಫೀಸೇ ಮುಚ್ಚಬೇಕಾಗುತ್ತದೆ ಎಂದು ಹೇಳಿದರು. ಆದ್ದರಿಂದ ಕಾರಂಜಿ ಪ್ರಾಜೆಕ್ಟ್ ಮುಂತಾದ ಕಾರ್ಯಕ್ರಮಗಳಿಗೆ ಪ್ರತ್ಯೇಕವಾಗಿ ಹಣವನ್ನು ಒದಗಿಸಬೇಕಾಗುತ್ತದೆ. ಅದೇರೀತಿ ಇನ್ನೂ ಬೇರೆಬೇರೆ ಯೋಜನೆಗಳಿವೆ. ಪದೇಪದೇ ಬರಗಾಲಕ್ಕೆ ತುತ್ತಾಗುತ್ತಿರತಕ್ಕ ಪ್ರದೇಶವಾದ ಬಿಜಾಪುರ, ಕೋಲಾರ, ಮಂಡ್ಯ ಜಿಲ್ಲೆಯ ನಾಗಮಂಗಲ, ಗುಲ್ಬರ್ಗ, ಮೈಸೂರು ಜಿಲ್ಲೆಯ ಗುಡ್ಲುಪೇಟೆ, ಚಾಮರಾಜನಗರ ಇಲ್ಲಿ ವಿಶೇಷವಾಗಿ ಯೋಜನೆಗಳಿಗೆ ಪ್ರತ್ಯೇಕವಾಗಿ ಹಣವನ್ನು ತೆಗೆದಿಡಬೇಕು, ಇಲ್ಲದಿದ್ದರೆ ಈ ಆಯವ್ಯಯ ಭಾಷಣ ಬರೀ ಭಾಷಣವಾಗುತ್ತದೆಯೇ ಹೊರತು ನಿಜವಾಗಿ ಸೌಲಭ್ಯ ಒದಗಿಸಿದಂತಾಗುವುದಿಲ್ಲ, ಹರಿಜನ ಗಿರಿಜನರು, ಅಲ್ಪ

ಸಂಖ್ಯಾತರು ಮತ್ತು ಹಿಂದುಳಿದವರ ಬಗ್ಗೆ ನೇಮಿಸಿದ್ದ ಮಂಡಲ್ ಆಯೋಗದ ವರದಿಯನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತೇವೆ ಎಂದು ಹೇಳಿದ್ದೀರಿ. ಮಂಡಲ್ ಆಯೋಗದ ವರದಿ ಬಗ್ಗೆ ತಮ್ಮ ಅಭಿಪ್ರಾಯ ಏನು ಎಂಬುದನ್ನು ತಿಳಿಸಿ ಎಂದು ಕೇಂದ್ರ ಸರ್ಕಾರದಿಂದ ಹಿಂದೆ ಎಲ್ಲಾ ರಾಜ್ಯಗಳಿಗೂ ಪತ್ರ ಬಂದಿತ್ತು. ಆ ಸಂದರ್ಭದಲ್ಲಿ ಹಿಂದಿನ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಮ್ಮ ಅಭಿಪ್ರಾಯವನ್ನು ತಿಳಿಸಿದರೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ತಿಳಿಸದಿದ್ದರೆ ಈಗ ಸರ್ಕಾರ ತನ್ನ ಅಭಿಪ್ರಾಯವನ್ನು ಕೂಡಲೇ ಕೇಂದ್ರಕ್ಕೆ ತಿಳಿಸಬೇಕು ಮತ್ತು ಏನು ತಿಳಿಸಿದ್ದೀರಿ ಎಂಬುದನ್ನು ಸದನದ ಮುಂದೆ ಇಡಬೇಕು. ಏಕೆಂದರೆ ಅದು ಸದನದ ಸ್ವತ್ತಾಗಿರಬೇಕು. ಜನತಾ ಸರ್ಕಾರ ಕೇಂದ್ರದಲ್ಲಿದ್ದಾಗ ಮಂಡಲ್ ಆಯೋಗವನ್ನು ನೀವೇ ನೇಮಕ ಮಾಡಿರತಕ್ಕವರು ಎಂಬುದು ನನಗೆ ಗೊತ್ತಿದೆ. ಅದು ಬಹಳ ಒಳ್ಳೆಯದು. ಅದೇ ರೀತಿ ಸೌಲಭ್ಯಗಳು ಅವರಿಗೆ ಸಿಗಬೇಕು. ಕೇಂದ್ರ ಸರ್ಕಾರದವರು ಈ ವಿಚಾರದಲ್ಲಿ ಬಹಳ ನಿಧಾನವಾಗಿ ಹೋಗತಕ್ಕ ನೀತಿಯನ್ನು ಅನುಸರಿಸಿದ್ದಾರೆ ಎಂಬ ಮಾತು ಪದೇಪದೇ ಕೇಳಿಬರುತ್ತಿದೆ. ಹಿಂದುಳಿದ ವರ್ಗಗಳೆಂದರೆ ಅದು ಕೆಲವೇ ಕೋಮುಗಳ ಪ್ರಶ್ನೆಯಲ್ಲ. ಆರ್ಥಿಕವಾಗಿ ಹಿಂದುಳಿದಿರತಕ್ಕ ಅನೇಕ ಕೋಮುಗಳು ಅದರಲ್ಲಿ ಬರುತ್ತವೆ, ಒಕ್ಕಲಿಗರು, ಲಿಂಗಾಯಿತರು ಎಲ್ಲಾ ಜಾತಿಯವರೂ ಬರುವವರಿದ್ದಾರೆ. ಆ ವರ್ಗಗಳ ಬಗ್ಗೆ ಹೆಚ್ಚಿನ ಕಳಕಳಿ ಇರುವ ಸರ್ಕಾರ ಯಾವರೀತಿ ಮುತುವರ್ಜಿ ವಹಿಸುತ್ತೀರಿ ಎಂಬುದು ಮುಖ್ಯ. ಇಲ್ಲಿ ತಮ್ಮ ಶಕ್ತಿಯ ವ್ಯಾಪ್ತಿಯಲ್ಲಿ ಯಾವ ರೀತಿ ಹೊಸ ವ್ಯವಸ್ಥೆಯನ್ನು ಮಾಡುತ್ತೀರಿ ಎಂಬುದನ್ನು ಸದನಕ್ಕೆ ತಿಳಿಸಬೇಕು. ಕಾನೂನನ್ನು ತಂದೋ, ಅಥವಾ ಗೌರ್ನಮೆಂಟ್ ಆರ್ಡರ್ ಮೂಲಕವೋ ಹೇಗೆ ಮಾಡುತ್ತೀರಿ ಎಂಬುದನ್ನು ತಿಳಿಸಿ. ಹರಿಜನ ಗಿರಿಜನ ಮತ್ತು ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳು ಎಂ.ಎ., ಎಂ.ಬಿ.ಬಿ.ಎಸ್., ಬಿ.ಎಸ್.ಸಿ(ಅಗ್ರಿ.) ಮುಂತಾದ ಪದವಿಗಳಲ್ಲಿ ಹೆಚ್ಚಿನ ಅಂಕಗಳನ್ನು ಪಡೆದರೆ ಅವರಲ್ಲಿ ಮೂರು ಜನರಿಗೆ ನೇರವಾಗಿ ನೌಕರಿಗೆ ತೆಗೆದುಕೊಳ್ಳುವ ಬಗ್ಗೆ ಆಯವ್ಯಯ ಪತ್ರದಲ್ಲಿ ಹೇಳಿದ್ದೀರಿ. ಮೊದಲನೇ ಮೂರು ಸ್ಥಾನ ಪಡೆದಿರುವವರು ರಿಸರ್ವೇಷನ್ ಕೋಟಾದಲ್ಲಿ ಆಟೋಮೆಟಿಕ್ಕಾಗಿ ಸೆಲೆಕ್ಟ್ ಆಗುತ್ತಾರೆ. ಇದರಲ್ಲಿ ನೀವೇನು ಸ್ಪೆಷಲ್ಲಾಗಿ ಕೊಡುವುದು? ಇದು ಮೂಗಿಗೆ ತುಪ್ಪ ಹಚ್ಚತಕ್ಕ ಬುದ್ಧಿ. ಬರೀ ವಾಸನೆ ನೋಡಿಕೊಂಡಿರಬೇಕೇ ಹೊರತು ತುಪ್ಪ ಸಿಗುವುದಿಲ್ಲ. ಮೂರು ಜನರನ್ನು ತೋರಿಸಿ ನೋಡಿ ನಿಮಗೆ ಕೊಟ್ಟಿದ್ದೇವೆ ಎಂದು ಜನರಿಗೆ ತೋರಿಸುವುದು, ಈ ರೀತಿಯ ವ್ಯಾಖ್ಯಾನ ಬಿಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಒಟ್ಟು ಮೂರು ಜನರಿಗಲ್ಲ ಒಂದೊಂದು ವಿಷಯದಲ್ಲಿ ಮೂರ್ ಮೂರು ಜನರಿಗೆ.

ಶ್ರೀ ಎಸ್. ಬಂಗಾರಪ್ಪ.—ನನಗೆ ಅರ್ಥವಾಗುತ್ತದೆ. ಒಂದೊಂದು ವಿಷಯದಲ್ಲಿ ಹೆಚ್ಚಿನ ಅಂಕ ಪಡೆದ ಮೂರು ಜನರಿಗೆ ಕೊಡುತ್ತೇವೆಂದು ಹೇಳಿದ್ದೀರಿ. ಜೊತೆಗೆ ಪಾರಿತೋಷಕ ಇಟ್ಟಿದ್ದೀರಿ, ಇದು ಎಂಥ ದೊಡ್ಡ ಕೊಡುಗೆ! ಷೀಲ್ಡ್ ಇಟ್ಟುಕೊಂಡು ಆತ ಮುಂದುಕ ಆಗುವವರೆಗೆ ಎಲ್ಲರಿಗೂ ತೋರಿಸುತ್ತಿರಬೇಕು. ಅದು ಧೂಳು ತಿನ್ನುತ್ತಾ ಕುಳಿತಿರುತ್ತದೆ. ಈ ಬುದ್ಧಿ ಸರಿಯಲ್ಲ. ಒಳ್ಳೆಯದಲ್ಲ. ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಹರಿಜನ ಗಿರಿಜನರಿಗೆ ಎಷ್ಟು ಹಣ ಆಯವ್ಯಯದಲ್ಲಿ ತೆಗೆದಿಟ್ಟಿದ್ದೀರಿ ಎಂಬುದು ಸದನಕ್ಕೆ ಬೇಕು.

ಮೂರು ಮೂರು ಜನರಿಗೆ ನೌಕರಿಯನ್ನು ಕೊಡುವುದನ್ನು ಬಿಟ್ಟರೆ ಹಾಗೂ ಪಾರಿತೋಷಕವನ್ನು ಕೊಡುವುದನ್ನು ಬಿಟ್ಟರೆ ಇವರು ಯಾವುದೇ ಯೋಜನೆಯನ್ನು ಈ ಆಯವ್ಯಯದಲ್ಲಿ ಇಟ್ಟಿಲ್ಲ. ಆದ್ದರಿಂದ ಹಿಂದುಳಿದ ವರ್ಗದವರಿಗೆ, ಹರಿಜನಗಿರಿಜನರಿಗೆ, ಅಲ್ಪಸಂಖ್ಯಾತರಿಗೆ ಇವರು ಮಾಡಿರತಕ್ಕ ಮೋಸದ ಆಯವ್ಯಯ ಪತ್ರ ಇದು ಎಂದು ನಾನು ಹೇಳುತ್ತೇನೆ. ಈ ರೀತಿ ಇವರು ಮಾಡಬಾರದಾಗಿತ್ತು, ನಮ್ಮ ದೇಶದಲ್ಲಿ ಜನರಿಗೆ ಆರೋಗ್ಯ ವಿಮೆ ಮಾಡುವ ಒಂದು ಪ್ರಸ್ತಾಪ ಇದ್ದು ಆ ಬಗ್ಗೆ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿಲ್ಲ.

ಶಿಕ್ಷಣದ ಬಗ್ಗೆ ಹೇಳಬೇಕೆಂದರೆ, ಪ್ರಣಾಳಿಕೆಯಲ್ಲಿ ಶಾಲಾ ಮಕ್ಕಳಿಗೆ ಸಮವಸ್ತ್ರ ಕೊಡುವ ಬಗ್ಗೆ, ೨ ರಿಂದ ೧೦ ವರ್ಷದ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸಿಕೊಡುವ ಬಗ್ಗೆ ಪ್ರಸ್ತಾಪ ಮಾಡಲಾಗಿತ್ತು. ಆ ಬಗ್ಗೆ ಇಲ್ಲಿ ಏನೂ ಹೇಳಿಲ್ಲ. Regarding Mid-day Meal programme as has been done by the Government of Tamil Nadu

ಮಕ್ಕಳಿಗೆ ಆಹಾರ ಒದಗಿಸುವುದರ ಬಗ್ಗೆ ಎಂ. ಜಿ. ರಾಮಚಂದ್ರನ್‌ರವರು ಸುಮಾರು ೧೦೦ ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಇದು ಒಂದು ರೀತಿಯ ಪ್ರೋತ್ಸಾಹ ಯೋಜನೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಯವರು ತಿಳಿದುಕೊಳ್ಳಬೇಕು. ಇದರಿಂದಾಗಿ ಮಕ್ಕಳ ಹಾಜರಾತಿ ಶಾಲೆಗೆ ಜಾಸ್ತಿ ಆಗುತ್ತವೆ. ಇದರಿಂದಾಗಿ ಅವಿದ್ಯಾವಂತರ ಶೇಕಡಾ ವಾರು ಪ್ರಮಾಣ ತಗ್ಗುತ್ತದೆ. ಈ ಬಗ್ಗೆ ಹೇಗೆ ಹಣವನ್ನು ರೂಪಿಸಬೇಕೆಂಬುದರ ಬಗ್ಗೆ ನಂತರ ಯೋಚನೆ ಮಾಡೋಣ. ಹರಿಜನ ಗಿರಿಜನ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಬಗ್ಗೆ, ಸಮವಸ್ತ್ರಗಳನ್ನು ನೀಡುವ ಬಗ್ಗೆ ಏನೂ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಲಾಗಿತ್ತೋ ಆ ಬಗ್ಗೆ ಒಂದು ಮಾತನ್ನೂ ಆಯವ್ಯಯದಲ್ಲಿ ಸೇರಿಸಿಲ್ಲ. ಈ ದಿನ ಮಕ್ಕಳಿಗೆ ಎಷ್ಟು ಶಿಕ್ಷಣವನ್ನು ಕೊಡಬೇಕೋ ಅದನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಇದನ್ನು ಆಂಧ್ರಪ್ರದೇಶದಲ್ಲಿ ಬ್ರೆಡ್ ಅಂಡ್ ಮಿಲ್ಕ್ ಸ್ಕೀಮ್ ಜಾರಿಗೆ ತರುವ ಬಗ್ಗೆ ನಾನು ಪತ್ರಿಕೆಯಲ್ಲಿ ಓದಿದ ನೆನಪು ಇದೆ..............

ಶ್ರೀ ಪಿ. ರಾಮದೇವ್.—ಆಂಧ್ರಪ್ರದೇಶದಲ್ಲಿ ಮಕ್ಕಳಿಗೆ ಆಹಾರ ಕೊಡುವ ಯೋಜನೆ ಇನ್ನೂ ಜಾರಿಗೆ ಬಂದಿಲ್ಲ. ಹಾಗೂ ಅಲ್ಲಿ ೨ ರೂಪಾಯಿಗೆ ೧ ಕೆ.ಜಿ. ಅಕ್ಕಿ ಕೊಡುವ ಯೋಜನೆಯೂ ಇನ್ನೂ ಜಾರಿಗೆ ಬಂದಿಲ್ಲ. ಅವರೂ ಆ ರೀತಿ ಹಾಕಿದ್ದಾರಷ್ಟೇ.

ಶ್ರೀ ಎಸ್. ಬಂಗಾರಪ್ಪ.—ಮಕ್ಕಳಿಗೆ ಆಹಾರ ಒದಗಿಸುವ ಬಗ್ಗೆ ತಮಿಳುನಾಡು ಸರ್ಕಾರ ಒಂದು ಯೋಜನೆಯನ್ನು ಜಾರಿಗೆ ತಂದಿದೆ. ಇದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಆಂಧ್ರಪ್ರದೇಶದಲ್ಲಿ ಮಾಡಿಲ್ಲವೆಂದು ಹೇಳುತ್ತಿದ್ದೀರಿ. ಅಕ್ಕಿ ಬೆಲೆಯನ್ನು ೨ ರೂಪಾಯಿಗೆ ಇಳಿಸುವ ವಿಷಯ ಅವರ ಸರ್ಕಾರಕ್ಕೆ ಬಿಟ್ಟ ವಿಷಯ. ಮಾನ್ಯ ಎನ್.ಟಿ. ರಾಮರಾವ್‌ರವರ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ನಾನು ಎರಡು ಮೂರು ಸಾರಿ ಹೈದರಾಬಾದಿಗೆ ಹೋಗಿ ಬಂದಿದ್ದೇನೆ. ನಾನು ಅಲ್ಲಿ ಎರಡು ಮೂರು ಅಂಗಡಿಗಳಿಗೆ ಹೋಗಿದ್ದೆ. ನಾನು ಅವರನ್ನು ಹೊಗಳಬೇಕೆಂದು ಇದನ್ನು ಹೇಳುತ್ತಿಲ್ಲ. ಅವರು ಅಧಿಕಾರಕ್ಕೆ ಬಂದಮೇಲೆ ೨ ರೂಪಾಯಿಗೆ ಕೆ.ಜಿ. ಅಕ್ಕಿ ಮಾರಿಸುತ್ತೇವೆಂದು ಹೇಳಿದ್ದರು. ಅವರು ಅಧಿಕಾರಕ್ಕೆ ಬಂದಮೇಲೆ ಈ ಬಗ್ಗೆ ಕಾರ್ಯತತ್ಪರರಾಗುತ್ತಾರೆಂದು ತಿಳಿದ ಅಲ್ಲಿನ ಅಕ್ಕಿ ಮರ್ಚೆಂಟ್ಸ್ ಎಲ್ಲಾ ಒಂದು ತೀರ್ಮಾನಕ್ಕೆ ಬಂದು ತಾವು ಅಕ್ಕಿಯ ಬೆಲೆಯನ್ನು ಇಳಿಸಿದರೆ ತಮಗೇನೂ ಲಾಸ್ ಆಗುವುದಿಲ್ಲವೆಂದು ಹೇಳಿ ಬಡವರು ಉಪಯೋಗ ಮಾಡುವ ಅಕ್ಕಿಯ ಬೆಲೆಯನ್ನು ೧ ರೂಪಾಯಿ ೯೫ ಪೈಸೆಗೆ ಮಾರುವುದಕ್ಕೆ ವರ್ತಕರೇ ತೀರ್ಮಾನ ಮಾಡಿದ್ದಾರೆ. ಇದು ಅಡ್ಮಿನಿಸ್ಟ್ರೇಷನ್ ಸ್ವಾಮಿ ಸರ್ಕಾರದ ನಿರ್ಣಯವನ್ನು ನೋಡಿಕೊಂಡು ತಾವೇ ಬೆಲೆಯನ್ನು ಇಳಿಸುವುದು ಒಂದು ಭಾಗವಾದರೆ ಸರ್ಕಾರವೇ ತಹಬಂದಿಗೆ ತರುವುದು ಮತ್ತೊಂದು ಭಾಗ. ಇದು ಆಡಳಿತ ಬಿಗಿತನ ನೀತಿಯ ಲಕ್ಷಣ. ಆದರೆ ಇವತ್ತು ನಮ್ಮ ಬೆಂಗಳೂರು ನಗರದಲ್ಲಿ ದರಗಳು ಹೇಗೆ ಏರುತ್ತಿವೆ ಎಂಬ ವಿಷಯ ಮಾನ್ಯ ರಾಮ್‌ದೇವ್‌ರವರಿಗೆ ಗೊತ್ತು ಎಂದು ನಾನು ತಿಳಿಯುತ್ತೇನೆ. ಇವತ್ತು ಕೆಲವು ಅಗತ್ಯ ವಸ್ತುಗಳ ಬೆಲೆ ಹತ್ತು ಇಪ್ಪತ್ತು ಪರ್ಸೆಂಟ್ ಜಾಸ್ತಿಯಾಗಿದೆ. ಬೆಲೆ ಹತೋಟಿ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡರಲ್ಲೂ ಅಧಿಕಾರ ಇದೆ. ಈ ಸರ್ಕಾರ ಬಂದಮೇಲೆ ಬೆಲೆಗಳನ್ನು ಇಳಿಸುವ ಬಗ್ಗೆ ಯಾವ ಕೆಲಸವನ್ನು ಮಾಡಿದೆ? ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಅದು ಮೂರೇ ದಿನದಲ್ಲಿ ತನ್ನ ವರದಿ ಕೊಡಬೇಕೆಂದು ಹೇಳಿತು. ಆ ರಿಪೋರ್ಟ್ ಬಂದಮೇಲೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಈ ಬಗ್ಗೆ ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ. ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರ ವ್ಯಾಪ್ತಿಯನ್ನು ಉಪಯೋಗಿಸಿಕೊಂಡು ಬೆಲೆ ಕಡಿಮೆ ಮಾಡುವ ಬಗ್ಗೆ ಏನೂ ಕಾರ್ಯಕ್ರಮ ಹಾಕಿಕೊಂಡಿಲ್ಲ. ಬೆಣ್ಣೆಯಲ್ಲಿ ಕೂದಲು ತೆಗೆಯುವಂತೆ ಸರ್ಕಾರ ಕೆಲಸ ಮಾಡುತ್ತಿದೆ. ಆದರೆ ಕಾಲ ನಿಲ್ಲುವುದಿಲ್ಲ. ಗಡಿಯಾರದ ಮುಳ್ಳು ನಿಲ್ಲುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಜಾರಿಗೆ ತರದೇ ಇರುವುದರಿಂದ, ಈ ಬಗ್ಗೆ ಬಡ್ಜೆಟ್ಟಿನಲ್ಲಿ ಪ್ರಸ್ತಾಪ ಮಾಡದೇ ಇರುವುದರಿಂದ ಬಡ ಜನರು ಯಾರಿದ್ದಾರೆ ಅವರು ಈ ಆಯವ್ಯಯ ಪತ್ರವನ್ನು ಖಂಡಿಸುತ್ತಾರೆಂದು ಹೇಳುತ್ತೇನೆ.

ಇನ್ನು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಪ್ರಣಾಳಿಕೆಯಲ್ಲಿ ಬರೀ ಭಾಷಣವೇ ನಾನು ರೈತರ ಮುಂದೆ ಭಾಷಣ ಮಾಡುವಾಗ ಕ್ಯಾಪಿಟೇಷನ್ ಶುಲ್ಕ ರದ್ದು ಮಾಡುವ ಬಗ್ಗೆ ಹೇಳಿದ್ದೇನೆ. ನಾನು ಈಗ ಅವರಿಗೆ ಏನು ಉತ್ತರ ಕೊಡಲಿ ಹೇಳಿ ಸ್ವಾಮಿ? ಇದು ಒಂದು ದೊಡ್ಡ ಅಪರಾಧವೆಂದು ನಾನು ಹೇಳುತ್ತಿದ್ದೇನೆ.

ನಾನು ಬಹಳ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ ಚುನಾವಣೆ ಕಾಲದಲ್ಲಿ ಈ ಬಗ್ಗೆ ನಾನು ಬೇರೆ ಬೇರೆ ಸಭೆಗಳಲ್ಲಿ, ಬೇರೆ ಬೇರೆ ಜಿಲ್ಲೆಗಳಲ್ಲಿ ಈ ಬಗ್ಗೆ ಭಾಷಣ ಮಾಡಿದ್ದೇನೆ. ಆಗ ಭಾಷಣ ಮಾಡುವ ಕಾಲದಲ್ಲಿ ನಮ್ಮ ಮಾತನ್ನು ಒಪ್ಪಿದರೋ ಬಿಟ್ಟರೋ ಒಟ್ಟಿನಲ್ಲಿ ಶಾಂತಿಯಿಂದ ನಮ್ಮ ಭಾಷಣವನ್ನು ಅವರು ಕೇಳಿ ನಮಗೆ ಬೆಂಬಲ ಕೊಟ್ಟಿದ್ದಾರೆ. ಎಂಜಿನಿಯರಿಂಗ್ ಕಾಲೇಜು ಇರಬಹುದು, ಮೆಡಿಕಲ್ ಕಾಲೇಜು ಇರಬಹುದು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಅದನ್ನು ವಜಾ ಮಾಡುತ್ತೇವೆ ಎಂದು ಹೇಳಿದ್ದೇವೆ. ಮುನಿಸಿಪಾಲಿಟಿಯಲ್ಲಿ ಕಸ ಗುಡಿಸುವ ಬಸಣ್ಣನ ಮಗ ಇವತ್ತು ವೈದ್ಯನಾಗುವುದು ಬೇಡವೇ? ಬಡ ರೈತರ ಮಕ್ಕಳು ಇಂಜಿನಿಯರ್ ಆಗುವುದು ಬೇಡವೆ? ಇವತ್ತು ಒಂದೆರಡು ಸಂಸ್ಥೆಗಳು ಬಿಟ್ಟರೆ ಎಲ್ಲಾ ಸಂಸ್ಥೆಗಳು ಹಣ ಲೂಟ ಮಾಡುವ ಸಂಸ್ಥೆಗಳಾಗಿವೆ. ಮೆಡಿಕಲ್ ಕಾಲೇಜು, ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಹಣ ಲೂಟಿಯಾಗುತ್ತಿದ್ದು ಇಲ್ಲಿ ಬಡವರ ಮಕ್ಕಳು ವಿದ್ಯಾಭ್ಯಾಸ ಮಾಡುವುದಕ್ಕಾಗುತ್ತಿಲ್ಲ. ಒಂದು ಮೆಡಿಕಲ್ ಸೀಟಿಗೆ ಲಕ್ಷಾಂತರ ರೂಪಾಯಿಗಳು, ೩ ಲಕ್ಷ ೪ ಲಕ್ಷ ರೂಪಾಯಿ, ಬ್ಲ್ಯಾಂಕ್ ಚೆಕ್ ಕೊಟ್ಟು ಸೀಟುಗಳನ್ನು ಪಡೆಯುತ್ತಿರುವಂತಹ ದುರ್ವ್ಯವಹಾರಗಳು ನಡೆಯುತ್ತಿವೆ. ಮಾನ್ಯ ಎನ್ ಟಿ ರಾಮರಾವ್‌ರವರು ಮುಖ್ಯಮಂತ್ರಿಗಳಾಗಿ ಬಂದಾಗ ಅವರು ಏನು ಮಾಡಿದರೆಂಬುದು ಗೊತ್ತೇ. With a stroke of a pen he has abolished the capitation fees in the State that is the administration! ಇದು ಆಡಳಿತ ನೀತಿ ಸ್ವಾಮಿ.

ಒಬ್ಬ ಮಾನ್ಯ ಸದಸ್ಯರು.—ನನ್ನದೊಂದು ಕ್ರಿಯಾಲೋಪ ಇದೆ ಸ್ವಾಮಿ. ಮಾನ್ಯ ಎನ್.ಟಿ ರಾಮರಾವ್‌ರವರು ಏನು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ದುಡುಕಿ ನಿರ್ಧಾರವನ್ನು ತೆಗೆದುಕೊಂಡರು ಆ ಬಗ್ಗೆ ೧೨ ಯಾಂತ್ರಿಕರು ಮಹಾ ವಿದ್ಯಾಲಯದವರು ಒಂದು ಯೂನಿಯನ್ ಮಾಡಿಕೊಂಡು ಮಾನ್ಯ ಎನ್ ಟಿ. ರಾಮರಾವ್‌ರವರ ಬಳಿಗೆ ಬಂದು ಹೀಗಾದರೆ ನಾವು ನಿರ್ವಹಿಸಲು ಆಗುವುದಿಲ್ಲ ಇಡೀ ಆಡಳಿತವನ್ನು ನಿಮ್ಮ ಕೈಗೇ ಕೊಡುತ್ತೇವೆ ನೀವೇ ನಡೆಸಿ ಎಂದು ಹೇಳಿದ್ದಾರೆಂದು ತಿಳಿದುಬಂದಿದೆ. ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಕ್ಯಾಪಿಟೇಷನ್ ಶುಲ್ಕದಲ್ಲಿ ಅವರಿಗೆ ೨ ಆಣೆ ಸಿಕ್ಕುತ್ತಿಲ್ಲ ನಾನು ಮೊನ್ನೆ ಮೊನ್ನೆ ಹೈದರಾಬಾದಿಗೆ ಹೋಗಿ ಬಂದೆ. ಅಲ್ಲಿ ಎಲ್ಲೂ ಎರಡೂವರೆ ರೂಪಾಯಿ ಕಡಿಮೆಗೆ ಅಕ್ಕಿಯನ್ನು ಮಾರುತ್ತಿಲ್ಲ. ನಿನ್ನೆ ದಿವಸ ಕೂಡಾ ನಾನು ಹೈದರಾಬಾದಿಗೆ ಹೋಗಿದ್ದೆ ಏನು ನಿರ್ಣಯ ತೆಗೆದುಕೊಳ್ಳಬೇಕಾದರೂ ಒಂದು ತತ್ವ ಇದೆ ಆ ಬಗ್ಗೆ ಹೋಗಬೇಕಾಗುತ್ತದೆ,

ಶ್ರೀ ಎಸ್. ಬಂಗಾರಪ್ಪ.—ಅದು ಪಾಯಿಂಟ್ ಆಫ್ ಆರ್ಡರ್ ಅಲ್ಲ. ಮಾನ್ಯ ಸದಸ್ಯರ ಅಭಿಪ್ರಾಯ ಇರಬಹುದು. ಎನ್.ಟಿ. ರಾಮರಾವ್ ಹತ್ತಿರ ಬೆಳಿಗ್ಗೆ ಕೂಡ ನಾನು ಮಾತನಾಡಿದೆ.

ಶ್ರೀ ಕೆ. ಮಲ್ಲಪ್ಪ.—ಬೇರೆ ರಾಜ್ಯಗಳ ಮುಖ್ಯಮಂತ್ರಿಗಳ ಬಗ್ಗೆ ಮೆಚ್ಚಿಕೆಯನ್ನಾಗಲೀ, ರಾಜ್ಯ ಸರ್ಕಾರದ ಬಗ್ಗೆ ಶಾಸನ ಸಭೆಯಲ್ಲಿ ಅಪವಾದ ಹೊರಿಸತಕ್ಕಂಥಾದ್ದು ಅಪರಾಧವೆಂದು ನನಗನ್ನಿಸುತ್ತದೆ.

ಛೇರ್ಮನ್.—ದಯವಿಟ್ಟು ಕೂತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಬಂಗಾರಪ್ಪನವರು ಎನ್. ಟಿ. ರಾಮರಾವ್ ಅವರ ಜೊತೆ ಮಾತನಾಡಿದೆ ಎಂದು ತಿಳಿಸಿದರು. ಎನ್. ಟಿ. ರಾಮರಾವ್ ಅವರು ಮುಖ್ಯಮಂತ್ರಿಯಾದಾಗ ಅಕ್ಕಿ ವ್ಯಾಪಾರಸ್ಥರನ್ನು ಕರೆದು, ನೀವು ಒಂದು ಕೆ.ಜಿ. ಅಕ್ಕಿಗೆ ಎರಡೂ ರೂಪಾಯಿ ಪ್ರಕಾರ ಕೊಡುವುದಕ್ಕೆ ಒಪ್ಪಬೇಕು. ಇಲ್ಲದೇ ಹೋದರೆ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂದು ಸೂಚಿಸಿದ್ದರು. ಎರಡು ರೂಪಾಯಿಗೆ ಅಕ್ಕಿ ಬರಲಿಲ್ಲ. ಈಗ ಏನು ನಿರ್ಣಯ ಮಾಡಿದ್ದಾರೆಂದರೆ, ಏಪ್ರಿಲ್ ೧ನೇ ತಾರೀಖಿನಿಂದ ಎರಡು ರೂಪಾಯಿ ಕಿಲೋ ಅಕ್ಕಿಯನ್ನು ಮಾಡಲಿಕ್ಕೆ ವ್ಯವಸ್ಥೆ ಮಾಡಿದ್ದಾರೆ. ಸಬ್ಸಿಡಿ ದರದಲ್ಲಿ ನಾವು ಮಾಡಿದಂತೆಯೇ ಮಾಡಿದ್ದಾರೆ. ಬಂಗಾರಪ್ಪನವರ ಕೈಯಲ್ಲಿ ಅವರು ಬೇರೆ ಹೇಳಿದ್ದಾರೇನೋ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಹೈದರಾಬಾದಿಗೆ ಹೋದಂಥ ಸಂದರ್ಭದಲ್ಲಿ ೧-೫೩ ಪೈಸೆಗೆ ಅಕ್ಕಿ ಮಾರಾಟ ಮಾಡುತ್ತಿದ್ದರು. ಹರಿಹರದ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಬೇರೆ ರಾಜ್ಯಗಳ ವಿಚಾರವನ್ನು ಪ್ರಸ್ತಾಪ ಮಾಡಿದರೆ ನಾವು ಒಳ್ಳೆಯ ಆಡಳಿತ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಇನ್ನು ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುತ್ತೇವೆಂದು ಜನತೆಗೆ ಮಾತನ್ನು ಕೊಟ್ಟು ಬಂದಿದ್ದೇವೆ. ನಾವು ಚುನಾವಣೆ ಕಾಲದಲ್ಲಿ ಹೇಳಿದಂಥ ಮಾತಿಗೂ ತಾವು ಆಯವ್ಯಯ

ಪತ್ರದಲ್ಲಿ ಹೇಳಿರುವುದಕ್ಕೂ ಅಜಗಜಾಂತರ ವ್ಯತ್ಯಾಸ ಕಾಣುತ್ತದೆ. ನೀವು ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ನಡೆಸತಕ್ಕವರ ಜೊತೆಗೆ ಶಾಮೀಲಾಗಿದ್ದೀರೆಂದು ಆಪಾದನೆ ಮಾಡುತ್ತೇನೆ. ಇಲ್ಲದೇ ಹೋಗಿದ್ದರೆ, ೫ ವರ್ಷಗಳಲ್ಲಿ ಕ್ಯಾಪಿಟೇಷನ್ ಶುಲ್ಕ ಮತ್ತು ಪ್ರವೇಶ ಶುಲ್ಕವನ್ನು ತೆಗೆದುಹಾಕುವುದಕ್ಕೆ ವಿಚಾರ ಮಾಡುತ್ತೇವೆ ಎನ್ನುವಂಥ ಮಾತುಗಳನ್ನು ಬರೆಯುತ್ತಿರಲಿಲ್ಲ. ತಾವು ಬುದ್ಧಿವಂತ ರಾಜಕಾರಣ ಮಾಡುತ್ತಿದ್ದೀರಿ. ಹಿಂದಿನ ಸರ್ಕಾರ ಮೇಲಿದ್ದಂಥ ಆಪಾದನೆಗಳ ಬಗ್ಗೆ ಅನೇಕ ಸಾರಿ ನಾವು ಪ್ರಸ್ತಾಪ ಮಾಡಿದ್ದೇವೆ, ನೀವು ಕೂಡ ಅದೇ ಹಾದಿಯಲ್ಲಿ ಹೆಜ್ಜೆ ಇಡುತ್ತಿದ್ದೀರಿ. ಕ್ಯಾಪಿಟೇಷನ್ ಫೀ ಮತ್ತು ಪ್ರವೇಶ ಶುಲ್ಕದ ಬಗ್ಗೆ ಹಿಂದಿನ ಸರ್ಕಾರಕ್ಕೂ ಈ ಸರ್ಕಾರಕ್ಕೂ ಇರತಕ್ಕ ವ್ಯತ್ಯಾಸ ಏನು ? ಈ ವಿಷಯದಲ್ಲಿ ತಾವು ಸ್ಪಷ್ಟವಾದ ಉತ್ತರಕೊಡಬೇಕೆಂದು ನಾನು ಕೇಳುತ್ತೇನೆ. ಇದರ ಜೊತೆಗೆ ತತ್‌ಕ್ಷಣ ಆಂಧ್ರ ಸರ್ಕಾರದವರು ಮಾಡಿದಂತೆ ಕ್ಯಾಪಿಟೇಷನ್ ಮತ್ತು ಅಡ್ಮಿಷನ್ ಫೀ ರದ್ದು ಮಾಡಿ, ಈ ರಾಜ್ಯದಲ್ಲಿರುವಂಥ ಬಡವರ ಮಕ್ಕಳೂ ಕೂಡ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ತಾವು ಈಗ ಏನು ಮಾಡಿದ್ದೀರಿ ಇದು ಜನತೆಗೆ ಮಾಡಿರತಕ್ಕಂಥ ಮೋಸ ವೆಂದು ನಾನು ಹೇಳುತ್ತೇನೆ.

ಮಾನ್ಯ ಮುಖ್ಯಮಂತ್ರಿಯವರು ಮಿತವ್ಯಯ ಮಾಡುತ್ತೇವೆಂದು ವ್ಯಾಖ್ಯಾನ ಮಾಡಿದ್ದಾರೆ. ನಾವು ಅವರ ಭಾಷಣವನ್ನು ಕೇಳಿದ್ದೇವೆ. ಅವರು ಮುಖ್ಯಮಂತ್ರಿಗಳಾಗಿ ಎರಡು ತಿಂಗಳ ಮೇಲಾಯಿತು. ಅನೇಕ ಸಾರಿ ಡೆಲ್ಲಿಗೆ ಹೋಗಿದ್ದಾರೆ, ನಾನು ಕೂಡ ಹೋಗಿದ್ದೇನೆ. ಕರ್ನಾಟಕ ಭವನದಲ್ಲಿ ನಮ್ಮದೇ ಆದಂಥ ಸಿಬ್ಬಂದಿ ಇದೆ. ಮುಖ್ಯಮಂತ್ರಿಗಳು, ಮಂತ್ರಿಗಳು ಹಾಗೂ ಶಾಸಕರು ಹೋದಾಗ ಅವರ ಸೇವೆಯನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ಇದೆ. ನಾವೇ ಸಂಬಳಕೊಟ್ಟು ಇಟ್ಟಿದ್ದೇವೆ. ತಾವು ಡೆಲ್ಲಿಗೆ ಹೋಗುವಾಗ ಇಲ್ಲಿಂದ ತಮ್ಮ ಪಿ.ಎ. ಕರೆದುಕೊಂಡು ಹೋಗುತ್ತೀರಿ ಇದು ಮಿತವ್ಯಯ ಮಾಡಿದಂತಾಗುತ್ತದೆಯೇ ? ಹಿಂದಿನ ಮುಖ್ಯಮಂತ್ರಿಗಳು ಕೂಡ ಡೆಲ್ಲಿಯಲ್ಲಿರತಕ್ಕ ಸಿಬ್ಬಂದಿ ಸೇವೆಯನ್ನು ಉಪಯೋಗ ಮಾಡುತ್ತಿದ್ದರು. ಹಿಂದೆ ಮಹಾರಾಜರು ಹೋಗಬೇಕಾದರೆ ಅವರ ಸರಂಜಾಮು ಪರಿವಾರ ಕಟ್ಟಿಕೊಂಡು ಹೋಗುತ್ತಿದ್ದರು. ತಾವು ಪರಿವಾರದ ಪದ್ಧತಿಯನ್ನು ರದ್ದು ಮಾಡಬೇಕು. ನೀವು ಮಾಡದೇ ಇದ್ದರೆ, ನಿಮ್ಮ ಭಾಷಣ ಒಪ್ಪತಕ್ಕಂಥ ಕೆಲವು ಜನ ಸಿಗಬಹುದು, ಆದರೆ ಕರ್ನಾಟಕದ ಜನ ಬಹಳ ಕಷ್ಟಪಟ್ಟು ತೀರ್ಪುಕೊಟ್ಟಿದ್ದಾರೆ, ಅವರು ಸಮ್ಮನಿರುವುದಿಲ್ಲ. ತಾವು ಹಣ ಉಳಿತಾಯ ಮಾಡುತ್ತೇವೆಂದು ಹೇಳುವುದಕ್ಕೂ ತಾವು ಅನುಸರಿಸುವಂಥ ನೀತಿಗೂ ಸಂಬಂಧವಿಲ್ಲ ದಂತಾಗಿದೆ. ಬುದ್ಧಿವಂತಿಕೆ ನಿಮ್ಮ ಹತ್ತಿರ ಇರಬಹುದು, ಆದರೆ, ಕರ್ನಾಟಕದ ಜನತೆ ಇಟ್ಟಿರತಕ್ಕ ನಂಬಿಕೆಯಿಂದ ಬಹಳ ದೂರ ಹೋಗುವಂಥಾದ್ದು ಸಾಧುವಲ್ಲ. ನೂತನ ಸರ್ಕಾರದ ಮುಖ್ಯಮಂತ್ರಿಗಳಾದ ನಿಮ್ಮ ನುಡಿಗೂ ನಡೆಗೂ "ಸಮುದ್ರದ ಅಗಲದಷ್ಟು" ವ್ಯತ್ಯಾಸವನ್ನು ನಾವು ಕಂಡಿದ್ದೇವೆ. ನಾವು, ನೀವು ಒಳ್ಳೆಯವರೆಂದು ಬೆಂಬಲ ಕೊಟ್ಟಿಲ್ಲ, ಕರ್ನಾಟಕ ಜನತೆಯ ತೀರ್ಪಿಗೆ ಮನ್ನಣೆ ಇತ್ತು ಬೆಂಬಲ ಕೊಟ್ಟಿದ್ದೇವೆಂಬುದನ್ನು ನಾನು ನನ್ನ ಪತ್ರಿಕಾ ಗೋಷ್ಠಿಯಲ್ಲಿ ಸ್ಪಷ್ಟಪಡಿಸಿದ್ದೇನೆ, ೧೯ ಜಿಲ್ಲೆಗಳಲ್ಲಿ ನೂರಾರು ಸಭೆಗಳನ್ನು ಉದ್ದೇಶಿಸಿ ನಾನು ಮಾತನಾಡಿದ್ದೇನೆ. ಕರ್ನಾಟಕದ ಜನತೆ ಕಾಂಗ್ರೆಸ್ ಸರ್ಕಾರದಿಂದ ಬೇಸತ್ತು ಜನತಾ ರಂಗಕ್ಕೆ ಬೆಂಬಲ ನೀಡಿದ್ದಾರೆ. ಜನತೆಯ ಹಾಗೂ ಬಡವರ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಗಮನಕೊಡುತ್ತೀರಿ, ಎನ್ನುವ ದೃಷ್ಟಿಯಿಂದ, ಜನತೆ ಇಟ್ಟಿರತಕ್ಕ ವಿಶ್ವಾಸಕ್ಕಾಗಿ ಮಾತು ಕೊಟ್ಟಿದ್ದೇವೆ, ನೀವು ಒಳ್ಳೆಯವರು ಎಂದು ಬೆಂಬಲಕೊಟ್ಟಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದೇನೆ. ಅದಕ್ಕೋಸ್ಕರ ನೀವು ಜನತೆಯ ಕಾರ್ಯಕ್ರಮಗಳ ಬಗ್ಗೆ ನಿಷ್ಠುರವಾದ ನ್ಯಾಯ ಸಮ್ಮತವಾದ ತೀರ್ಪನ್ನು ತೆಗೆದುಕೊಳ್ಳಿ. ನೀವು ಹಾಗೆ ಮಾಡದಿದ್ದರೆ ನಮ್ಮ ಬೆಂಬಲ ಸಿಗುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟಪಡಿಸುತ್ತೇನೆ. ಇಂಥ ಆಯವ್ಯಯ ಪತ್ರವನ್ನು ನಾವು ಬೆಂಬಲಿಸಿದರೆ ಇದು ಜನತೆಗೆ ಮಾಡಿದಂಥ ದ್ರೋಹ ಮತ್ತು ವಂಚನೆಯಾಗುತ್ತದೆ. ಅದಕ್ಕೋಸ್ಕರ ಈ ಆಯವ್ಯಯ ಪತ್ರ ವನ್ನು ವಿರೋಧ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇವೆ.

ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಬಂಗಾರಪ್ಪನವರ ಭಾಷಣವನ್ನು ಕೂಲಂಕಷವಾಗಿ ಕೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಸಾರಾಯಿ ದೊರೆಗಳು ಇದ್ದಾರೆ, ಹೆಂಡದ ದೊರೆಗಳು ಇದ್ದಾರೆ, ಇದುವರೆಗೂ ಅವರ ಆಡಳಿತ ನಡೆದುಕೊಂಡು ಬಂದಿದೆ, ಅವರ ಬಗ್ಗ

ಒಂದು ಚಕಾರವನ್ನು ಕೂಡ ಇವರು ಎತ್ತಲಿಲ್ಲ, ತಾವು ಬೇಕಾದರೆ ವರದಿ ನೋಡಿ, ಇದರಿಂದ ನನಗೆ ಏನು ಅನುಮಾನ ಬರುತ್ತೆ ಎಂದರೆ ಅವರ ಜೊತೆಯಲ್ಲಿ ಕೂಡ ಶಾಮೀಲಾಗಿದ್ದಾರೆಯೋ, ಎಂದು.

ಶ್ರೀ ಎಸ್. ಬಂಗಾರಪ್ಪ.—ಕರ್ನಾಟಕ ಜನತೆಗೆ ನನ್ನ ಚರಿತ್ರೆ ಗೊತ್ತಿದೆ. ನಾನು ಶಾಸನ ಸಭಾ ಸದಸ್ಯನಾಗಿ ೪-೫ ಚುನಾವಣೆಗಳಲ್ಲಿ ಆರಿಸಿ ಬಂದಿದ್ದೇನೆ. ಹೆಂಡದ ಅಂಗಡಿಯವರಿಂದ ಒಂದು ರೂಪಾಯಿ ಕೂಡ ಪಡೆದು ನಾನು ರಾಜಕಾರಣ ಮಾಡಿಕೊಂಡು ಬಂದಿಲ್ಲ. ಹೆಂಡದ ಬಗ್ಗೆ ನಾನು ಆಯವ್ಯಯದಲ್ಲಿ ಮಾತನಾಡದಿರುವುದಕ್ಕೆ ಕಾಲಾವಕಾಶದ ಅಭಾವವೂ ಒಂದು ಕಾರಣವಾಗಿದೆ. ಅಬ್ಕಾರಿ ಇಲಾಖೆ ಬೇಡಿಕೆ ಬಂದಾಗ ವ್ಯಾಖ್ಯಾನ ಮಾಡುತ್ತೇನೆ.

೩-೩೦ ಪಿ.ಎಂ.

ಅಧ್ಯಕ್ಷರೆ, ದಯವಿಟ್ಟು ಕಡಿತದಿಂದ ಆ ಪದವನ್ನು ತೆಗೆಸಿ ಹಾಕಬೇಕು. ಇಲ್ಲದೇ ಇದ್ದರೆ ಮಾನ್ಯ ಸದಸ್ಯರು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೆ, ನನಗೆ ಅನುಮಾನ ಇದೆ ಎಂದು ಹೇಳಿದ್ದೇನೆಯೇ ಹೊರತು ಅವರು ಶಾಮೀಲು ಆಗಿದ್ದರು ಎಂದು ಹೇಳಲಿಲ್ಲ.

(ಗೊಂದಲ)

ಶ್ರೀ ಬಾಪುಗೌಡ.—ಅಧ್ಯಕ್ಷರೆ, ಮಾನ್ಯ ಬಂಗಾರಪ್ಪನವರು ಮಾತನಾಡುವಾಗ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಹೆಗಡೆಯವರು ಖಾಸಗಿ ಕಾಲೇಜು ನಡೆಸತಕ್ಕವರ ಜೊತೆ ಶಾಮೀಲು ಆಗಿದ್ದಾರೆ ಎಂಬ ಪದವನ್ನು ಉಪಯೋಗ ಮಾಡಿದ್ದಾರೆ. ಅದೇ ರೀತಿ ನಮ್ಮ ಮಾನ್ಯ ಸದಸ್ಯರು ಆ ಪದವನ್ನು ಉಪಯೋಗ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಾನು ಸರ್ಕಾರದ ಮೇಲೆ ಹೇಳಿರತಕ್ಕ ಮಾತು. ಅದನ್ನು ಮಾನ್ಯ ಬಾಪುಗೌಡರು ತಿಳಿದುಕೊಳ್ಳಬೇಕು, ಅವರಿಂದ ವ್ಯಕ್ತಿಶಃ ಪದ ಪ್ರಯೋಗ ಮಾಡಲಾಗಿದೆ.

(ಗೊಂದಲ)

ಛೇರ್‌ಮನ್.—ಅದು ಅನ್ ಪಾರ್ಲಿಮೆಂಟರಿ ಅಲ್ಲ ಎಂದು ನಾನು ರೂಲಿಂಗ್ ಕೊಡುತ್ತಿದ್ದೇನೆ. ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಈಗ ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆ ಯವರು ಮಾತನಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರು. ಅದು ಅನ್ ಪಾರ್ಲಿಮೆಂಟರಿ ಅಲ್ಲ ಎಂದು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ಶಾಮೀಲು ಎನ್ನತಕ್ಕ ಪದವನ್ನು ಉಪಯೋಗ ಮಾಡಿದ್ದವರ ಬಗ್ಗೆ ತಾವು ಏನು ಹೇಳುತ್ತೀರಿ ?

(ಗೊಂದಲ)

ಛೇರ್‌ಮನ್.—ನಾನು ರೂಲಿಂಗ್ ಕೊಟ್ಟಿದ್ದೇನೆ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಈಗ ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರಿಗೆ ಮಾತನಾಡಲಿಕ್ಕೆ ತಿಳಿಸಿದ್ದೇನೆ, ಎಲ್ಲಾ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾಡಿರತಕ್ಕ ಆಪಾದನೆಯನ್ನು ಕೇಳಿ ಕೊಂಡು ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ಉಪಯೋಗ ಮಾಡತಕ್ಕ ಪದ ಅನ್ ಪಾರ್ಲಿಮೆಂಟರಿ ಅಲ್ಲ ಎಂದು ತಾವು ಹೇಳಿದ್ದೀರಿ ಅವರು 'ಅನುಮಾನ ಇದೆ' ಎಂದು ಅವರು ಹೇಳುವುದಾದರೆ, ಅವರ ಮೇಲೆ ನಾನು ೪ ಆಪಾದನೆ ಮಾಡಿದರೆ ಕತೆ ಏನಾಗುತ್ತದೆ ? ಅವರು ಆ ರೀತಿ ಹೇಳುವುದು ಸರಿಯಲ್ಲ.

(ಗೊಂದಲ)

ಛೇರ್‌ಮನ್ — ದಯವಿಟ್ಟು ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಇದರ ಬಗ್ಗೆ ತಾವು ವಿಶ್ಲೇಷಣೆ ಕೊಡಬೇಕಾಗುತ್ತದೆ. ನಾನು ಅವರಿಗೆ ಕಾಳಸಂತೆಕೋರರು, ಮಂತ್ರಿಗಳ್ಬರ ಜೊತೆ ಶಾಮೀಲು ಆಗಿದ್ದಾರೆ ಅಂದರೆ ಚೆನ್ನಾಗಿರುತ್ತದೆಯೋ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ಪಾರ್ಲಿಮೆಂಟರಿ ಚರ್ಚೆಯಲ್ಲಿ ಮಾತಿನ ಮೂಲಕ ಕೊಟ್ಟು ತೆಗೆದುಕೊಳ್ಳುವುದು, ಎರಡು ಮಾಡಲಿಕ್ಕೆ ಸಿದ್ಧ ಇರಬೇಕಾಗುತ್ತದೆ. ಮಾನ್ಯ ಬಂಗಾರಪ್ಪನವರು ಖಾಸಗಿ ಮೆಡಿಕಲ್ ಕಾಲೇಜು ವಿಚಾರ ಪ್ರಸ್ತಾಪ ಮಾಡಿ ನೇರವಾಗಿ ನನ್ನ ಮೇಲೆ ಒಂದು ಆರೋಪ ಮಾಡಿದ್ದಾರೆ...

ಶ್ರೀ ಎಸ್. ಬಂಗಾರಪ್ಪ.—ನೀವು ಎಂದು ಹೇಳಿದರೆ ಸರ್ಕಾರ, ನೀವು ಅಂದರೆ ಮುಖ್ಯ ಮಂತ್ರಿ ಹಾಗಾದರೆ ನೀವು ಮುಖ್ಯ ಮಂತ್ರಿ ಅಲ್ಲವೇ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನೀವು ಹೇಳುವಾಗ ಸುಮ್ಮನೆ ಕೇಳಿದ್ದೇವೆ. ನಾವು ಹೇಳುವಾಗ ನಿಮಗೆ ಉರಿಯಾಗುತ್ತದೆಯೋ ? ಮಾನ್ಯ ಬೈರೆಗೌಡರು ಹೇಳಿದ್ದು ತೆಗೆಯಿಸಬೇಕಾದರೆ, ಇವರು ಹೇಳಿದ್ದು ತೆಗೆಯಿಸಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಏನೂ ಅಂತ ಮಾಡಿಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಭಾಷಣದಿಂದ ನಿಮ್ಮ ಹೂರ್ಣ ಹೊರಗೆ ಬಿತ್ತು.

ಶ್ರೀ ಎಸ್. ಬಂಗಾರಪ್ಪ.—ನೀವು ಅಂದರೆ ಸರ್ಕಾರ. ನೀವು ಅಂದರೆ ಮುಖ್ಯ ಮಂತ್ರಿ, ನೀವು ಸದನಕ್ಕೆ ಉತ್ತರ ಕೊಡಬೇಕಾಗುತ್ತದೆ. ಆದರಿಂದ ನೀವು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ.

ಛೇರ್‌ಮನ್.—ಮಾನ್ಯ ಸದಸ್ಯರು ದಯಾಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ತಾವು ಮುಖ್ಯ ಮಂತ್ರಿಗಳು ಆದಮೇಲೆ ಅದರ ಜವಾಬ್ದಾರಿ ತಮಗಿಲ್ಲವೇ ?

(ಗೊಂದಲ)

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಬಂಗಾರಪ್ಪನವರು ಸಭೆಯ ಕಾರ್ಯಕಲಾಪಗಳಲ್ಲಿ ಯಾವರೀತಿ ಭಾಗವಹಿಸಬೇಕೆಂದು ತಿಳಿದುಕೊಳ್ಳಬೇಕು. ಹಾಗೆಯೇ ನೂತನ ಸದಸ್ಯರಿಗೆ ತಿಳುವಳಿಕೆ ಕೊಡಬೇಕು.

(ಗೊಂದಲ)

ಛೇರ್‌ಮನ್.—ನಾನು ಎದ್ದು ನಿಂತಿರುವಾಗ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರೆಲ್ಲರೂ ಒಳ್ಳೆಯ ಸಂಪ್ರದಾಯವನ್ನು ಇಲ್ಲಿ ಹಾಕಬೇಕು. ಈಗ ನಾನು ರೂಲಿಂಗ್ ಕೊಡುತ್ತಿದ್ದೇನೆ. ಅವರು ಮಾತನಾಡಿದ್ದು ಸರಿ, ಇವರು ಮಾತನಾಡಿದ್ದು ಸರಿ ಈಗ ಮಾನ ಭೀಮಣ್ಣ ಖಂಡ್ರೆಯವರು ಮಾತನಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಅದು ಪಾರ್ಲಿಮೆಂಟರಿ, ಅನ್ ಪಾರ್ಲಿಮೆಂಟರಿ ಪ್ರಶ್ನೆ ಅಲ್ಲ...

(ಗೊಂದಲ)

ಛೇರ್‌ಮನ್.—ಅವರು ಹೇಳಿದ್ದು ಅನ್‌ಪಾರ್ಲಿಮೆಂಟರಿ ಅಲ್ಲ, ಇವರು ಹೇಳಿದ್ದೂ ಅನ್‌ಪಾರ್ಲಿಮೆಂಟರಿ ಅಲ್ಲ, ಎಲ್ಲಾ ರೆಕಾರ್ಡ್ ಆಗಿದೆ ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳ ಬೇಕು.

ಶ್ರೀ ಎಸ್ ಬಂಗಾರಪ್ಪ.—ಅಧ್ಯಕ್ಷರೆ ಆ ರೀತಿ ಮಾಡತಕ್ಕ ಆಪಾದನೆ ಏನು ಇದೆ ಅದನ್ನು ಕೈಬಿಡುವುದು ಒಳ್ಳೆಯದು. ಮಾನ್ಯ ಸದಸ್ಯರು ಆ ರೀತಿ ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೆ, ನಾನು ಬೇರೆಯವರಿಂದ ಪಾಠ ಕಲಿಯಬೇಕಾಗಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.—ಇಲ್ಲಿ ಪಾರ್ಲಿಮೆಂಟರಿ ಅನ್‌ಪಾರ್ಲಿಮೆಂಟರಿ ಪ್ರಶ್ನೆ ಬರಲಿಲ್ಲ. ಇಲ್ಲಿ ಆಪಾದನೆ ವಿಚಾರ ಬಂದಿದೆ. ಎಕ್ಸೈಜ್ ಕಂಟ್ರಾಕ್ಟರ್ ಜೊತೆ ಶಾಮೀಲು ಆಗಿದ್ದಾರೆಂದು ನೇರ ವಾಗಿ ಆಪಾದನೆ ಮಾಡಿದರು. ಕಾನೂನು ಪ್ರಕಾರ ಸದಸ್ಯರು ಬರಹದ ಮೂಲಕ ಕೊಟ್ಟು ತಮಗೆ ಕೊಟ್ಟು ನೇರವಾಗಿ ಆಪಾದನೆ ಮಾಡತಕ್ಕ ಹಕ್ಕು ಇಲ್ಲಿ ಇದೆ. ಇದು ಪಾರ್ಲಿಮೆಂಟರಿ, ಅನ್‌ಪಾರ್ಲಿ ಮೆಂಟರಿ ಪ್ರಶ್ನೆ ಅಲ್ಲ. ಶಾಮೀಲು ಎನ್ನುವ ಶಬ್ದ ಅನ್‌ಪಾರ್ಲಿಮೆಂಟರಿ ಅಲ್ಲ. ಅವರು ಮಾತ ನಾಡುವಾಗ ಎಕ್ಸೈಜ್ ಕಂಟ್ರಾಕ್ಟರ್ ಜೊತೆ ಶಾಮೀಲಾಗಿದ್ದಾರೆಂದು ನೇರವಾಗಿ ಆಪಾದನೆ ಮಾಡಿದ್ದಾರೆ. ಅವರಲ್ಲಿ ಸಾಹಿತ್ಯ ಇರಬಹುದು. ಒಂದು ವೇಳೆ ಇರುವುದಾದರೆ, ಅದನ್ನು ಒದಗಿಸಿ, ಸಾಬೀತು ಮಾಡ ಬೇಕು. ಇಲ್ಲದಿದ್ದರೆ ಅದಕ್ಕೆ ಆಗತಕ್ಕ ಶಿಕ್ಷೆ ಅನುಭವಿಸಬೇಕಾಗುತ್ತದೆ. ಅವರು ಮಾನ್ಯ ಬಂಗಾರಪ್ಪ ನವರಿಗೆ ಏನು ಹೇಳುತ್ತಿದ್ದಾರೆ ಅದನ್ನು ಸಾಬೀತು ಮಾಡುವುದಾದರೆ ಸರಿ ಇಲ್ಲದೇ ಇದ್ದರೆ ಅದನ್ನು ವಿತ್ ಡ್ರಾ ಮಾಡಲಿ, ಮುಖ್ಯ ಮಂತ್ರಿಗಳು ಎಂದು ವೈಯುಕ್ತಿಕವಾಗಿ ಏನಾದರೂ ಹೇಳಿದ್ದರೆ ಅದೂ ಕೂಡ ತಪ್ಪಾಗುತ್ತದೆ. ಅಲ್ಲದೆ ಅದನ್ನು ಅವರು ಪ್ರತಿಪಾದನೆ ಕೂಡ ಮಾಡಬೇಕಾಗುತ್ತದೆ.

ಛೇರ್‌ಮನ್.—ತಾವು ದಯವಿಟ್ಟು ಕೂಡಿ.

ಶ್ರೀ ಸಿ. ಬೈರೇಗೌಡ.—ನೀವು ಇವತ್ತು ಅವರ ಜೊತೆಯಲ್ಲಿ ಶಾಮೀಲಾಗಿದ್ದೀರೋ ಏನೋ ಎಂದು ಅನುಮಾನ ಬರುತ್ತದೆ, ಆದ್ದರಿಂದ ಮಾನ್ಯ ಬಂಗಾರಪ್ಪನವರು ತಮ್ಮ ಅಭಿಪ್ರಾಯವನ್ನು ಏನು ಹೇಳುತ್ತಾರೆಂದು ವಿವರಣೆ ಕೇಳಿದ್ದೇನೆ. ಆದರೆ ಅವರು ಶಾಮೀಲಾಗಿದ್ದಾರೆಂದು ನಾನು ಹೇಳಲಿಲ್ಲ. ಮಾನ್ಯ ರಂಗನಾಥರವರು ಏತಕ್ಕೆ ಈ ರೀತಿ ಮಾತನಾಡಿದರೋ ಗೊತ್ತಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಆ ರೀತಿ ಆಪಾದನೆ ಮಾಡಿದ್ದು ಸರಿಯಲ್ಲ. ಆದರೆ ಆಪಾದನೆ ಯನ್ನು ಮಾಡುವ ಹಕ್ಕು ಸದಸ್ಯರಿಗೆ ಇದೆ. ಅದನ್ನು ಸಾಬೀತು ಮಾಡುವುದಾದರೆ ಆಪಾದನೆ ಮಾಡು ವುದು ಸರಿಯೆಂದು ನಾನು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಹಾಗೆ ಹೇಳಲಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅಂದರೆ ನೀವು ಶಾಮೀಲಾಗಿದ್ದೀರಿ ಎನ್ನುವ ಮಾತನ್ನು ನಾನು ಹೇಳಲಿಲ್ಲವೆಂದು ಅವರು ಹೇಳಿದ್ದಾರೆ. ಸರ್ಕಾರ ಅಂದಮಾತ್ರಕ್ಕೇ ನಿಮ್ಮ ಮುಖ್ಯ ಮಂತ್ರಿಗಳ ಮನಸ್ಸಿಗೆ ಕಿರಿಕಿರಿಯಾಗಿದ್ದರೆ ಅದನ್ನು ಸಮಾಧಾನ ಮಾಡುವುದಕ್ಕೆ ನಾನು ಇಲ್ಲಿ ಇಲ್ಲ. ಆದರೆ ಇನ್ನೊಂದು ಸಾರಿ ಈ ರೀತಿ ಕೂತು ಕೊಳ್ಳಿ ಎಂದು ಹೇಳುವುದಕ್ಕೆ ಹೋಗಬಾರದು.

† ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಮಾನ್ಯ ಅಧ್ಯಕ್ಷರೆ, ಒಬ್ಬ ಉರ್ದು ಕವಿ ಒಂದುಕಡೆ ಬಹಳ ಚೆನ್ನಾಗಿ ಹೇಳಿದ್ದಾನೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾದಮೇಲೆ ರೈತರಿಗೆ ನಾವು ಏನೇನೋ ಕೊಡುತ್ತಿದ್ದೇವೆ, ಇಲ್ಲಿ ರಾಮರಾಜ್ಯವನ್ನು ಮಾಡುತ್ತಿದ್ದೇವೆ, ಬಡ್ಜೆಟ್‌ನ್ನು ಒಳ್ಳೆಯ ರೀತಿಯಿಂದ ತರುತ್ತಿದ್ದೇವೆ, ಸಮಾಜ ವಾದವನ್ನು ತರುತ್ತಿದ್ದೇವೆ ಎಂದು ಮುಂತಾಗಿ ಏನೇನೋ ವಿಚಾರಗಳನ್ನು ತಮ್ಮ ಮ್ಯಾನಿಫೆಸ್ಟೋದಲ್ಲಿ ಹೇಳಿದ್ದಾರೆ. ಆದರೆ ಇವರು ಕಾರ್ಯತಃ ಏನಾದರೂ ಅನುಷ್ಠಾನದಲ್ಲಿ ತಂದಿದ್ದಾರೆಯೇ ಎಂದು ಈ ಬಡ್ಜೆಟ್‌ನ್ನು ನೋಡಿದರೆ ಅವರು ಹೇಳಿದ್ದು ಎಲ್ಲಾ ಬೋಳಾಗಿದೆ ಎಂದು ಅನಿಸುತ್ತದೆ. ಈ ಬಡ್ಜೆಟ್‌ನ್ನು ನೋಡಿದರೆ, ಅವರ ಪ್ರಣಾಳಿಕೆಯಲ್ಲಿ ಏನೇನು ಸಾಧನೆಗಳು ಇವೆಯೆಂದು ಹೇಳಿದ್ದಾರೆ ಆ ಸಾಧನೆಗಳ ಬಗ್ಗೆ ಇಲ್ಲಿ ಯಾವುದೇ ಹುರುಳಿಲ್ಲ ಎಂದು ಅನ್ನಿಸುತ್ತದೆ. ೫೦ ಪುಟಗಳ ದೊಡ್ಡ ಪುಸ್ತಕವನ್ನು ಏನು ಮಾಡಿದ್ದಾರೆ ಅದನ್ನು ಇನ್ನೂ ಕಡಿಮೆ ಮಾಡಬಹುದಿತ್ತು. ನಿಜವಾಗಿಯೂ ಇದರಲ್ಲಿ ಯಾವುದೇ ಹುರುಳಿಲ್ಲ ಎಂಬುದು ವಾಸ್ತವಿಕವಾದುದೆಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಹೇಳಬಯಸು ತ್ತೇನೆ.

ಸ್ವಾಮಿ, ನಿಮ್ಮ ಬಡ್ಜೆಟ್‌ನಲ್ಲಿ ಆಗಲಿ, ಅಥವಾ ಮಾನ್ಯ ರಾಜ್ಯಪಾಲರ ಭಾಷಣದಲ್ಲಾಗಲಿ ನಾವು ಯಾವ ರೀತಿಯಿಂದ ದೇಶದಲ್ಲಿ ಸಮಾಜವಾದವನ್ನು ತರಬೇಕೆಂದು ಘೋಷಣೆ ಮಾಡಿದ್ದೇವೆ, ರಾಜ್ಯಾಂಗ ಬದ್ಧವಾಗಿ ತರಬೇಕೆಂದು ಉದ್ದೇಶಿಸಿದ್ದೇವೆ ಎನ್ನುವ ಬಗ್ಗೆ ಒಂದು ಪದ ಕೂಡ ಇಲ್ಲಿ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿ ಇದನ್ನು ವಿರೋಧ ಮಾಡುತ್ತೇನೆ ಕಳೆದ ೩೦–೩೫ ವರ್ಷಗಳಿಂದ ಎಷ್ಟು ಚುನಾವಣೆ ಗಳಾಗಿವೆ, ಜನತೆಗೆ ಎಷ್ಟು ಸೌಕರ್ಯಗಳು ಸಿಕ್ಕಿವೆ ಎಂಬುದನ್ನು ನೋಡುತ್ತಿದ್ದೇವೆ ತಮಗೆ ಗೊತ್ತಿರುವು ದಾದರೆ ಸರ್ಕಾರ ಜನತೆಗೋಸ್ಕರ ಹಾಕಿಕೊಂಡ ಯಾವ ಕಾರ್ಯಕ್ರಮಗಳೂ ಸರಿಯಾಗಿ ಅವರಿಗೆ ತಲುಪಿಲ್ಲ. ಇದಕ್ಕೆ ಕಾರಣ ಎಂದರೆ ಕರಪ್ಷನ್, ಇಂಬ್ಯಾಲೆನ್ಸ್. ಈ ರೀತಿ ಆಗಲು ಕಾರಣ ಎಂದರೆ ಜನತೆಗೆ ಸರಿಯಾದ ವಿದ್ಯಾಭ್ಯಾಸವನ್ನು ಕೊಟ್ಟಿಲ್ಲದಿರುವುದು.

ಮಾನ್ಯ ಅಧ್ಯಕ್ಷರೆ, ನಾನು ಸಂಕ್ಷಿಪ್ತವಾಗಿ ಹೇಳುವುದಾದರೆ ಪ್ರೊಹಿಬಿಷನ್ ಬಗ್ಗೆ ಮಾನ್ಯ ರಾಮ ಕೃಷ್ಣ ಹೆಗಡೆಯವರ ಪಾಲಿಸಿ ಏನು ಎಂಬುದನ್ನು ತಿಳಿಸಬೇಕು ಮಾನ್ಯ ಮೊರಾರ್ಜಿ ದೇಸಾಯಿಯವರು ಜನತಾಪಕ್ಷದ ನಾಯಕರು ಅವರು ಪ್ರಧಾನ ಮಂತ್ರಿಯಾಗಿದ್ದಾಗ ಈ ಪ್ರೊಹಿಬಿಷನ್ ತೆಗೆಯಬೇಕೆಂದು ಪ್ರಯತ್ನ ಮಾಡಿದರು. ಅವರ ಪಟ್ಟ ಶಿಷ್ಯರಾದ ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಬಡ್ಜೆಟ್ ಭಾಷಣದಲ್ಲಿ ಪ್ರೊಹಿಬಿಷನ್ ತೆಗೆಯುವ ಬಗ್ಗೆ ಒಂದು ಮಾತನ್ನೂ ಕೂಡ ಹೇಳಿಲ್ಲ. ಆದ್ದರಿಂದ ಇದರ ಬಗ್ಗೆ ತಮ್ಮ ಅಭಿಪ್ರಾಯ ಏನೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಸ್ಪಷ್ಟವಾಗಿ ಕೇಳುತ್ತಿದ್ದೇನೆ. ಅಷ್ಟೇ ಅಲ್ಲ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಏನು ನೀತಿಯನ್ನು ಇಟ್ಟುಕೊಂಡಿದ್ದಾರೆಂಬುದನ್ನೂ ಹೇಳಿಲ್ಲ ಏಕೆಂದರೆ ಇದನ್ನು ಹೋಗಲಾಡಿಸಲು ಕಾನೂನು ಮಾಡಿ ೨೦-೩೦ ವರ್ಷವಾದರೂ ಆ ಕಾನೂನು ಸರಿಯಾಗಿ ಜಾರಿಗೆ ಬಂದಿಲ್ಲ, ತಾವು ಈ ಕಾನೂನನ್ನು ಸರಿಯಾಗಿ ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವೇ ? ಇಲ್ಲವೆ ? ಅಥವಾ ಈ ಕಾನೂನನ್ನೇ ತೆಗೆದುಹಾಕುತ್ತೀರಾ ? ಎಂಬುದನ್ನು ದಯವಿಟ್ಟು ತಿಳಿಸಬೇಕು. ನಮ್ಮ ರಾಜ್ಯದಲ್ಲಿ ಭಿಕ್ಷುಕರು ಬಹಳ ಸಂಖ್ಯೆಯಲ್ಲಿದ್ದಾರೆ. ಅವರಿಗಾಗಿ ಬಹಳಷ್ಟು ಹಣ ವನ್ನು ಖರ್ಚುಮಾಡಿ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತಿದ್ದೀರಿ. ಹಿಂದೆ ಇವರಿಗೋಸ್ಕರ ಒದಗಿಸಿದ್ದ ೭೫ ಲಕ್ಷ ರೂ.ಗಳ ಪೈಕಿ ೫೦ ಲಕ್ಷ ರೂ. ಇನ್ನೂ ಹಾಗೆಯೇ ಖರ್ಚಾಗದೆ ಉಳಿದಿದೆ. ಅವರಿಗೆ ವಸತಿಸೌಕರ್ಯವನ್ನು ಕಲ್ಪಿಸಿಕೊಡಲಿಲ್ಲ. ತಮ್ಮ ಬಡ್ಜೆಟ್ ಭಾಷಣದಲ್ಲಿ ಈ ಭಿಕ್ಷುಕರ ಬಗ್ಗೆ ಒಂದು ಮಾತನ್ನೂ ಕೂಡ ಹೇಳಿಲ್ಲದಿರುವುದು ನಿಜಕ್ಕೂ ವಿಷಾದನೀಯ ಸಂಗತಿ. ಇವತ್ತು ೫೦ ಪರ್ಸೆಂಟ್‌ಗಿಂತ ಹೆಚ್ಚಿನ ಜನರು ಬಡತನದ ರೇಖೆಯ ಕೆಳಗೆ ಇದ್ದಾರೆ. ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ಕೂಡ ಇಲ್ಲಿ ಏನೂ ಇಲ್ಲ. ಆದ್ದರಿಂದ ನಾನು ಸ್ಪಷ್ಟವಾಗಿ ತಮ್ಮನ್ನು ಕೇಳುತ್ತೇನೆ. ಅದೇರೀತಿ ಬಡವರು ಮತ್ತು ಶ್ರೀಮಂತರು ಎನ್ನುವ ಭೇದಭಾವ ಏನಿದೆ ಅದನ್ನು ತೊಡೆದು ಹಾಕಲು ನಿಮ್ಮ ಪಾಲಿಸಿ ಏನು ಎಂಬುದನ್ನೂ ಕೇಳಬಯಸುತ್ತೇನೆ.

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇನ್ನು ಕುಡಿಯುವ ನೀರಿನ ಭಾವಿಗಳ ವಿಚಾರವನ್ನು ತೆಗೆದುಕೊಂಡರೆ ೩೦–೩೨ ಲಕ್ಷ ಜನಸಂಖ್ಯೆ ಇರತಕ್ಕ ಈ ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನೊದಗಿಸುವ ಸಲುವಾಗಿ ೬೨ ಕೋಟಿ ರೂ.ಗಳನ್ನು ಇಟ್ಟಿದ್ದೀರಿ. ಇದೇ ಆಧಾರದಮೇಲೆ ತೆಗೆದುಕೊಂಡರೆ ೨೬ ಸಾವಿರ ಹಳ್ಳಿಗಳಲ್ಲಿರತಕ್ಕ ಜನರಿಗೆ ಕುಡಿಯುವ ನೀರನ್ನೊದಗಿಸಲು ಕನಿಷ್ಟ ೨೦೦ ಕೋಟಿ ರೂ.ಗಳನ್ನಾದರೂ ಇಡಬೇಕಾಗಿತ್ತು. ಆದರೆ ಇಲ್ಲಿ ನೀವು ಇಟ್ಟಿರುವುದು ಕೇವಲ ೨.೫೦ ಕೋಟಿ ರೂ. ಮಾತ್ರ. ತಮಗೆ ಗೊತ್ತಿರುವಂತೆ ನಮ್ಮ ಬೀದರ್ ಜಿಲ್ಲೆಯಲ್ಲಿ ಪ್ರತಿಸಾರಿಯೂ ನೀರಿನ ಅಭಾವ ಇದ್ದೇ ಇರುತ್ತದೆ. ಈ ಅಭಾವವನ್ನು ಹೋಗಲಾಡಿಸುತ್ತೇವೆಂದು ಸರ್ಕಾರದವರು ಹೇಳುತ್ತಲೇ ಇರುತ್ತೀರಿ ಆದರೆ ಇದುವರೆಗೂ ಈ ಬಗ್ಗೆ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಇತ್ತೀಚೆಗೆ ಅಂದರೆ ಕಳೆದ ೨೦ ದಿವಸಗಳ ಹಿಂದೆ ನಾನು ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರ ಮೀಟಿಂಗ್‌ನಲ್ಲಿ ಭಾಗವಹಿಸಿದ್ದಾಗ ಈ ಬಾಬಿಗಾಗಿ ಒಂದು ಪೈಸೆಯನ್ನೂ ಕೂಡ ಸರ್ಕಾರದವರು ಕೊಟ್ಟಿಲ್ಲವೆಂದು ತಿಳಿದುಬಂತು. ಕುಡಿಯುವ ನೀರಿನ ಅಭಾವದಿಂದಾಗಿ ಅಲ್ಲಿನ ಜನರು ಬೇರೆ ಕಡೆಗೆ ವಲಸೆ ಹೋಗುತ್ತಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಯವರು ತಮಗೆ ಪತ್ರವನ್ನು ಬರೆದಿದ್ದಾರೆ ಮತ್ತು ನಾನೂ ಕೂಡ ತಮಗೆ ಟೆಲಿಗ್ರಾಂನ್ನು ಕಳುಹಿಸಿದ್ದೇನೆ. ಇಷ್ಟಾದರೂ ತಾವು ಕೂಡಲೇ ಕ್ರಮ ತೆಗೆದುಕೊಂಡು ಅಲ್ಲಿ ಭಾವಿ ತೋಡಿಸಿ ಕುಡಿಯುವ ನೀರನ್ನೊದಗಿಸುವ ಪ್ರಯತ್ನವನ್ನು ಮಾಡಿಲ್ಲ.

ಆರನೂರು ಹಳ್ಳಿಗಳಲ್ಲಿ ೩೬೦ ಹಳ್ಳಿಗಳಲ್ಲಿ ಕುಡಿಯುವ ನೀರೇ ಇಲ್ಲ. ನೀರಿನ ಸಲುವಾಗಿ ಜನ ಒಂದು ಮೈಲು ದೂರ ಹೋಗಿ ತರುತ್ತಿದ್ದಾರೆ. ಈ ತೊಂದರೆಯಿಂದಾಗಿ ಜನರು ಊರನ್ನೇ ಬಿಟ್ಟು ಹೈದರಾಬಾದಿನ ಕಡೆಗೆ ಹೋಗುತ್ತಿದ್ದಾರೆ. ಇದನ್ನು ತಪ್ಪಿಸಲು ಏನು ವ್ಯವಸ್ಥೆಯಾಗಬೇಕು ಅದನ್ನು ಆಯವ್ಯಯಪಟ್ಟಿಯಲ್ಲಿ ನಮೂದು ಮಾಡಿಲ್ಲ ಇದರ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸನ್ನೂ ಕೂಡ ಕೊಟ್ಟಿದ್ದೆನು. ಈವತ್ತಿಗೆ ಹತ್ತು ದಿವಸಗಳು ಆಯಿತು. ಅದನ್ನು ಯಾವಾಗ ತೆಗೆದು ಕೊಳ್ಳುತ್ತೀರಿ ಎಂಬುದಕ್ಕೆ ರಿಪ್ಲೈ ಕೂಡ ಬಂದಿಲ್ಲ. ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮುಖಾಂತರ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಈ ಬಾಬಿಗೆ ಸಾಕಷ್ಟು ಹಣವನ್ನು ಒದಗಿಸಬೇಕು. ಕೊಳವೆ ಭಾವಿಗಳನ್ನು ತೆಗಸಬೇಕು. ಈವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಅಮೆರಿಕಾದಿಂದ ಬಂದಿರತಕ್ಕಂಥ ಎಂಟು ಹೊಸ ರಿಗ್ಸ್‌ನ್ನು ತೆಗೆದುಕೊಳ್ಳುವುದಕ್ಕಾಗಿ ಹೋಗಿದ್ದಾರೆಂಬ ಸುದ್ದಿಯನ್ನು ಕೇಳಿ ಬಹಳ ಸಂತೋಷವಾಯಿತು. ಒಂದು ದಿವಸಕ್ಕೆ ಒಂದು ಬೋರ್‌ವೆಲ್‌ನ್ನು ತೆಗೆಯತಕ್ಕಂಥ ಸಾಮರ್ಥ್ಯವನ್ನು ಹೊಂದಿರುವ ಈ ರಿಗ್ಸ್ ಬರುತ್ತಿರುವುದು ಬಹಳ ಸಂತೋಷದಾಯಕವಾದ ವಿಚಾರ. ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, 'ಬೀದರ್ ಡಿಸ್ಟ್ರಿಕ್ಟ್ ಕುಡಿಯುವ ನೀರಿಗಾಗಿ ಬಹಳವಾಗಿ ತೊಂದರೆಯನ್ನು ಪಡುತ್ತಿರುತ್ತಾರೆ' ಪೇಟೆಯಲ್ಲಿರುವ ಜನರಿಗೆ ಬಹಳಮಟ್ಟಿಗೆ ಅನುಕೂಲತೆಗಳನ್ನು ಸರ್ಕಾರದವರು ಕಲ್ಪಿಸಿಕೊಡುತ್ತಾರೆ ಆದರೆ ಹಳ್ಳಿಗಳ ಕಡೆ ಹೆಚ್ಚಿನ ಗಮನವನ್ನು ಹರಿಸುವುದಿಲ್ಲ. ಈ ದೃಷ್ಟಿಯಿಂದ ಹಳ್ಳಿಗಳ ಕಡೆ ಕುಡಿಯುವ ನೀರಿನ ಸಲುವಾಗಿ ಎಷ್ಟು ಹಣವನ್ನು ತಾವು ಬಡ್ಜೆಟ್‌ನಲ್ಲಿ ಕೊಟ್ಟಿದ್ದೀರಿ ಎಂಬುದರ ಬಗ್ಗೆ ತಮ್ಮ ಉತ್ತರದಲ್ಲಿ ತಿಳಿಸಬೇಕು. ಮತ್ತು ಈಗ ಉಂಟಾಗಿರತಕ್ಕಂಥ ಪರಿಸ್ಥಿತಿಯನ್ನು ದೂರ ಮಾಡತಕ್ಕಂಥ ಪ್ರಯತ್ನವನ್ನು ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಾವು ತಮ್ಮ ಪ್ರಣಾಳಿಕೆಯಲ್ಲಿ ಬಹಳಷ್ಟು ಹೇಳಿದ್ದೀರಿ. ಶ್ರೀಮಾನ್ ಬಂಗಾರಪ್ಪನವರು ತಮ್ಮ ಪ್ರಣಾಳಿಕೆಯಲ್ಲಿ ಗ್ರಾಮ ಅಭಿವೃದ್ಧಿಯ ಬಗ್ಗೆ, ವ್ಯವಸಾಯ ಉತ್ಪಾದನೆಯ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡುವ ವಿಚಾರವನ್ನು ಪ್ರಸ್ತಾಪಿಸಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ರೈತರ ಬಗ್ಗೆ ಹಿಂದಿನ ಸರ್ಕಾರಕ್ಕೂ ಈವತ್ತಿನ ಸರ್ಕಾರಕ್ಕೂ ಹೋಲಿಸಿ ನೋಡಿದರೆ ನೀವು ಏನು ಘೋಷಣೆ ಮಾಡಿರುತ್ತೀರೋ ಆ ಘೋಷಣೆಯಂತೆ ಹತ್ತು ಪೈಸೆ ಕೆಲಸವನ್ನೂ ಕೂಡ ನೀವು ಮಾಡಿಲ್ಲ. ಹಿಂದಿನ ಸರ್ಕಾರದವರು ರೈತರಿಗೆ ಕೊಟ್ಟದ್ದು ಏನು ಎನ್ನುವುದನ್ನು ತಿಳಿಸುವಾಗ ತಾವು ಏನು ಕೊಟ್ಟದ್ದು ಎಂದರೆ ಏನೇನೂ ಇಲ್ಲ. ತಾವು ಏನು ಕೊಟ್ಟಿದ್ದೀರಿ ಅದನ್ನು ಬಹಳ ಬುದ್ಧಿವಂತಿಕೆಯಿಂದ ಹೇಳಿದ್ದೀರಿ. ರೈತರು ತೆಗೆದುಕೊಂಡಿರತಕ್ಕಂಥ ಸಾಲವನ್ನು ಇನ್ನು ಮೂರು ತಿಂಗಳು ಆರು ತಿಂಗಳಲ್ಲಿ ಕಟ್ಟಿದರೆ ಅವರಿಗೆ ಬಡ್ಡಿಯಲ್ಲಿ ಮನ್ನಾ ಮಾಡಲಾಗುತ್ತದೆಂದು ತಾವು ಹೇಳಿರುತ್ತೀರಿ. ಜನರು ಯಾರು ಹಣವನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿರುತ್ತಾರೆ ? ತಾವು ಹೇಳುತ್ತಿರುವುದನ್ನು ನೋಡಿದರೆ, ಜನರಿಗೆ ಕೊಟ್ಟಂತೆ ಇರಬೇಕು, ಅವರಿಗೆ ಈ ಅನುಕೂಲ ಸಿಕ್ಕಲೂ ಬಾರದು ಎನ್ನುವ

ಹಾಗೆ ಮಾಡಿದ್ದೀರಿ. ಲ್ಯಾಂಡ್ ರೆವಿನ್ಯೂ ಎಕ್ಸ್‌ಮಪ್ಷನ್ ಬಗ್ಗೆ ಹೇಳುವುದಾದರೆ, ಇಷ್ಟೆಲ್ಲ ರೈತರು ಚಳುವಳಿಯನ್ನು ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ರೈತರು ಚಳುವಳಿಯನ್ನು ಮಾಡಿದಾಗ ಭಾಷಣ ಮಾಡಿ ಜನತಾ ಪಾರ್ಟಿ ಅಧಿಕಾರಕ್ಕೆ ಬಂದನಂತರ ಎಲ್ಲಾ ಬಾಕಿಯನ್ನು ಮಾಫಿ ಮಾಡುತ್ತೇವೆಂದು ಹೇಳಿದಿರಿ. ಅದನ್ನು ಮಾಡಲಿಕ್ಕೆ ತಮಗೆ ಶಕ್ತಿ ಇಲ್ಲ. ಫೇರ್ ಪ್ರೈಸ್ ಬಗ್ಗೆ ನಿಮ್ಮ ಪ್ರಣಾಲಿಕೆಯಲ್ಲಿ ಹೇಳಿದ್ದೀರಿ, ನೀವು ಅಧಿಕಾರಕ್ಕೆ ಬಂದಿರಿ. ಆದರೂ ಫೇರ್ ಪ್ರೈಸ್ ಫಿಕ್ಸ್ ಮಾಡಲಿಲ್ಲ. ಅಗ್ರಿಕಲ್ಚರ್ ಬಗ್ಗೆ ಹೇಳುವಾಗ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ ಆದರೆ ಈಗ ಆ ಪ್ರಕಾರವಾಗಿ ಕೊಡಲು ಸೆಂಟ್ರಲ್ ಗೌವರ್ನಮೆಂಟನ್ನು ಕೇಳಬೇಕೆಂದು ಹೇಳುತ್ತಿದ್ದೀರಿ. ತಮ್ಮ ಮಾತಿನಂತೆಯೇ ತಾವು ನಡೆದುಕೊಳ್ಳುತ್ತಿಲ್ಲ. ತಾವು ಅಧಿಕಾರಕ್ಕೆ ಬಂದರೂ ಕೂಡ ಈ ರೀತಿ ನಡೆದುಕೊಳ್ಳುತ್ತಿದ್ದೀರಿ, ಫೇರ್ ಪ್ರೈಸ್ ಬಗ್ಗೆ, ರೈತರ ಬಗ್ಗೆ ಒಂದು ಮಾತನ್ನು ಕೂಡ ಆಡಿಲ್ಲ ಹಿಂದಿನ ಸರ್ಕಾರದವರು ತಮಗೆ ಗೊತ್ತಿರುವಹಾಗೆ ಕ್ರಾಪ್ ಇನ್‌ಷೂರೆನ್ಸ್‌ನ್ನು ಜಾರಿಗೆ ತಂದಿದ್ದರು. ಇಂದು ರೈತರು ಬದುಕಬೇಕಾದರೆ ಕ್ರಾಪ್ ಇನ್‌ಷೂರೆನ್ಸ್ ಬಹಳ ಅಗತ್ಯವಾಗಿ ಇರುತ್ತದೆ, ಚೈನಾದೇಶದಲ್ಲಿ ಕ್ರಾಪ್ ಇನ್‌ಷೂರೆನ್ಸ್ ಇರುತ್ತದೆ, ಕೋಆಪರೇಟೀವ್ ಸೊಸೈಟಿಗಳ ಮುಖಾಂತರ ತೆಗೆದುಕೊಂಡ ಹಣವನ್ನು ೯೦ ಪರ್ಸೆಂಟ್ ಹಣವನ್ನು ವಾಪಸ್ ಕೊಡುತ್ತಿದ್ದಾರೆ. ಇದಕ್ಕೆ ಕಾರಣವೇನೆಂದು ಕೇಳಿದರೆ ತಮ್ಮಲ್ಲಿ ಕ್ರಾಪ್ ಇನ್‌ಷೂರೆನ್ಸ್ ಇರುತ್ತದೆ. ಬೆಳೆ ಬರದೆ ಇದ್ದರೂ ಕೂಡ ೭೫-೮೦ ಪರ್ಸೆಂಟ್ ಇನ್‌ಷೂರೆನ್ಸ್ ಕೊಡುತ್ತಾರೆಂದು ಹೇಳುತ್ತಾರೆ ಆದ್ದರಿಂದ ನಾವು ಸರ್ಕಾರದಲ್ಲಿ ಬಾಕಿ ಇರತಕ್ಕಂಥ ಹಣವನ್ನು ವಾಪಸ್ ಕೊಡುತ್ತಿದ್ದೇವೆಂದು ಹೇಳುತ್ತಾರೆ. ಆದ್ದರಿಂದ ಕ್ರಾಪ್ ಇನ್‌ಷೂರೆನ್ಸ್ ಬಗ್ಗೆ ಹಿಂದಿನ ಸರ್ಕಾರ ನಿರ್ಣಯ ಮಾಡಿ ೫-೬ ತಾಲ್ಲೂಕುಗಳನ್ನು ಎಕ್ಸ್‌ಪಿರಿಮೆಂಟ್ ಬೇಸಿಸ್‌ಮೇಲೆ ತೆಗೆದುಕೊಂಡಿದ್ದರು ಇದರ ಬಗ್ಗೆ ತಾವು ಏನು ಮಾತನಾಡಿಲ್ಲ, ಇದನ್ನು ಮುಂದುವರಿಸಿಕೊಂಡು ಹೋಗಲು ತಮ್ಮ ಧೋರಣೆ ಏನು ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ರೈತರದು ಮುಖ್ಯವಾಗಿ ೪-೫ ಡಿಮ್ಯಾಂಡ್‌ಗಳು ಇರುತ್ತವೆ. ಅದರ ಬಗ್ಗೆ ಒಂದು ಮಾತನ್ನು ಕೂಡ ತಾವು ಹೇಳಿಲ್ಲ ತಾವು ೩೬ ಕೋಟಿ ರೂಪಾಯಿಗಳನ್ನು ಕೊಟ್ಟಿರುತ್ತೇವೆಂದು ಏನು ಹೇಳಿದ್ದೀರಿ, ಅದು ಜನರನ್ನು ತಪ್ಪು ಕಲ್ಪನೆ ಮಾಡಲಿಕ್ಕೆ ಹೇಳಿದ್ದೀರಿ. ತಮ್ಮ ಉದ್ದೇಶ ಕೊಡಲಿಕ್ಕೆ ಅಲ್ಲ. ಕೊಡಲಿಕ್ಕೆ ಸಾಧ್ಯವೂ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಹಿಂದಿನ ಸರ್ಕಾರ ೧೦ ಎಕರೆಗಳವರೆಗೂ ಲ್ಯಾಂಡ್ ರೆವಿನ್ಯೂ ಎಕ್ಸ್‌ಮಪ್ಷನ್ ಕೊಟ್ಟಿದ್ದರು. ಬೆಟರ್‌ಮೆಂಟ್ ಲೆವಿ, ಎಲೆಕ್ಟ್ರಿಸಿಟಿ ಚಾರ್ಜ್ ಒಂದು ಪಂಪ್‌ಸೆಟಿಗೆ ೧೫೦ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದುದು ಬರೆ ೫೦ ರೂಪಾಯಿಗಳನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಇಡಿ ಇಂಡಿಯಾ ದೇಶದಲ್ಲಿ ಯಾವ ರಾಜ್ಯವೇ ಆಗಲಿ ಈ ರೀತಿಯಾದ ಒಂದು ಸೌಲಭ್ಯವನ್ನು ರೈತರಿಗೆ ಕೊಟ್ಟಿರಲಿಲ್ಲವೆಂದು ಸ್ಪಷ್ಟವಾಗಿ ಚಾಲೆಂಜ್ ಮಾಡಿ ಹೇಳುತ್ತೇನೆ.

ಇನ್ನು ಶುಗರ್ ಕೇನ್ ೧೯ ರೂಪಾಯಿ ಪರ್ಚೇಸ್ ಟ್ಯಾಕ್ಸ್ ಇದ್ದುದನ್ನು ೧೨ ರೂಪಾಯಿಗಳಿಗೆ ಇಳಿಸಿದ್ದೇವೆಂದು ಹೇಳಿರುತ್ತೀರಿ. ಅಂದರೆ ಏಳು ರೂಪಾಯಿಗಳು ಒಂದು ಟನ್ನಿಗೆ ಡಿಫರೆನ್ಸ್ ಆದ ಹಾಗಾಯಿತು. ಈ ಡಿಫರೆನ್ಸ್ ಹಣವನ್ನು ರೈತರಿಗೆ ಮತ್ತೆ ವಾಪಸ್ ಕೊಡುವ ಬಗ್ಗೆ ತಾವು ಏನು ಮಾಡುತ್ತೀರಿ ಎನ್ನುವುದು ಗೊತ್ತಿಲ್ಲ.

ಇನ್ನು ಮಾರ್ಕೆಟ್ ಸೆಸ್ ಬಗ್ಗೆ ಹೇಳುವುದಾದರೆ ಎರಡು ಪರ್ಸೆಂಟ್ ಮಾರ್ಕೆಟ್ ಸೆಸ್ ಎಂದು ವಸೂಲು ಮಾಡುತ್ತಿರುತ್ತಾರೆ. ಆದರೂ ಮಾರ್ಕೆಟ್ ಯಾರ್ಡ್‌ಗಳಲ್ಲಿ ಸರಿಯಾದ ಸೌಲಭ್ಯಗಳು ಇರುವುದಿಲ್ಲ.

೧೯೮೨-೮೩ರಲ್ಲಿ ಒಂಬತ್ತು ಜಿಲ್ಲೆಗಳಿಗೆ ಸೀಡ್ ಲೋನ್ ಎಂದು ಏನು ಇದೆ ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ, ಅದನ್ನು ಮಾಫಿ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಸಪೋರ್ಟ್ ಪ್ರೈಸ್, ರಾಗಿ ಮತ್ತು ಭತ್ತಕ್ಕೆ ೨೫ ರೂಪಾಯಿಗಳನ್ನು ಹೆಚ್ಚುಮಾಡಿ ತೆಗೆದುಕೊಳ್ಳುತ್ತೇವೆಂದು ರೈತರಿಗೆ ಹೇಳಿದ್ದೀರಿ. ಆದರೆ ಡಿಸ್ಟ್ರಿಭೂಶನ್ ಸಲುವಾಗಿ ಅಕ್ಕಿಯ ಬೆಲೆಯನ್ನು ೩೦ ಪೈಸೆ ಕಡಿಮೆ ಮಾಡಿದ್ದೀರಿ. ದೊಡ್ಡ ಜನರು ತಿನ್ನತಕ್ಕ ಅಕ್ಕಿಗೆ ೩೦ ಪೈಸೆಯನ್ನು ಕಡಿಮೆಮಾಡಿ ಯಾರು ಬಡಜನರು ರಾಗಿ, ಜೋಳವನ್ನು ತಿನ್ನುತ್ತಾರೆ ಅಂಥವರಿಗೆ ೧೦ ಪೈಸೆಯನ್ನು ಕಡಿಮೆ ಮಾಡಿದ್ದೀರಿ.

ಸೇಲ್ಸ್ ಟ್ಯಾಕ್ಸ್ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಹಿಂದೆ ಎರಡು ರೂಪಾಯಿ ಇದ್ದುದನ್ನು ನಾಲ್ಕು ರೂಪಾಯಿ ಮಾಡಿದ್ದೀರಿ. ಆದ್ದರಿಂದ ಜನರು ಬದುಕಲಿಕ್ಕೆ ಧಾರಣೆಗಳನ್ನು ಇಟ್ಟಿಲ್ಲವೆಂದು ಸ್ಪಷ್ಟವಾಗಿ ಆಪಾದನೆ ಮಾಡುತ್ತೇನೆ.

೪-೦೦ ಪಿ.ಎಂ.

ಇನ್ನು ಮತ್ತೊಂದು ಮುಖ್ಯ ವಿಚಾರವೆಂದರೆ ಶ್ರೀ ಅರಸ್ ಅವರ ಕಾಲದಲ್ಲಿ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಜಾರಿಗೆ ಬಂತು. ಇದನ್ನು ರದ್ದು ಮಾಡಬೇಕೆಂದು ನಾವು ಚುನಾವಣೆಗೆ ಮೊದಲು ಕಿಸಾನ್ ಸಭೆಯಲ್ಲಿ ಚರ್ಚೆ ನಡೆಸಿ ಒಂದು ನಿರ್ಣಯವನ್ನು ಪಾಸ್ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟ ಮೇಲೆ ಈ ಹಿಂದಿನ ಸರ್ಕಾರದವರು ಅದನ್ನು ರದ್ದು ಮಾಡಿದರು. ಇದರ ಪ್ರಕಾರ ೫೪ ಎಕರೆವರೆಗೆ ಡ್ರೈ ಲ್ಯಾಂಡ್ ಇರುವವರು ಮತ್ತು ಹತ್ತು ಎಕರೆವರೆಗೆ ಇರಿಗೇಷನ್ ಲ್ಯಾಂಡ್ ಇರುವವರು ಕೊಡ ಬೇಕಾಗಿಲ್ಲ.

ಇನ್ನು ಈ ಸಲದ ಬಡ್ಜೆಟ್‌ನಲ್ಲಿ ಕಡ್ಲೆಕಾಯಿ ಮತ್ತು ಕಡ್ಲೆಕಾಯಿ ಬೀಜದ ಮೇಲಿನ ತೆರಿಗೆಯನ್ನು ಹೆಚ್ಚು ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ಈಗಾಗಲೇ ಇದರ ಬಿತ್ತನೆ ಕಾರ್ಯ ಕಡಿಮೆಯಾಗುತ್ತಾ ಬಂದಿದೆ. ಇದರ ಜೊತೆಗೆ ಈ ರೀತಿ ತೆರಿಗೆ ಜಾಸ್ತಿ ಮಾಡುತ್ತಾ ಹೋದರೆ ಯಾರೂ ಸಹ ಇದನ್ನು ಬೆಳೆಯುವುದಿಲ್ಲ. ಈ ರೀತಿ ಆದಾಗ ಪರದೇಶಗಳಿಂದ ಸಬ್ಸಿಡಿ ಕೊಟ್ಟು ತರಿಸಬೇಕಾಗುತ್ತದೆ. ಇಂತಹ ಸಂದರ್ಭ ಬಂದಾಗ ವ್ಯಾಪಾರಸ್ಥರು ಹಣದ ಲೂಟಿ ಮಾಡುವುದಕ್ಕೆ ಅವಕಾಶ ಸಿಗುತ್ತದೆ. ಈ ಕಾರಣ ಗಳಿಂದ ಇದರ ಮೇಲಿನ ತೆರಿಗೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ನೀರಾವರಿ ಯೋಜನೆಗಳ ಕೆಲಸವನ್ನು ಜಾಗ್ರತೆ ಪೂರ್ಣ ಮಾಡುತ್ತೇವೆಂದು ಹೇಳಿದ್ದಾರೆ. ಈ ಬಗ್ಗೆ ಒಂದು ಮಾತನ್ನು ವಿಷಾದದಿಂದ ಹೇಳಬೇಕಾಗಿದೆ. ಅದೇನೆಂದರೆ, ಘಟಪ್ರಭಾ ಯೋಜನೆ ಕೆಲಸ ಪ್ರಾರಂಭವಾಗಿ ೨೫ ವರ್ಷಗಳ ಮೇಲಾಯಿತು. ಆದರೂ ಲೆಫ್ಟ್-ಬ್ಯಾಂಕ್ ಕೆನಾಲ್ ಕೆಲಸ ಇನ್ನೂ ಮುಗಿಯಲಿಲ್ಲ. ಈ ರೀತಿ ನಿಧಾನವಾದ ಕಾರಣ ಹತ್ತು ಕೋಟಿ ರೂಪಾಯಿಗಳ ಎಸ್ಟಿಮೇಟ್ ಈಗ ನೂರು ಕೋಟಿ ರೂಪಾಯಿಗಳಿಗೆ ಹೋಗಿದೆ. ಅದೇರೀತಿ ನಮ್ಮ ಬೀದರ್ ಜಿಲ್ಲೆಯ ಕಾರಂಜಾ ಪ್ರಾಜೆಕ್ಟ್ ಕೆಲಸ ಪ್ರಾರಂಭವಾಗಿ ೧೪ ವರ್ಷಗಳ ಮೇಲಾದರೂ ಇನ್ನೂ ಮುಗಿಯಲಿಲ್ಲ. ಇಲ್ಲಿಯವರೆಗೆ ೧೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಮೊದಲಿನ ೯ ಕೋಟಿ ರೂಪಾಯಿಗಳ ಎಸ್ಟಿಮೇಟ್ ಈಗ ೫೫ ಕೋಟಿ ರೂಪಾಯಿಗಳಿಗೆ ಹೆಚ್ಚಿದೆ. ನಮ್ಮದು ಅತ್ಯಂತ ಹಿಂದುಳಿದ ಜಿಲ್ಲೆ ಎಂಬುದು ಎಲ್ಲರಿಗೂ ಗೊತ್ತು. ನಮ್ಮದು ೧೬ನೇ ಸ್ಥಾನದಲ್ಲಿದೆ. ರಸ್ತೆ, ನೀರಾವರಿ, ವಿದ್ಯಾಭ್ಯಾಸ ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ನಮ್ಮ ಜಿಲ್ಲೆ ಹಿಂದುಳಿದಿದೆ. ಈ ಹಿಂದಿನ ಸರ್ಕಾರದವರು ಕಾರಂಜಾ ಯೋಜನೆಯನ್ನು ೧೯೮೩-೮೪ರಲ್ಲಿ ಮುಗಿಸುವುದಾಗಿ ಹೇಳಿದ್ದರೆ ಈಗಿನ ಸರ್ಕಾರದವರು ೧೯೮೮ರಲ್ಲಿ ಮುಗಿಸುವುದಾಗಿ ನನ್ನ ಒಂದು ಪ್ರಶ್ನೆಗೆ ಉತ್ತರವಾಗಿ ಹೇಳಿದ್ದಾರೆ ೧೯೮೮ರಲ್ಲಿ ಮುಗಿಸುವುದಾಗಿ ಇವರು ಒಪ್ಪಿಕೊಂಡಿರುವ ಕಾರಣ ಪ್ರತಿವರ್ಷವೂ ಇದಕ್ಕೆ ೭-೮ ಕೋಟಿ ರೂಪಾಯಿಗಳನ್ನಾದರೂ ಒದಗಿಸ ಬೇಕಾಗುತ್ತದೆ. ಮಾನ್ಯ ಬಂಗಾರಪ್ಪನವರು ಸಭೆಯಲ್ಲಿ ಮುಖ್ಯಮಂತ್ರಿಗಳು ಹಾಜರಿರಬೇಕೆಂದು ಕೇಳಿ ಕೊಂಡರೂ ಸಹ ಈಗ ಮುಖ್ಯಮಂತ್ರಿಗಳು ಸಭೆಯಲ್ಲಿ ಹಾಜರಿಲ್ಲ.

ಶ್ರೀ ಧರ್ಮಸಿಂಗ್.—ಮಾನ್ಯ ಪಟೇಲ್ ಅವರು ಈ ಕಡೆ ಇದ್ದಾಗ ಬಡ್ಜೆಟ್ ಮೇಲೆ ಚರ್ಚೆ ನಡೆ ಯುವಾಗ ಮುಖ್ಯಮಂತ್ರಿಗಳು ಮತ್ತು ಆರ್ಥಿಕ ಮಂತ್ರಿಗಳು ಸಭೆಯಲ್ಲಿ ಹಾಜರಿರಬೇಕೆಂದು ಹೇಳು ತ್ತಿದ್ದರು.

ಚೇರ್‌ಮನ್.—ನಾನು ಅವರಿಗೆ ಇನ್ನೊಮ್ಮೆ ಹೇಳಿಕಳಿಸುತ್ತೇನೆ.

ಶ್ರೀ ಜೆ.ಎಚ್. ಪಟೇಲ್.—ಮಾನ್ಯ ಸದಸ್ಯರು ಹೇಳುತ್ತಿರುವ ಅಂಶಗಳನ್ನು ನಾನು ಬರೆದು ಕೊಳ್ಳುತ್ತಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ದೇವೇಗೌಡರು ಈಗತಾನೆ ಸಭೆಗೆ ಬಂದರು. ಮಾನ್ಯ ದೇವೇ ಗೌಡರ ಬಗ್ಗೆ ನನಗೆ ಬಹಳ ಗೌರವವಿದೆ. ತಾವು ಈ ಮೊದಲು ಕೊಟ್ಟ ಆಶ್ವಾಸನೆ ಪ್ರಕಾರ ಕಾರಂಜಾ ಯೋಜನೆಯನ್ನು ೧೯೯೦ಕ್ಕೆ ಮುಗಿಸಲು ಪ್ರತಿವರ್ಷದ ಬಡ್ಜೆಟ್‌ನಲ್ಲಿಯೂ ೭-೮ ಕೋಟಿ ರೂಪಾಯಿ ಗಳನ್ನಾದರೂ ಒದಗಿಸಬೇಕಾಗುತ್ತದೆ. ಆದರೆ ೩ ಕೋಟಿ ರೂಪಾಯಿಗಳನ್ನು ಈ ಸಲ ಒದಗಿಸಿದ್ದೀರಿ.

ಈ ರೀತಿಯಾದರೆ ಇದು ಮುಗಿಯುವುದು ಯಾವಾಗ? ಮೊದಲೇ ನಮ್ಮದು ಹಿಂದುಳಿದ ಜಿಲ್ಲೆ. ೧೯೫೬ರಲ್ಲಿ ನಮ್ಮ ಜಿಲ್ಲೆ ಕರ್ನಾಟಕ ರಾಜ್ಯಕ್ಕೆ ಸೇರಿತು. ಫಜಲಾಲ್ ವರದಿ ಪ್ರಕಾರ ನಮ್ಮ ಭಾಗವನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ನಾವು ಚಳುವಳಿ ಮಾಡಿ ಜೈಲಿಗೆ ಹೋದೆವು, ನೂರಾರು ಜನರು ದೆಹಲಿಗೆ ಹೋಗಿ ಚಳುವಳಿ ಮಾಡಿದರು. ನಮ್ಮ ಭಾಗದ ೪ ತಾಲ್ಲೂಕುಗಳನ್ನು ಕರ್ನಾಟಕ ರಾಜ್ಯಕ್ಕೆ ಭಾಷೆಯ ದೃಷ್ಟಿಯಿಂದ, ಭಾವೈಕ್ಯತೆ ದೃಷ್ಟಿಯಿಂದ ಹಾಗೂ ಬಂಧುತ್ವ ದೃಷ್ಟಿಯಿಂದ ಸೇರಿಸಬೇಕೆಂದು ಚಳುವಳಿ ಮಾಡಿ ಇಲ್ಲಿಗೆ ಬಂದು ಸೇರಿದೆವು. ೧೯೫೬ ರಿಂದ ಇಲ್ಲಿಯವರೆಗೆ ನಮ್ಮ ಭಾಗದ ರಸ್ತೆಗಳ ಬಗ್ಗೆಯಾಗಲೀ, ಕುಡಿಯುವ ನೀರಿನ ಬಗ್ಗೆಯಾಗಲೀ, ರೈತರ ಬಗ್ಗೆಯಾಗಲೀ, ಕಾರಂಜಾ ಯೋಜನೆ ಬಗ್ಗೆಯಾಗಲಿ ಹೌಸಿಂಗ್ ಸೊಸೈಟಿ ಬಗ್ಗೆಯಾಗಲಿ ಹೀಗೆ ಯಾವುದೇ ಕ್ಷೇತ್ರದಲ್ಲಿ ತೆಗೆದುಕೊಂಡರೂ ಸಹ ನಾವು ಇಲ್ಲಿಂದ ೫೦೦ ಮೈಲಿಗಳ ದೂರದಲ್ಲಿದ್ದೇವೆಂಬ ಕಾರಣದಿಂದಲೋ ಏನೋ ಸರ್ಕಾರ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ. ಈ ಒಂದು ಭಾವನೆ ಹೋಗಿ ಇತರ ತಾಲ್ಲೂಕುಗಳ ಮಟ್ಟಕ್ಕೆ ನಮ್ಮ ಜಿಲ್ಲೆಯ ತಾಲ್ಲೂಕುಗಳನ್ನು ತರುವುದರ ಮೂಲಕ ಈಗಿರುವಂತಹ ಇಂಬ್ಯಾಲೆನ್ಸ್‌ನ್ನು ದೂರ ಮಾಡಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯದ ೧೭೫ ತಾಲ್ಲೂಕುಗಳಿಗೂ ಹಣವನ್ನು ಸರಿಯಾಗಿ ಹಂಚುತ್ತೇವೆಂದು ಹೇಳುವುದು ಸರಿಯಲ್ಲ. ಏಕೆಂದರೆ, ಒಂದು ಮನೆಯಲ್ಲಿ ಯಾರಾದರೂ ಕಾಯಿಲೆ ಬಿದ್ದರೆ ಅವರಿಗೆ ಹೆಚ್ಚು ಹಣ ಹೇಗೆ ಖರ್ಚು ಮಾಡಬೇಕಾಗುತ್ತದೆಯೋ ಅದೇರೀತಿ ನಮ್ಮ ಭಾಗದ ಅಭಿವೃದ್ಧಿಗೆ ಸ್ವಲ್ಪ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ಬೇರೆ ಮುಂದುವರಿದ ತಾಲ್ಲೂಕುಗಳಿಗೆ ಏನು ಹಣ ಖರ್ಚು ಮಾಡುತ್ತೀರಿ ಅದರ ೨-೩ರಷ್ಟು ಹಣವನ್ನು ನಮ್ಮ ಹಿಂದುಳಿದ ಏರಿಯಾಕ್ಕೆ ಇನ್ನು ಹತ್ತು ವರ್ಷಗಳ ಕಾಲ ಕೊಟ್ಟಾಗ ಮಾತ್ರ ಈಗಿರುವಂತಹ ಇಂಬ್ಯಾಲೆನ್ಸ್‌ನ್ನು ದೂರ ಮಾಡಬಹುದು. ಆದ್ದರಿಂದ ಈ ಬಗ್ಗೆ ಸರ್ಕಾರದವರು ವಿಚಾರ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಶಿಕ್ಷಣ ಕ್ಷೇತ್ರಕ್ಕೆ ಬಂದರೆ ನಮ್ಮ ಭಾಗದಲ್ಲಿ ಖಾಸಗಿ ಕಾಲೇಜುಗಳಿವೆ. ಇವೊತ್ತು ಸರ್ಕಾರ ಸುಮಾರು ೫೦ ಸಾವಿರ ಹುದ್ದೆಗಳನ್ನು ಖಾಲಿ ಇರುವಂತಹ ಜಾಗಗಳಲ್ಲಿ ಭರ್ತಿ ಮಾಡಬೇಕಾಗಿದೆ ಎಂದು ನನಗೆ ತಿಳಿದುಬಂದಿದೆ. ಸರ್ಕಾರದ ಕಚೇರಿಗಳಲ್ಲಿ ಮಾತ್ರವಲ್ಲ, ಶಾಲಾಕಾಲೇಜುಗಳಲ್ಲಿ ಕೂಡ ಸಾಕಷ್ಟು ಮಂದಿ ಉಪಾಧ್ಯಾಯರುಗಳು ಇಲ್ಲ. ಇದರಿಂದ ಕೆಲಸಕಾರ್ಯಗಳು ಮತ್ತು ಪಾಠಪ್ರವಚನಗಳು ಸರಿಯಾಗಿ ನಡೆಯುತ್ತಿಲ್ಲ. ಇವೊತ್ತು ನಮ್ಮಲ್ಲಿ ಲಕ್ಷಾಂತರ ಮಂದಿ ಯುವಕರು ಕೆಲಸವಿಲ್ಲದೆ ತಿರುಗಾಡುತ್ತಿದ್ದಾರೆ. ಕೆಲಸ ಕೊಡಿ ಎಂದು ಸ್ಟ್ರೈಕ್ ಮಾಡುತ್ತಿದ್ದಾರೆ. ಆದ್ದರಿಂದ ಇವರಿಗೆ ಕೆಲಸ ಕೊಡುವುದರ ಮೂಲಕ ಇರುವಂತಹ ಖಾಲಿ ಜಾಗಗಳನ್ನು ಭರ್ತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಹೈದರಾಬಾದ್ ಕರ್ನಾಟಕ ಏರಿಯಾದ ಪ್ರಾಥಮಿಕ ಶಾಲಾ ಉಪಾಧ್ಯಾಯರು ೩ ಸಾವಿರ ಜನ ಇದ್ದಾರೆ. ಅವರು ಕೆಲವೊಂದು ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಮನವಿ ಸಲ್ಲಿಸಿದಾಗ್ಯೂ ೩ ಸಾವಿರ ಉಪಾಧ್ಯಾಯರಿಗೆ ಯಾವುದೇ ಸೌಲಭ್ಯವನ್ನು ಕಲ್ಪಿಸಿಕೊಟ್ಟಿಲ್ಲ. ಮಾನ್ಯ ಜೆ. ಎಚ್ ಪಟೇಲ್‌ರವರಿಗೆ ಹೇಳುತ್ತಿದ್ದೇನೆ ಯಾರು ಮನವಿಯನ್ನು ಸಲ್ಲಿಸಿದ್ದಾರೆ ಅವರಿಗೆ ಇರತಕ್ಕ ತೊಂದರೆಯನ್ನು ನಮೂದಿಸಿ ತಮಗೆ ರೆಪ್ರಸೆಂಟೇಷನ್ ಕೊಟ್ಟಿದ್ದಾರೆ ಅದು ತಮ್ಮ ಮುಂದೆ ಇದೆ, ಅದನ್ನು ಬೇಗ ಸಾಲ್ವ್ ಮಾಡಿ. ಅರ್ಧ ಜನರಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಪೇಸ್ಕೇಲ್ ಕೂಡ ಫಿಕ್ಸ್ ಮಾಡಿದ್ದಾರೆ. ಎಲ್ಲರಿಗೂ ನ್ಯಾಯಯುತವಾಗಿ ಟ್ರೀಟ್‌ಮಾಡಬೇಕೆಂದು ತಮಗೆ ತಿಳಿಸುತ್ತೇನೆ. ಕಾರ್ಮಿಕರ ಬಗ್ಗೆ ನಮಗೆ ಕಳಕಳಿ ಇದೆ ಎಂದು ಹೇಳುತ್ತೀರಿ, ದಯಮಾಡಿ ಈ ಉಪಾಧ್ಯಾಯರಿಗೆ ಅನುಕೂಲ ಮಾಡಿಕೊಡಿ. ಕಬ್ಬನ್‌ಪಾರ್ಕ್‌ನಲ್ಲಿ ಸಾರಿಗೆ ಸಂಸ್ಥೆಯ ಕಂಡಕ್ಟರುಗಳು ಮುಷ್ಕರ ಮಾಡುತ್ತಿದ್ದಾರೆ. ಕಂಡಕ್ಟರುಗಳನ್ನು ಎಲ್ಲರಿಗೂ ಕರೆಯುವಂತೆ ಸಂದರ್ಶನಕ್ಕೆ ಕರೆದು ಸಂದರ್ಶನ ಮಾಡಿ ಅವರನ್ನು ಬದಲಿ ಎಂದು ಇಟ್ಟುಕೊಂಡು ಈಗ ತೆಗೆದುಹಾಕಿದ್ದಾರೆ. ಅವರನ್ನು ಎಲ್ಲರಂತೆ ಅಪಾಯಿಂಟ್ ಮಾಡಿಕೊಂಡು ಇವರು ಆಯ್ಕೆಯಾಗಿದ್ದಾರೆಂದು ಪ್ರಕಟ ಮಾಡಿ ಈಗ ೬ ತಿಂಗಳು, ೧ ವರ್ಷ, ೨ ವರ್ಷ ಕೆಲಸ ಮಾಡಿದಂತಹ ಕಂಡಕ್ಟರುಗಳನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಬದಲಿ ಎಂದು ಬೇರೆಯವರ ಜಾಗದಲ್ಲೋ ಖಾಲಿಯಿರುವ ಜಾಗದಲ್ಲಿ ಅಪಾಯಿಂಟ್‌ಮೆಂಟ್ ಮಾಡಿಕೊಂಡು ಈಗ ತೆಗೆದುಹಾಕಿದ್ದಾರೆ. ನಮಗೆ ಈ ಪ್ರಕಾರ ಅನ್ಯಾಯವಾಗಿದೆ ಎಂದು ೧೮ನೇ ಮಾರ್ಚಿಯಿಂದ ಹಂಗರ್‌ಸ್ಟ್ರೈಕ್ ಮಾಡುತ್ತಿದ್ದಾರೆ. ಜನತಾ ಪಾರ್ಟಿಯವರು ದೇವತೆಗಳು ಎಂದು ಹೇಳಿಕೊಳ್ಳುವಂತಹ ನೀವು, ಕಾರ್ಮಿಕರ ಬಗ್ಗೆ ಬಹಳ ಕಾಳಜಿ ಇದೆ ಎಂದು

ಹೇಳಿಕೊಳ್ಳುವಂತಹ ನೀವು ಅವರನ್ನು ಹೋಗಿ ಮಾತನಾಡಿಸುವ ಸೌಜನ್ಯ ತೋರಿಸಿಲ್ಲ. ಮಾನ್ಯ ಪಟೇಲ್‌ರವರಾದರೂ ಹೋಗಿ ನೋಡಿ ಮಾತನಾಡಿಸಿ ಅವರ ತೊಂದರೆಯನ್ನು ತಿಳಿದುಕೊಂಡು ಪರಿಹಾರ ಕಂಡುಹಿಡಿದುಕೊಳ್ಳಿ.

ಶ್ರೀ ಪಂಪಾಪತಿ.— ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಭೇಟಿ ಮಾಡಿದಮೇಲೆ ಅವರು ಉಪವಾಸ ಮುಷ್ಕರವನ್ನು ನಿನ್ನೆಯೇ ಮುಗಿಸಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಅವರ ಕಾಲದ ಪದ್ಧತಿ ಇನ್ನೂ ಉಳಿದುಕೊಂಡಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ರೈತರ ಬಗ್ಗೆ ಏನು ಪ್ರಾಮಿಸ್ ಮಾಡಿದ್ದೀರಿ ಆ ಪ್ರಕಾರ ಪೂರ್ಣ ಮಾಡಿ. ನಮ್ಮ ರೈತರ ಕಷ್ಟಗಳನ್ನು ನೋಡಿ ಎಂದು ತಮಗೆ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರು ಸಮಯ ಆಗುತ್ತಿದೆ ಎಂದು ಹೇಳುತ್ತಿದ್ದಾರೆ, ನಾನು ಒಂದೆರಡು ವಿಚಾರಗಳನ್ನು ಹೇಳಿ ನನ್ನ ಮಾತನ್ನು ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಚೇರ್ಮನ್. ಮಾನ್ಯ ಖಂಡ್ರೆಯವರೇ ಮುಂದೆ ಡಿಮಾಂಡ್ ಬರುತ್ತದೆ ಆಗ ವಿವರವಾಗಿ ಮಾತನಾಡುವಿರಂತೆ ಈಗ ಬೇಗ ಮುಗಿಸಿ.

ಶ್ರೀ ಎಸ್. ಭೀಮಣ್ಣ ಖಂಡ್ರೆ.— ಕನ್ನಡ ಹಿಂದಿ ಇಂಗ್ಲೀಷ್ ನಾವು ಕಡ್ಡಾಯವಾಗಿ ಕಲಿಯಲೇ ಬೇಕು. ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದ ಮೇಲೂ ಕೂಡ ೨೫ ಪರ್ಸೆಂಟ್ ನಾವು ಸಾಧಿಸಿಲ್ಲ. ಅದು ಸೆಂಟ್ ಪರ್ಸೆಂಟ್ ಆಗುವಂತೆ ನಾವು ನೋಡಿಕೊಳ್ಳಬೇಕು. ಹಿಂದಿ ಭಾಷೆಯಲ್ಲಿ ಶಿಕ್ಷಣ ಕೊಡತಕ್ಕ ತರಬೇತಿ ಕಾಲೇಜುಗಳು ಇವೆ. ಒಂದು ಮೈಸೂರು, ಬಾಗಲಕೋಟೆ ಮತ್ತು ರಾಯಚೂರು ಇಲ್ಲಿ ಇವೆ. ಹಿಂದಿಯನ್ನು ವಿರೋಧ ಮಾಡತಕ್ಕ ನೀತಿ ಸರಿಯಲ್ಲ. ಹಿಂದಿ ರಾಷ್ಟ್ರಭಾಷೆ. ಹಿಂದಿ ಕಾಲೇಜುಗಳಲ್ಲಿ ಉಪಾಧ್ಯಾಯರುಗಳಿಗೆ ಕೊಡುವಂತಹ ತರಬೇತಿ ಸರಿಯಾದ ರೀತಿಯಲ್ಲಿ ಕೊಡಬೇಕು ಹಿಂದಿ ಭಾಷೆಯನ್ನು ಬೆಳೆಸಬೇಕು. ಹಿಂದಿಯನ್ನು ವಿರೋಧ ಮಾಡತಕ್ಕದ್ದು ಸರಿಯಲ್ಲ. ಹಿಂದಿಗೆ ಪ್ರಾಧಾನ್ಯತೆ ಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳಿಗೆ ಏನು ಮಾಡಿದ್ದೀರಿ. ದಳಪತಿಗಳು ೧೪ ಸಾವಿರ ಜನ ಇದ್ದಾರೆ, ಅವರಿಗೆ ಕೊಡಬೇಕಾದ ದುಡ್ಡು ಕೊಟ್ಟಿಲ್ಲ. ಅವರಿಗೆ ಕೊಡಬೇಕಾದ ಹಣವನ್ನು ಬೇಗ ಕೊಡುವಂತೆ ವ್ಯವಸ್ಥೆ ಮಾಡಿ.

ಇನ್ನು ಷುಗರ್ ಫ್ಯಾಕ್ಟರಿಗಳ ಬಗ್ಗೆ ಹೇಳುವುದಾದರೆ ಷುಗರ್ ಫ್ಯಾಕ್ಟರಿಗಳವರ ಕಡೆಯಿಂದ ೧೦ ಕೋಟಿ ರೂಪಾಯಿ ವಸೂಲಿ ಮಾಡುತ್ತೀರಿ. ಆ ಹಣದಿಂದ ರೈತರಿಗೆ ಅನುಕೂಲವಾಗುವಂತೆ ರಸ್ತೆಗಳನ್ನು ಮಾಡಬೇಕೆಂದು ಹೈಕೋರ್ಟಿನಿಂದ ಆರ್ಡರ್ ಇದ್ದರೂ ನೀವು ಇನ್ನೂ ರಸ್ತೆ ಮಾಡಿಲ್ಲ. ೧೫ ಕೋಟಿ ರೂಪಾಯಿ ಸೆಸ್ ಎಂದು ವಸೂಲಿ ಮಾಡಿ ಗದ್ದೆ, ಮನೆ ಮತ್ತು ಫ್ಯಾಕ್ಟರಿಗೆ ಓಡಾಡಲು ಅನುಕೂಲವಾಗುವಂತೆ ರಸ್ತೆ ಮಾಡಬೇಕು, ಇದರ ಬಗ್ಗೆ ಏನು ಮಾಡುತ್ತೀರಿ ಎನ್ನುವುದನ್ನು ಮಾನ್ಯ ದೇವೇಗೌಡರು ಉತ್ತರ ಹೇಳಬೇಕು. ಸರಿಯಾದ ಉತ್ತರ ಬಾರದೇ ಇದ್ದರೆ ನಾನು ಕ್ಲಾರಿಫಿಕೇಷನ್ ಕೇಳಬೇಕಾಗುತ್ತದೆ. ಸರಿಯಾದ ಉತ್ತರವನ್ನು ಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಸ್. ನಾರಾಯಣರಾವ್ (ಗಾಂಧೀನಗರ) — ನಮ್ಮ ಮುಂದಿರುವ ಆಯವ್ಯಯ ಮುಸೂದೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇನ್ನಿತರ ಕೆಲವು ಸ್ನೇಹಿತರು ಮಾತನಾಡಿದ್ದಾರೆ. ಈಗತಾನೇ ಮಾತನಾಡಿದಂತಹ ಮಾನ್ಯ ಸದಸ್ಯರಾದ ಬಂಗಾರಪ್ಪನವರು ಪೀಠಿಕೆಯಾಗಿ ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಅದು ಗೊತ್ತಿಲ್ಲದ ವಿಷಯವಲ್ಲ. ಈ ಆಯವ್ಯಯ ಮುಸೂದೆಯ ಮೇಲೆ ಚರ್ಚೆ ನಡೆಯುವಾಗ ಆ ವಿಷಯಗಳನ್ನು ತರದಿದ್ದರೆ ಚೆನ್ನಾಗಿತ್ತು. ಅವರು ಪೀಠಿಕೆಯಾಗಿ ಏನು ಹೇಳಿದ್ದಾರೆಂದರೆ.—

ವೈಸ್ ಛೇರ್ಮನ್.—ಮಂತ್ರಿಗಳು ಅವರಿಗೆ ಉತ್ತರ ಕೊಡುತ್ತಾರೆ. ತಾವು ಏನು ಸಲಹೆ ಕೊಡಬೇಕೆಂದು ಇದ್ದಿರೋ ಅದನ್ನು ಹೇಳಿ.

ಶ್ರೀ ಎಂ. ಎಸ್. ನಾರಾಯಣರಾವ್.— ನಮ್ಮ ಪಕ್ಷದ ಮೇಲೆ ಕೆಲವೊಂದು ಮಾತುಗಳನ್ನು ಹೇಳಿದ್ದಾರೆ ಅದಕ್ಕೆ ನಾವು ಉತ್ತರ ಕೊಡಬೇಕು. ಎಲ್ಲ ಸದಸ್ಯರಿಗೂ ಉತ್ತರ ಕೊಡುವ ಹಕ್ಕು ಇದೆ.

ಆ ಹಕ್ಕನ್ನು ಚಲಾಯಿಸುವುದಕ್ಕೆ ಅಪ್ಪಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬಂಗಾರಪ್ಪನವರು ಏನು ಹೇಳಿದರು ಅಂದರೆ ಚುನಾವಣಾ ಪ್ರಣಾಳಿಕೆ ಜನತಾ ಪಕ್ಷದ ಪ್ರಣಾಳಿಕೆ ಅಲ್ಲ, ಈ ಸರ್ಕಾರವನ್ನು ಜನತಾ ಪಕ್ಷದ ಸರ್ಕಾರವೆಂದು ಕರೆದರೆ ಅದು ತಪ್ಪು ಎಂದು ಹೇಳಿದರು. ಮತ್ತೊಂದು ವಿಷಯ ಏನು ಹೇಳಿದರು ಅಂದರೆ ಕ್ರಾಂತಿರಂಗದ ಸಹಾಯವನ್ನು ಯಾಚಿಸುವುದರ ಸಲುವಾಗಿ ಬಂದಿದ್ದರು ಎನ್ನುವ ಧಾಟಿಯಲ್ಲಿ ಮಾತನಾಡಿದರು. ಒಬ್ಬ ವ್ಯಕ್ತಿಯಿಂದ ಕ್ರಾಂತಿರಂಗದಲ್ಲಿ ಬಲವಿತ್ತು, ಜನತಾ ಪಕ್ಷಕ್ಕೆ ಬಲ ಇರಲೇ ಇಲ್ಲ, ಕ್ರಾಂತಿರಂಗದಲ್ಲಿ ಬಂಗಾರಪ್ಪನವರು ಇರುವುದರಿಂದ ಎನ್ನುವ ಧಾಟಿಯಲ್ಲಿ, ಜನತಾ ಪಕ್ಷ ಕ್ರಾಂತಿರಂಗದ ಸಹಾಯವನ್ನು ಯಾಚಿಸಿತು ಎಂದು ಹೇಳಿದರು. ಅವರು ತಿಳಿದುಕೊಂಡಿರುವುದು ಒಂದು ತಪ್ಪು ಅಭಿಪ್ರಾಯವೆಂದು ನಾನು ತಿಳಿದುಕೊಂಡಿದ್ದೇನೆ ಕ್ರಾಂತಿರಂಗ ಜನತಾ ಪಕ್ಷ ಎಲ್ಲಾ ವಿರೋಧ ಪಕ್ಷಗಳೂ ಒಂದಾಗಬೇಕು ಎನ್ನುವ ಆಸೆಯನ್ನು ಎಲ್ಲರೂ ವ್ಯಕ್ತಪಡಿಸಿದರು. ಎಲ್ಲಾ ವಿರೋಧ ಪಕ್ಷಗಳೂ ಒಗ್ಗಟ್ಟಾಗಿ ಚುನಾವಣೆಯನ್ನು ಎದುರಿಸಿ ಆಡಳಿತ ಪಕ್ಷವನ್ನು ಸೋಲಿಸಬೇಕೆಂಬ ಜನತೆಯ ಆಸೆಯಿಂದ ಎಲ್ಲಾ ವಿರೋಧ ಪಕ್ಷಗಳೂ ಒಂದಾಗಿದ್ದೇವೆ. ಯಾವುದೇ ಅಭಿಪ್ರಾಯದಿಂದ ಬಂಗಾರಪ್ಪನವರ ಸಹಾಯಬೇಕೆಂದು ನಾವು ಇರಲಿಲ್ಲ. ಜನತೆಯ ಆಸೆ ಆಕಾಂಕ್ಷೆಗೆ ಎಲ್ಲಾ ವಿರೋಧ ಪಕ್ಷಗಳೂ ಐಕ್ಯರಂಗ ಮಾಡಿಕೊಂಡು ಚುನಾವಣೆಯನ್ನು ಎದುರಿಸಲಾಗಿದೆ, ಇದನ್ನು ಮಾನ್ಯ ಬಂಗಾರಪ್ಪನವರು ತಿಳಿದುಕೊಳ್ಳಬೇಕು.

ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರ ಬಹಳ ಮಹತ್ವಪೂರಿತವಾದಂಥ ವಿಚಾರವನ್ನು ಹೇಳಿದ್ದಾರೆ ಅದು ಏನೆಂದರೆ ಕ್ರಾಂತಿರಂಗ ಪ್ರತ್ಯೇಕವಾಗಿ ಇದೆಯೆಂದು. ಆದರೆ ಆ ವಿಷಯವನ್ನು ತಾವು ಮರೆತಿದ್ದೀರಿ ಎನ್ನುವ ಒಂದು ಮಾತನ್ನು ಕೂಡ ಅವರು ಹೇಳಿದರು. ಆದರೆ ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಇರಬೇಕಾದರೆ ಮೊದಲು ಸಾರ್ವಜನಿಕರ ಅಭಿಪ್ರಾಯವನ್ನು ಕೇಳಬೇಕಾಗಿತ್ತು ಎನ್ನುವ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಜನತಾ ಪಕ್ಷ ಮತ್ತು ಕ್ರಾಂತಿರಂಗ ಚುನಾವಣೆಯ ಕಾಲದಲ್ಲಿ ಒಂದು ಒಕ್ಕೂಟವನ್ನು ಮಾಡಿಕೊಂಡಿತ್ತು. ಆ ಒಕ್ಕೂಟದ ಪ್ರಕಾರ ನಾವು ಜನತೆಯ ಬೆಂಬಲವನ್ನು ಪಡೆದು ಅಧಿಕಾರಕ್ಕೆ ಬಂದಿದ್ದೇವೆ. ಆದರೆ ತಾವು ಎರಡು ತಿಂಗಳಾದರೂ ಕೂಡ ಇದುವರೆಗೂ ಜನತೆಯ ಮುಂದೆ ಹೋಗಿ ಜನತೆಯ ಒಂದು ಆಶೋತ್ತರವನ್ನು ಕೇಳಬೇಕಾಗಿತ್ತು ಆ ಕೆಲಸವನ್ನು ತಾವು ಮಾಡಲಿಲ್ಲ, ಜನತೆಯ ವಿಶ್ವಾಸವನ್ನು ತಾವು ತೆಗೆದುಕೊಂಡಿಲ್ಲವೆನ್ನುವ ಮಾತನ್ನು ನಾನು ಈ ಸಂಭರ್ಧದಲ್ಲಿ ಗಂಟಾಘೋಷವಾಗಿ ಹೇಳುತ್ತೇನೆ. ಮತ್ತೆ ತಮ್ಮ ಪಕ್ಷದ ಸದಸ್ಯರಿಗೆ ಕೆಲವಾರು ಕಡೆ ಜನತೆ ಬೇಕಾದಷ್ಟು ಕಿರುಕುಳವನ್ನು ಕೊಟ್ಟಿದ್ದಾರೆಂದು ನಾನು ಪತ್ರಿಕೆಗಳಲ್ಲಿ ಕೇಳಿದ್ದೇನೆ. ಇದರಿಂದಲೇ ಗೊತ್ತಾಗುತ್ತದೆ ಜನತೆ ನಿಮ್ಮ ಮೇಲೆ ವಿಶ್ವಾಸವನ್ನು ಇಟ್ಟಿಲ್ಲವೆಂದು. ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸುವ ದೃಷ್ಟಿಯನ್ನು ಜನತಾ ಪಕ್ಷ ಹಾಗೂ ಇತರೇ ಕೆಲವರು ವಿರೋಧಪಕ್ಷಗಳು ಹೊಂದಾಣಿಕೆಯನ್ನು ಮಾಡಿಕೊಂಡು ಚುನಾವಣೆಯನ್ನು ಎದುರಿಸಬೇಕಾಗಿ ಬಂತು. ಆದರೆ ಯಾವ ಒಬ್ಬ ವ್ಯಕ್ತಿಯ ಸಹಾಯನ್ನು ಪಡೆದು ಜನತಾ ಪಕ್ಷ ಅಧಿಕಾರಕ್ಕೆ ಬಂದಿದೆಯೆಂದು ಹೇಳುವುದರಲ್ಲಿ ಅರ್ಥವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರು ಆಯವ್ಯಯ ಪಟ್ಟಿಯ ಮೇಲೆ ಮಾತನಾಡುವಾಗಲೂ ಕೂಡ ಕೆಲವರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ಚುನಾವಣೆಯ ಸಂದರ್ಭದಲ್ಲಿ ಶ್ರೀಸಾಮಾನ್ಯರಿಗೆ ನಾನಾ ರೀತಿಯ ಆಶೋತ್ತರಗಳನ್ನು ಕೊಟ್ಟು ಅಧಿಕಾರಕ್ಕೆ ಬಂದು ಈಗ ಈ ಆಯವ್ಯಯ ಪಟ್ಟಿಯಲ್ಲಿ ಯಾವ ರೀತಿಯ ಸಹಾಯವನ್ನು ಜನಸಾಮಾನ್ಯರಿಗೆ ಮಾಡಿಲ್ಲವೆಂದು ಹೇಳಿದರು. ಆದರೆ ನಾವು ಚುನಾವಣೆಯ ಪ್ರಣಾಳಿಕೆಯ ಪ್ರಕಾರ ೫ ವರ್ಷದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ಮಾತ್ರ ಹೇಳಿದ್ದೇವೆ. ಆದರೆ ನಾವು ಈಗ ಹಾಕಿಕೊಂಡಿರತಕ್ಕಂಥದ್ದು ಕೇವಲ ಒಂದು ವರ್ಷದ ಆಯವ್ಯಯ ಪಟ್ಟಿ ಮಾತ್ರ. ಇನ್ನು ಉಳಿದ ಎಲ್ಲಾ ಕಾರ್ಯಕ್ರಮಗಳನ್ನು ಹಂತಹಂತವಾಗಿ ಕಾರ್ಯರೂಪಕ್ಕೆ ತರಬೇಕೆಂದು ಸರ್ಕಾರದ ಉದ್ದೇಶವಿದೆ. ಆದರೆ ಮಾನ್ಯಸದಸ್ಯರು ಮಾಡಿದಂಥ ಟೀಕೆಯಲ್ಲಿ ಯಾವುದೇ ರಚನಾತ್ಮಕವಾದ ಟೀಕೆಯಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಚುನಾವಣೆಯ ಪ್ರಣಾಳಿಕೆ ಪ್ರಕಾರ ೭೫ ಸಾವಿರ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡುತ್ತೇವೆಂದು ಹೇಳಿದ್ದೇವೆ. ಅದೇ ರೀತಿಯಲ್ಲಿ ಆಯವ್ಯಯಪಟ್ಟಿಯಲ್ಲಿ ಕೂಡ ತಿಳಿಸಿದ್ದೇವೆ ಅದು ಏನೆಂದರೆ ಪ್ರತಿ ಹಳ್ಳಿಯಿಂದ ೫ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡಲಾಗುತ್ತದೆಂದು. ಆದರೆ ಮಾನ

ಸದಸ್ಯರು ಅದನ್ನು ತಪ್ಪು ಕಲ್ಪನೆ ಮಾಡಿಕೊಂಡಿದ್ದಾರೆಂದು ಗೊತ್ತಾಗುತ್ತದೆ. ನಾವು ನಮ್ಮ ಆಯ ವ್ಯಯ ಪಟ್ಟಿಯಲ್ಲಿ ಹೇಳಿರುವಂತೆ ಒಂದು ಹಳ್ಳಿಯಲ್ಲಿ ಸುಮಾರು ೫ ಜನರಿಗೆ ಬ್ಯಾಂಕ್‌ಗಳ ಮುಖಾಂತರ ವಾಗಿ ಉದ್ಯೋಗಾವಕಾಶಕ್ಕೆ ಅನುವು ಮಾಡಿಕೊಡುತ್ತೇವೆಂದು ಹೇಳಿದ್ದೇವೆ. ಅದೇ ರೀತಿಯಲ್ಲಿ ಮುಂದೆ ಒಳ್ಳೆಯ ಯೋಜನೆಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಮ್ಮ ಸರ್ಕಾರದವರ ಹಾಕಿಕೊಂಡಿರತಕ್ಕಂಥ ರಚನಾತ್ಮಕವಾದ ಕಾರ್ಯಕ್ರಮಗಳನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಂಡಿಲ್ಲ ವೆಂದು ಗೊತ್ತಾಗುತ್ತದೆ. ಈ ಆಯವ್ಯಯ ಪಟ್ಟಿಯನ್ನು ನೋಡಿದರೆ ನಮ್ಮ ರಾಜ್ಯಪಾಲರ ಭಾಷಣ ದಲ್ಲಿ ಏನೇನು ಹೇಳಿದ್ದೇವೆಯೊ ಅದೇ ರೀತಿಯಲ್ಲಿ ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡು ಬಂದಿ ದ್ದೇವೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ ಎಲ್ಲಾ ಮಟ್ಟಗಳಲ್ಲಿಯೂ ಕೂಡ ಅಧಿಕಾರವನ್ನು ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿದ್ದೇವೆ. ಆ ಒಂದು ಯೋಜನೆಯನ್ನು ಕೂಡ ನಾವು ಆಯ ವ್ಯಯ ಪಟ್ಟಿಯಲ್ಲಿ ಅಳವಡಿಸಿದ್ದೇವೆ. ಅದೇ ರೀತಿಯಲ್ಲಿ ರಾಜ್ಯದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುತ್ತೇವೆಂದು ಹೇಳಿದ್ದೇವೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಮ್ಮ ರಾಜ್ಯದಲ್ಲಿ ಭ್ರಷ್ಟಾಚಾರವನ್ನು ತೆಗೆದುಹಾಕಬೇಕೆಂದು ನಾನು ಸಲಹೆ ಸಹ ಮಾಡುತ್ತಿದ್ದೇನೆ. ಈ ಭ್ರಷ್ಟಾಚಾರವನ್ನು ನಾವು ಸಂಪೂರ್ಣವಾಗಿ ತೊಲಗಿಸಬೇಕಾದರೆ ಕೆಲವು ಮಾರ್ಪಾಡುಗಳನ್ನು ಮಾಡಬೇಕಾಗುತ್ತದೆ. ಮೊದಲನೆಯದಾಗಿ ರೆವಿನ್ಯೂ ಕೋಡ್ ಮತ್ತು ರಿಜಿಸ್ಟ್ರೇಷನ್ ಕೋಡ್‌ಗಳನ್ನು ಬದಲಾವಣೆ ಮಾಡಬೇಕು. ಈ ಎರಡು ಕೋಡುಗಳು ಬಹಳ ಹಿಂದಿನ ಕಾಲದ ಕೋಡ್‌ಗಳಾಗಿವೆ. ಯಾವ ರೀತಿಯಲ್ಲಿ ಫೀಜ್ ಅಸೆಸ್ ಮಾಡಿ ಕಲೆಕ್ಟ್ ಮಾಡಬೇಕು ಎನ್ನುವ ಪದ್ಧತಿ ಇದರಲ್ಲಿ ಇಲ್ಲ. ಇದರಿಂದ ಭ್ರಷ್ಟಾಚಾರ ಜಾಸ್ತಿಯಾಗುತ್ತಿದೆ. ಈ ಎರಡೂ ಕೋಡ್ ಗಳನ್ನು ಬದಲಾವಣೆ ಮಾಡಿದರೆ ಆಗ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ನಾಶಮಾಡಬಹುದೆಂದು ನಮ್ಮ ಅಭಿಪ್ರಾಯ. ನಮ್ಮ ರಾಜ್ಯದಲ್ಲಿ ಗ್ರಾಮಾಂತರ ಮಟ್ಟದಲ್ಲಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಸಾಕಷ್ಟು ಹಣಕಾಸು ವ್ಯವಸ್ಥೆಯನ್ನು ಮಾಡಿ ಕೊಟ್ಟು ಅಲ್ಲಿನ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುವಂತೆ ಮಾಡಬೇಕು. ತಾವು ಹಣವನ್ನು ಒದಗಿಸಿಕೊಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಈ ಗ್ರಾಮಾಂತರ ಮಟ್ಟದ ಅಧಿಕಾರವನ್ನು ವೀಕ್ಷಿಸಲು ಅಭಿವೃದ್ಧಿ ಕಮಿಷನ್ ಅನ್ನು ನೇಮಕ ಮಾಡ ಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ವೃತ್ತಿ ತೆರಿಗೆಯನ್ನು ರದ್ದು ಮಾಡುತ್ತೇವೆಂದು ನಾವು ನಮ್ಮ ಚುನಾವಣೆಯ ಪ್ರಣಾಳಿಕೆ ಯಲ್ಲಿ ಹೇಳಿದ್ದೇವೆ. ಅದೇ ಪ್ರಕಾರ ಜನತೆ ಈ ವೃತ್ತಿ ತೆರಿಗೆಯನ್ನು ತೆಗೆದು ಈ ಬಡ್ಜೆಟ್‌ನಲ್ಲಿ ತೆಗೆದು ಹಾಕುತ್ತಾರೆ ಎನ್ನುವ ಒಂದು ಆಸೆಯನ್ನು ಇಟ್ಟುಕೊಂಡಿದ್ದರು. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿ ಗಳು ವೃತ್ತಿ ತೆರಿಗೆಯನ್ನು ತೆಗೆದು ಹಾಕಿಲ್ಲ. ಇದರಿಂದ ಬೆಂಗಳೂರು ನಗರದಲ್ಲಿರುವಂಥ ಜನರಿಗೆ ಒಂದು ರೀತಿಯಲ್ಲಿ ಅಸಮಾಧಾನವಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾವು ಚುನಾವಣೆಯ ಸಂದರ್ಭದಲ್ಲಿ ಜನತೆಯಲ್ಲಿ ಮತವನ್ನು ಕೇಳಲು ಹೋದಾಗ ವೃತ್ತಿ ತೆರಿಗೆಯನ್ನು ತೆಗೆದು ಹಾಕುತ್ತೇವೆ ಎನ್ನುವ ಒಂದು ವಾಗ್ದಾನವನ್ನು ಸಹ ಕೊಟ್ಟಿದ್ದೇವೆ. ಆದ್ದರಿಂದ ನಾನು ನಮ್ಮ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ವೃತ್ತಿ ತೆರಿಗೆಯನ್ನು ತೆಗೆದು ಹಾಕಬೇಕು.

ಇನ್ನು ಶಾಸಕರಿಗೆ ವೃತ್ತಿ ತೆರಿಗೆಯನ್ನು ಹಾಕಿದ್ದಾರೆ. ಶಾಸಕರು ಮಾಡುವಂಥದ್ದು ಸಾರ್ವಜನಿಕ ಸೇವೆಯಾದ್ದರಿಂದ ಅವರಿಗೆ ವೃತ್ತಿ ತೆರಿಗೆಯನ್ನು ಕೊಡಲು ಬರುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ವಿಚಾರ ಮಾಡಬೇಕು. ಅದೇ ರೀತಿಯಲ್ಲಿ ನಮ್ಮ ವಿರೋಧಪಕ್ಷದ ನಾಯಕರು ಮತ್ತು ವಿರೋಧಪಕ್ಷದ ಸದಸ್ಯರು ಮಾತನಾಡುವಾಗ ಹೇಳಿದರು ಇದು ಒಂದು ರೀತಿಯಲ್ಲಿ ಸುಮಾರು ೧೨೦ ಕೋಟಿ ರೂಪಾಯಿಗಳ ಕೊರತೆಯ ಬಡ್ಜೆಟ್ ಎಂದು ಆದರೆ ಈ ಕೊರತೆಯನ್ನು ನಿವಾರಿಸಲು ಈ ಸರ್ಕಾರಕ್ಕೆ ಸಾಧ್ಯವಿಲ್ಲ. ಜನತೆಯ ಕಲ್ಯಾಣ ಮಾಡುವುದಕ್ಕೆ ಆಗುವುದಿಲ್ಲ. ಜನ ಸಾಮಾನ್ಯರ ಉದ್ಧಾರವಾಗುವುದಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಮಾನ್ಯ ಸದಸ್ಯರು ಅರ್ಥಮಾಡಿ ಕೊಳ್ಳಬೇಕು, ಸುಮಾರು ೧೨೦ ಕೋಟಿ ರೂಪಾಯಿಗಳ ಕೊರತೆಯ ಬಡ್ಜೆಟ್ ಇದ್ದರೂ ಕೂಡ ಆ ಕೊರತೆಯನ್ನು ನಿವಾರಣೆ ಮಾಡಲು ಬೇರೆ ಬೇರೆ ರೀತಿಯಲ್ಲಿ ಸರ್ಕಾರಕ್ಕೆ ಆದಾಯ ಬರುವಂಥ ಕಾರ್ಯ

ಕ್ರಮಗಳನ್ನು ನಮ್ಮ ಸರ್ಕಾರ ರೂಪಿಸಿಕೊಂಡಿದೆ. ಇದರಿಂದ ಕೊರತೆಯ ಬಡ್ಜೆಟ್ ಆಗುವುದಿಲ್ಲ. ಎನ್ನುವ ಮಾತನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದೇ ಸಂದರ್ಭದಲ್ಲಿ ಮಾನ್ಯ ಸದಸ್ಯರು ಹೇಳಿದರು ಅಭಿವೃದ್ಧಿ ಬಾಬಿಗೋಸ್ಕರ ಸುಮಾರು ೧೦೦ ಕೋಟಿ ರೂಪಾಯಿಗಳ ಕೊರತೆಯಿದೆ ಯೆಂದು, ಆದರೆ ನಾನು ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ ನಮ್ಮ ರಾಜ್ಯಕ್ಕೆ ಸೇಲ್ಸ್ ಟ್ಯಾಕ್ಸ್ ನಿಂದ ಕೋಟ್ಯಾಂತರ ರೂಪಾಯಿಗಳ ವರಮಾನವಿದೆ. ಆದರೆ ಆ ಸೇಲ್ಸ್‌ಟ್ಯಾಕ್ಸ್‌ನ್ನು ಸರಿಯಾದ ರೀತಿಯಲ್ಲಿ ಸರ್ಕಾರದವರು ವಸೂಲಿ ಮಾಡುತ್ತಿಲ್ಲ. ನಮ್ಮ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿಯಲ್ಲಿ ಆ ಬಗ್ಗೆ ಸ್ಪಷ್ಟ ಚಿತ್ರವನ್ನು ಕೊಟ್ಟಿದೆ. ಆ ಪ್ರಕಾರ ನಾವು ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಸೇಲ್ಸ್‌ಟ್ಯಾಕ್ಸ್ ರಿಕವರಿಸ್ ಜಾಸ್ತಿ ಇದೆ. ಎನ್ನುವ ಮಾತನ್ನು ಕೂಡ ಅವರು ಹೇಳಿದ್ದಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಸೇಲ್ಸ್ ಟ್ಯಾಕ್ಸ್‌ನ್ನು ಸರಿಯಾಗಿ ವಸೂಲು ಮಾಡಬೇಕು.

೪–೩೦ ಪಿ.ಎಂ.

ಆದ್ದರಿಂದ ಈ ಸೇಲ್ಸ್‌ಟ್ಯಾಕ್ಸ್ ರಿಕವರಿ ಸರಿಯಾಗಿ ಮಾಡಿದರೆ ಈ ಕೊರತೆ ಸ್ವಲ್ಪ ಮಟ್ಟಿಗೆ ನೀಗ ಬಹುದು. ೧೭೦ ಕೋಟಿ ರೂಪಾಯಿ ಕೊರತೆಯಿಂದ ಮುಂದಿನ ವರ್ಷದಿಂದ ಯಾವ ತೊಂದರೆ ಯಾಗುವುದಿಲ್ಲ. ಮತ್ತು ಅಭದ್ರತೆ ಬರುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ.

ಅಬ್ಕಾರಿ ವಿಚಾರದಲ್ಲಿ ಕೆಲವು ತೆರಿಗೆಗಳನ್ನು ಹಾಕಿದ್ದಾರೆ. ಇದರ ಬಗ್ಗೆ ಮಾತನಾಡುವಾಗ ಒಂದು ವಿಷಯ ಹೇಳಬೇಕಾಗುತ್ತದೆ. ಲೈಸೆನ್ಸ್ ವಿಷಯದಲ್ಲಿ ಹೇಳಬೇಕೆಂದರೆ, ಬೆಂಗಳೂರು ನಗರದಲ್ಲಿ ಎಕ್ಸ್‌ಟೆನ್‌ಶನ್ ಏರಿಯಾದಲ್ಲಿ ಸ್ಕೂಲುಗಳು ಹತ್ತಿರ ಇರುತ್ತವೆ. ಹೀಗಿದ್ದರೂ ಅಂಗಡಿಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಇದು ಸರಿಯಲ್ಲ. ಎಕ್ಸೈಸ್ ಆ್ಯಕ್ಟ್‌ನಲ್ಲಿ ಏನು ನಿಯಮಗಳಿವೆ, ಅದಕ್ಕೆ ವಿರುದ್ಧವಾಗಿ ಲೈಸೆನ್ಸ್ ಕೊಡುತ್ತಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಪರಿಶೀಲಿಸಿ, ಎಲ್ಲಿ ನಿಯಮ ಉಲ್ಲಂಘನೆಯಾಗಿದೆ, ಅಂತಹವರಿಗೆ ಪುನಃ ಲೈಸೆನ್ಸ್ ಕೊಡಬಾರದು ಎಂದು ನಾನು ಕೇಳಿಕೊಳ್ಳು ತ್ತೇನೆ.

ಈ ಆಯವ್ಯಯ ಅಂದಾಜು ಪತ್ರದಲ್ಲಿ ಲ್ಯಾಂಡ್ ಆರ್ಮಿ ಬಗ್ಗೆ ಹೇಳಿದ್ದಾರೆ. ಇದು ಬಹಳ ಒಳ್ಳೆಯ ವಿಚಾರ. ಹಿಂದೆ ಈ ಭೂ ಸೇನೆಯನ್ನು ಸರಿಯಾಗಿ ಉಪಯೋಗ ಮಾಡಿಕೊಂಡಿರಲಿಲ್ಲ. ನಮ್ಮ ಹಳ್ಳಿಗಳಲ್ಲಿ ವಿದ್ಯಾವಂತ ತರುಣರನ್ನು ಸರ್ಕಾರ ಹಿಂದೆ ಮರೆತೇಬಿಟ್ಟಿತ್ತು. ಆದರೆ ನಮ್ಮ ಮುಖ್ಯ ಮಂತ್ರಿಗಳು ಇದರ ಕಡೆ ಗಮನಕೊಟ್ಟು ಲ್ಯಾಂಡ್ ಆರ್ಮಿಯನ್ನು ಉಪಯುಕ್ತವಾಗಿ ಜಾರಿಗೆ ತರುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಇದು ಬಹಳ ಶ್ಲಾಘನೀಯವಾದುದು. ಇದನ್ನು ತಪ್ಪದೇ ಮಾಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈಗಿರುವ ಹೈಕೋರ್ಟ್ ಕಟ್ಟಡವನ್ನು ನವೀಕರಿಸುವುದಾಗಿ ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಸುಮಾರು ೪೫–೫೦ ಬೇರೆ ಬೇರೆ ನ್ಯಾಯಾಲಯಗಳಿವೆ. ಅವುಗಳು ಬೇರೆ ಬೇರೆಯಾಗಿ ನಾಲ್ಕೈದು ಕಡೆ ಗಳಲ್ಲಿ ಚದುರಿಹೋಗಿವೆ. ಅವುಗಳನ್ನು ಒಂದೇ ಕಟ್ಟಡದಲ್ಲಿ ಒಳಪಡಿಸಬೇಕು. ಇದೇ ವಿಚಾರವನ್ನು ಹಿಂದಿನ ಸರ್ಕಾರದವರು ಒಪ್ಪಿಕೊಂಡಿದ್ದರು. ಒಂದು ಸಿವಿಲ್ ಕೋರ್ಟ್‌ನ್ನು ಶುರು ಮಾಡಿದರು. ಸ್ವಲ್ಪ ಭಾಗ ಮಾತ್ರ ಆಗಿದೆ. ಮುಖ್ಯಭಾಗ ಜಾರಿಗೆ ಬಂದಿಲ್ಲ. ಈ ವಿಚಾರವನ್ನು ಆಯವ್ಯಯದಲ್ಲಿ ಹೇಳಿಲ್ಲ. ದಯಮಾಡಿ ಈ ಜಿಲ್ಲಾ ನ್ಯಾಯಾಲಯಗಳು ಒಂದೇ ಕಡೆ ಇರುವ ಹಾಗೆ ಮಾಡುವುದಕ್ಕೋಸ್ಕರ ಬೇರೆ ವಿಂಗ್‌ಗಳನ್ನು ಕೂಡಿಸಬೇಕು. ಇದನ್ನು ಶೀಘ್ರವಾಗಿ ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ನ್ಯಾಯಾಲಯಗಳ ಕಟ್ಟಡ ಬಹಳ ಚೆನ್ನಾಗಿದೆ. ಇದನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಕೇಳುತ್ತಿದ್ದಾರೆಂದು ಗೊತ್ತಾಗಿದೆ. ಸರ್ಕಾರದವರು ಇದನ್ನು ಕೊಡಬಾರದು ಎಂದು ಹೇಳುತ್ತೇನೆ. ಈ ಆಯವ್ಯಯ ಅಂದಾಜಿನಲ್ಲಿ ರೈತರಿಗೆ ಅನೇಕ ಸೌಕರ್ಯಗಳನ್ನು ಕೊಟ್ಟಿರುವುದು ಸರಿಯಾಗಿಲ್ಲ ಎಂದು ಕೆಲವರು ಹೇಳಿದರು. ಎಲ್ಲವನ್ನೂ ಒಂದೇ ವರ್ಷದಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ಈ ವರ್ಷ ಕೊಡಲಿಕ್ಕೆ ಆಗದಿದ್ದುದನ್ನು ಮುಂದಿನ ವರ್ಷ ಕೊಡುತ್ತಾರೆ. ಆಯವ್ಯಯ ಅಂದಾಜಿನಲ್ಲಿ ನಾನು ಸೂಚಿಸಿದ ಕೆಲವು ತಿದ್ದುಪಡಿಗಳನ್ನು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಲ್ಲಿಕಾರ್ಜುನ ಬನ್ನಿ (ಗುಳೇದಗುಡ್ಡ).—ಸನ್ಮಾನ್ಯ ಅಧ್ಯಕ್ಷರೇ, ೧೯೭೯–೮೦ರ ಬಡ್ಜೆಟ್ ಮೇಲೆ ಈಗಾಗಲೇ ಅನೇಕ ಸದಸ್ಯರು ಮಾತನಾಡಿದ್ದಾರೆ. ಆದರೆ ವಿಶೇಷವಾಗಿ ಬಿಜಾಪುರ ಜಿಲ್ಲೆ ಎಂಟು ವರ್ಷಗಳಿಂದ ಬರಗಾಲ ಪೀಡಿತ ಪ್ರದೇಶವಾಗಿ ಅಲ್ಲಿ ಯಾವುದೇ ಪರಿಹಾರ ಕಾರ್ಯಗಳನ್ನು ಕಾಣದೆ ನಾವು ಬಹಳ ಹಿಂದುಳಿದಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಭೆಯ ಮುಂದೆ ಅತ್ಯಂತ ಖೇದದಿಂದ ಹೇಳಬಯಸುತ್ತೇನೆ. ಬಿಜಾಪುರದಲ್ಲಿ ಅಲ್ಲಿ ಯಾವುದೇ ಒಂದು ಚಿಕ್ಕ ನೀರಾವರಿಯಾಗಲೀ, ಲಿಫ್ಟ್ ಇರಿಗೇಷನ್ ಆಗಲೀ ಹೆಚ್ಚಿನ ಮಹತ್ವವನ್ನು ಕೊಟ್ಟಿಲ್ಲ. ಮಲಪ್ರಭಾ, ಘಟಪ್ರಭಾ, ಯೋಜನೆಗಳಿಗೆ ಸರ್ಕಾರ ಇನ್ನಾದರೂ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ. ಬಿಜಾಪುರದ ಗೋಳಗೊಮ್ಮಟದಲ್ಲಿ ಯಾವ ಪ್ರಕಾರವಾಗಿ ಒಮ್ಮೆ ಕೂಗಿದರೆ ಆ ಧ್ವನಿ ಏಳು ಸಲ ಪ್ರತಿಧ್ವನಿಸುತ್ತದೋ ಆ ಪ್ರಕಾರವಾಗಿ ನಾವು ಒಕ್ಕೊರಲಿನಿಂದ ಇಲ್ಲಿ ಕೂಗಬೇಕಾಗುತ್ತದೆ. ಇವತ್ತು ವಿದ್ಯುದೀಕರಣ ಕ್ಷೇತ್ರದಲ್ಲಿ ಬೇರೆ ಪ್ರಾಂತ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಸಾಕಷ್ಟು ಪ್ರಗತಿ ಆಗಿಲ್ಲವೆಂದೇ ಹೇಳಬೇಕಾಗುತ್ತದೆ. ಸಣ್ಣ ಪ್ರಮಾಣದ ಗ್ರಾಮ ಕೈಗಾರಿಕೆಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸ್ಥಾಪಿಸಿ ನಿರುದ್ಯೋಗ ನಿವಾರಣೆಗೆ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ.

ಮಾನ್ಯ ಅಧ್ಯಕ್ಷರೇ, ಮೂವತ್ತೈದು ವರ್ಷಗಳ ಲಾಗಾಯ್ತು ಹಿಂದೆ ಇದ್ದಂತಹ ಹಿಂದಿನ ಸರ್ಕಾರ ನಮ್ಮ ಭಾಗದಲ್ಲಿ ರಸ್ತೆಗಳನ್ನು ಆಗಲಿ, ವಿದ್ಯುಚ್ಛಕ್ತಿ, ನಿತ್ಯ ಜೀವನಕ್ಕೆ ಬೇಕಾದಂತಹ ವಸ್ತುಗಳು, ವಸತಿ ಸೌಕರ್ಯ ಹೀಗೆ ಯಾವ ವಿಷಯದಲ್ಲೇ ಆಗಲಿ ಪ್ರಗತಿ ಸಾಧಿಸದೆ ಕುಂಠಿತವಾಗಿದೆ. ಮತದಾರರು ನೇರವಾಗಿ ವಿರೋಧ ಪಕ್ಷದವರನ್ನು ಭೇಟಿಯಾಗಬಾರದು ಎನ್ನುವ ವಿಚಾರವನ್ನು ಇಟ್ಟುಕೊಂಡು ಇದನ್ನು ಉದ್ದೇಶ ಪೂರ್ವಕವಾಗಿ ಹಿಂದಿನ ಸರ್ಕಾರದವರು ಮಾಡಿದ್ದಾರೆ ಎಂದು ನಾನು ಸ್ಪಷ್ಟಪಡಿಸ ಬಯಸುತ್ತೇನೆ. ಕುಡಿಯುವ ನೀರಿಗಾಗಿ ನಮ್ಮಲ್ಲಿ ಇನ್ನೂ ಸಹ ಬಾಯಿ ಬಾಯಿ ಬಿಡಬೇಕಾದ ಪ್ರಸಂಗ ಇದೆ. ನನಗೆ ನೆನಪಾಗುತ್ತದೆ ಹಿಂದಿನ ಸರ್ಕಾರ ಯಾವ ರೀತಿ ಜನತೆಗೆ ಸುಳ್ಳು ಆಶ್ವಾಸನೆಯನ್ನು ನೀಡಿ ಕೊನೆಗೆ ಮೋಸ ಮಾಡಿದರೋ, ಹಾಗೆ ಈಗಲೂ ಆಗಬಾರದು. ಇನ್ನು, ಜನತಾ ಮನೆಗಳನ್ನು ಕಟ್ಟಿಸಿದ್ದಾರೆ. ಅಲ್ಲಿ ಮನುಷ್ಯರು ವಾಸ ಮಾಡಲಿಕ್ಕೆ ಸಾಧ್ಯವಿಲ್ಲ. ಮನೆ ಕಟ್ಟಲಿಕ್ಕೆ ಎರಡು ಸಾವಿರ, ಎರಡೂವರೆ ಸಾವಿರ ಕೊಟ್ಟರೆ ಸಾಲದು. ಈ ಮಿತಿಯನ್ನು ಇನ್ನೂ ಹೆಚ್ಚಿಸಬೇಕು. ನೀವು ಈ ಮಿತಿಯನ್ನು ಹೆಚ್ಚಿಸದೇ ಹೋದರೆ ಈ ಮನೆಗಳು ವಾಸಕ್ಕೆ ಯೋಗ್ಯವಾಗಿರಲು ಸಾಧ್ಯವಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಮತಕ್ಷೇತ್ರದಲ್ಲಿ ಎಂಟು–ಹತ್ತು ಸಾವಿರ ಜನಸಂಖ್ಯೆಯುಳ್ಳ ಕಂಡೂರು ಗ್ರಾಮ ಇದೆ. ಇಲ್ಲಿ ಯಾವುದೇ ಕುಡಿಯುವ ನೀರಿನ ಯೋಜನೆಯನ್ನು ಇದುವರೆಗೂ ಕೈಗೊಂಡಿಲ್ಲ. ೩೦ ಸಾವಿರ ಜನಸಂಖ್ಯೆ ಇರುವ ನನ್ನ ಮುಖ್ಯ ಊರಾದ ಗುಳೇದಗುಡ್ಡದಲ್ಲಿ ಕೂಡ ಇದೇ ಪರಿಸ್ಥಿತಿ ಇದೆ.

ಅಲ್ಲಿ ಹಾಕಿರುವಂತಹ ಪೈಪ್‌ಗಳ ಅವ್ಯವಸ್ಥೆಯಿಂದ, ಅಲ್ಲಿರತಕ್ಕಂತಹ ಆಡಳಿತ ದುರ್ವ್ಯವಸ್ಥೆಯಿಂದ ನಮ್ಮ ಹಿಂದಿನ ಸರ್ಕಾರ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಿಲ್ಲ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ನಾವುಗಳು ಸಹ ಇದಕ್ಕಾಗಿ ಕಳೆದ ಮೂರು ವರ್ಷಗಳಿಂದ ಸತತವಾಗಿ ಪ್ರಯತ್ನ ಮಾಡಿದಾಗಲೂ ಮಿರ್ಜಾ ಗ್ರಾಮದ ನೀರಿನ ಬಗ್ಗೆ ಹಿಂದಿನ ಸರ್ಕಾರ ಆ ಮತದಾರರ ಕ್ಷೇತ್ರವನ್ನು ಕಡೆಗಣಿಸಿ ಯಾವ ಅನುಕೂಲವಾದ ಕೆಲಸವನ್ನೂ ಹಿಂದಿನ ಸರ್ಕಾರ ಮಾಡಲಿಲ್ಲ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳಲು ಇಚ್ಛಿಸುತ್ತೇನೆ. ಅಧಿಕಾರ ವಿಕೇಂದ್ರೀಕರಣವಾಗಬೇಕು ಎನ್ನತಕ್ಕಂತಹ ಮಾತನ್ನು ನಾನು ಸ್ವಾಗತ ಮಾಡುತ್ತೇನೆ. ಈ ಅಧಿಕಾರ ವಿಕೇಂದ್ರೀಕರಣ ಕೇವಲ ಜನತಾಪಕ್ಷದ ಕಾಗದದ ಆಶ್ವಾಸನೆಯಾಗ ಬಾರದು ಎನ್ನತಕ್ಕಂತಹ ಮಾತನ್ನು ಹೇಳುತ್ತಿದ್ದೇನೆ. ಮಹಾತ್ಮ ಗಾಂಧೀಜಿಯವರ ತತ್ವವನ್ನು ನಮ್ಮ ಜನತಾ ಪಕ್ಷ ಒಪ್ಪಿದೆ ಎಂಬುದಾಗಿ ಹೇಳಿದೆ. ಆದರೆ ಹಂಡದ ಮೇಲೆ ಈಗ ಹಾಕಿರತಕ್ಕಂತಹ ಸೇಲ್ಸ್ ಟ್ಯಾಕ್ಸಿನ ಬಹಳವಾಗಿರುವುದರಿಂದ ಅದನ್ನು ಕಡಿಮೆ ಮಾಡುವ ಕಡೆ ಸರ್ಕಾರ ಗಮನ ಕೊಡಬೇಕು. ತದ ನಂತರ ಇವತ್ತು ಹೇಳುವಾಗ ಕೈಮಗ್ಗದ ಬಗ್ಗೆ ವಿಶೇಷವಾಗಿ ಇಲ್ಲಿ ಹೇಳಬೇಕಾಗಿದೆ. ಏಕೆಂದರೆ ಗುಳೇದಗುಡ್ಡದಲ್ಲಿ ತಯಾರು ಮಾಡತಕ್ಕಂತಹ ಖಣ ಮತ್ತು ಇಲಕಲ್ ಸೀರೆಗೆ ಪ್ರಸಿದ್ಧಿ ಪಡೆದಿದೆ. ನಮ್ಮ ದೇಶದಲ್ಲಿ ಪ್ರಸಿದ್ಧಿ ಪಡೆದಂತಹ ಊರುಗಳಿವೆ. ಕೈಮಗ್ಗದ ನೇಕಾರರು ಸುಮಾರು ೩೫ ಲಕ್ಷ ಜನ ನಮ್ಮ ಕರ್ನಾಟಕದಲ್ಲಿದ್ದಾರೆ. ಆ ಜನಗಳಿಗೆ ತಯಾರು ಮಾಡತಕ್ಕಂತಹ ರೇಷ್ಮೆ ನೂಲಿನ ಮೇಲೆ ಶೇಕಡ ೨ ರಷ್ಟು ಕರವನ್ನು ಹಾಕಿರುವುದು ಅತಿ ಹೆಚ್ಚಿನದಾಗಿದೆ. ಇದು ನಿಜವಾಗಿಯೂ

ಅವರಿಗೆ ಅನ್ಯಾಯ ಮಾಡಿದಂತಾಗಿದೆ ಎನ್ನತಕ್ಕಂತಹ ಮಾತನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ''ಲಾಳಿ–ಮೇಳ'' ಎನ್ನುವ ಗಾದೆಯಂತೆ ಲಾಳಿ ಎಂದರೆ ನೇಕಾರ ಮೇಳ ಎಂದರೆ ಒಕ್ಕಲಿಗ. ಇವರೆಡನ್ನೂ ಸರಿಸಮಾನವಾಗಿ ನೋಡಬೇಕು. ಆದರೆ ಮೇಳಕ್ಕೆ ಸಾಕಷ್ಟು ರೀತಿಯಲ್ಲಿ ಪರಿಹಾರವನ್ನು ಸೂಚಿಸಿದ್ದೀರಿ. ಅದೇ ರೀತಿಯ ಸವಲತ್ತು ಲಾಳಿ ಅಂದರೆ ನೇಕಾರರಿಗೂ ಸಿಕ್ಕಬೇಕು ಎನ್ನತಕ್ಕಂತಹ ದೃಷ್ಟಿಯಿಂದ ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ೩೫ ಲಕ್ಷ ನೇಕಾರರಿಗೆ ಹಾಕಿರತಕ್ಕಂತಹ ಖರವನ್ನು ಬಿಟ್ಟುಬಿಡಿ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈಗಾಗಲೇ ಈ ಬಗ್ಗೆ ವಾಗ್ವಾದ ನಡೆದರೂ ಸಹ ಮಾನ್ಯ ಸದಸ್ಯರಾದ ಶ್ರೀ ಬಂಗಾರಪ್ಪನವರು ಹೆಂಡದ ಬಗ್ಗೆ ಯಾವುದೇ ರೀತಿಯ ಮಾತನ್ನು ಹೇಳಿಲ್ಲ. ಆದರೂ ಕೂಡ ಬೇರೆ ಪ್ರಸಂಗದಲ್ಲಿ ಮಾತನಾಡುತ್ತೇನೆಂದು ಹೇಳಿದ್ದಾರೆ. ಹೆಂಡಕ್ಕೆ ಮಾರಾಟ ತೆರಿಗೆ ವಿನಾಯಿತಿ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಬಡ ನೇಕಾರರಿಗೆ ಯಾವುದೇ ರೀತಿಯ ರಿಯಾಯಿತಿಯನ್ನು ತೋರಿಸಿಲ್ಲ ಎಂಬುದಾಗಿ ಹೇಳಬಯಸುತ್ತೇನೆ. ಈಗ ರಾಗಿ ಮತ್ತು ಜೋಳಕ್ಕೆ ಇದ್ದಂತಹ ೪ ಪರ್ಸೆಂಟ್ ತೆರಿಗೆಯನ್ನು ೨ ಪರ್ಸೆಂಟ್‌ಗೆ ಇಳಿಸಿದ್ದೀರಿ ಇದು ಸ್ವಾಗತಾರ್ಹವಾದುದು. ಮನುಷ್ಯನಿಗೆ ತಿನ್ನುವುದಕ್ಕೆ ಬೇಕಾದದು ಜೋಳದ ರೊಟ್ಟಿ ಇದಕ್ಕೆ ಬೇಕಾದಂತಹ ಚಟ್ನಿ. ಚಟ್ನಿಯನ್ನು ಮಾಡಬೇಕಾದರೆ ಅದಕ್ಕೆ ಮೂಲವಾಗಿ ಬೇಕಾದಂತಹದ್ದು ಮೆಣಸಿನಕಾಯಿ. ಆದರೆ ಈ ಮೆಣಸಿನಕಾಯಿಯ ಮೇಲೆ ಟರ್ನ್‌ಓವರ್ ಟ್ಯಾಕ್ಸ್ ೪ ಪರ್ಸೆಂಟ್ ಹಾಕಿದ್ದೀರಿ. ಇದರಿಂದಾಗಿ ರೊಟ್ಟಿಗೂ ಹಾಗೂ ಚಟ್ನಿಗೂ ಇರತಕ್ಕಂತಹ ಸಂಬಂಧವನ್ನು ತಪ್ಪಿಸಿದ್ದೀರಿ ಎನ್ನುವ ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ. ಮೆಣಸಿನಕಾಯಿಗೆ ಬಹುಮುಖ ಕರ ೪ ಪರ್ಸೆಂಟ್ ಇರುವುದನ್ನು ೨ ಪರ್ಸೆಂಟ್‌ಗೆ ಇಳಿಸಿ ರೊಟ್ಟಿಗೂ ಮತ್ತು ಚಟ್ನಿಗೂ ಹತ್ತಿರದ ಸಂಬಂಧವನ್ನು ಕಲ್ಪಿಸಿದರೆ ಬಡವರಿಗೆ ಉತ್ತಮ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಆ ಚುನಾವಣಾ ಪ್ರಣಾಳಿಕೆಯಲ್ಲಿ ವೃತ್ತಿ ತೆರಿಗೆಯನ್ನು ರದ್ದು ಮಾಡುತ್ತೇವೆಂಬಂದು. ಆದರೆ ಈ ವೃತ್ತಿ ತೆರಿಗೆಯನ್ನು ರದ್ದು ಮಾಡುವ ವಿಚಾರದಲ್ಲಿ ಪುರಸಭೆಗಳ ಚುನಾವಣೆಯಾದ ವಿಚಾರ ಮಾಡುತ್ತೇವೆಂಬುದು ಸರಿಯಾದುದಲ್ಲ. ಮತ್ತೆ ಇದರಿಂದ ನಾನು ಅವರಿಗೆ ಆಸೆಯನ್ನು ತೋರಿಸಿದಂತಾಗಿದೆ. ಕರ್ನಾಟಕದ ಜನತೆ ಹಾಗೂ ನೌಕರ ವರ್ಗ ಏನಿದೆ ಅವರು ಈ ವೃತ್ತಿ ತೆರಿಗೆಯನ್ನು ರದ್ದು ಮಾಡುತ್ತಾರೆಂಬ ವಿಶ್ವಾಸದಿಂದ ಜನತಾ ಪಕ್ಷಕ್ಕೆ ಮತ ನೀಡಿದ್ದಾರೆ. ಆ ಆಶ್ವಾಸನೆಯನ್ನು ಕೂಡಲೇ ನೆರವೇರಿಸುವುದು ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಈಗಾಗಲೇ turnover limit ೨೫ ಸಾವಿರದಿಂದ ೪೦ ಸಾವಿರದವರೆಗೆ ಏರಿಸಿದ್ದೀರಿ. ಆ ಪ್ರಕಾರ ಇಲ್ಲಿ ೨೫ ಸಾವಿರದಿಂದ ೫೦ ಸಾವಿರದವರೆಗೆ ವ್ಯಾಪಾರದ ವಹಿವಾಟುದಾರರು ೧೦೦ ರೂಪಾಯಿಗಳ ವೃತ್ತಿ ತೆರಿಗೆಯನ್ನು ಕೊಡಬೇಕಾಗಿದೆ. ಆದರೆ ೫೦ ಸಾವಿರಕ್ಕಿಂತ ಮೇಲ್ಪಟ್ಟು ವಹಿವಾಟು ಆದರೆ ಆತನು ವೃತ್ತಿ ತೆರಿಗೆಯನ್ನು ೨೫೦ ರೂಪಾಯಿಗಳನ್ನು ಕೊಡಬೇಕಾಗಿದೆ, ಇದರ ಅಂತರ ನೋಡಿದರೆ ಈ ವೃತ್ತಿ ತೆರಿಗೆಯನ್ನು ಏನು ಹಾಕಿದ್ದಾರೆ ಒಬ್ಬ ಬೀಡಿ ಅಂಗಡಿಯವನೂ ಕೂಡ ಸುಮಾರು ೪೦ ಸಾವಿರದವರೆಗೆ ವ್ಯವಹಾರ ಮಾಡಬಲ್ಲ. ಆದ್ದರಿಂದ ಈ ಟರ್ನ್‌ಓವರ್ ಮಿತಿ ಏನಿದೆ ಇದನ್ನು ಹೆಚ್ಚಿಸಬೇಕು. ಈಗ ಏನಿದೆ ಅಂದರೆ ೫೦ ಸಾವಿರಕ್ಕಿಂತ ಮೇಲ್ಪಟ್ಟು ೫ ಲಕ್ಷ ರೂಪಾಯಿಗಳವರೆಗೆ ವ್ಯವಹಾರ ಮಾಡಿದವನು ೨೫೦ ರೂಪಾಯಿಗಳ ವೃತ್ತಿ ತೆರಿಗೆಯನ್ನು ಕೊಡಬೇಕು. ೫೦ ಸಾವಿರದ ವ್ಯವಹಾರ ಮಾಡಿದವರೂ ಕೂಡ ೨೫೦ ರೂಪಾಯಿಗಳ ವೃತ್ತಿ ತೆರಿಗೆಯನ್ನು ಕೊಡಬೇಕು ಎಂದರೆ ಇದು ಸಾಧ್ಯವಾಗದ ಮಾತು. ಆದ್ದರಿಂದ ಈ ಅಂತರ ಏನಿದೆ ಅದನ್ನು ೨.೫ ಲಕ್ಷ ರೂಪಾಯಿಯಿಂದ ೫ ಲಕ್ಷ ರೂಪಾಯಿಗಳವರೆಗೆ ಟರ್ನ್‌ಓವರ್ ಮಾಡಿದವನು ೨೫೦ ರೂಪಾಯಿಗಳ ವೃತ್ತಿ ತೆರಿಗೆಯನ್ನು ಕೊಡಬೇಕು. ಆದ್ದರಿಂದ ಈಗ ಇರತಕ್ಕಂತಹ ಕಾಯಿದೆ ಏನಿದೆ ಅದನ್ನು ತಿದ್ದುಪಡಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ರಾಜ್ಯದ ರಸ್ತೆ ಸಾರಿಗೆ ಬಗ್ಗೆ ಹೇಳುವುದಾದರೆ, ಬೆಲೆ ನೀತಿಯನ್ನು ಪುನರ್ ವಿಮರ್ಶೆ ಮಾಡಬೇಕೆಂದು ಆಯವ್ಯಯದಲ್ಲಿ ಹೇಳಿದ್ದಾರೆ. ಆದರೆ ತಮಿಳುನಾಡಿಗೂ ನಮ್ಮ ರಾಜ್ಯಕ್ಕೂ ಹೋಲಿಕೆ ಮಾಡಿ ನೋಡುವುದಾದರೆ, ಈಗ ನಮ್ಮಲ್ಲಿ ಹಾಕಿರತಕ್ಕಂತಹ ಹೊರೆ ಏನಿದೆ ಅದೇ ಬಹಳ ಹೆಚ್ಚಾಗಿದೆ. ಆದರೂ ಕೂಡ ಖಾಸಗಿ ಬಸ್ಸುಗಳ ಮಾಲೀಕರು ಅನೇಕ ಸೌಕರ್ಯಗಳನ್ನು ಒದಗಿಸಿಯೂ ಕೂಡ ಕಡಿಮೆ ದರದಲ್ಲಿ ಪ್ರಯಾಣಿಕರನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯುತಕ್ಕಂತಹ ಸ್ಥಿತಿಯಲ್ಲಿರುವಾಗ ರಾಜ್ಯ ಸರ್ಕಾರ ಈ ಒಂದು ಹೆಚ್ಚಿನ ಬೆಲೆಯ ಬಗ್ಗೆ ವಿಮರ್ಶೆ ಮಾಡಬೇಕಾಗಿದೆ ಎಂದು ಹೇಳ

ತಕ್ಕಂತಹ ಮಾತು ಸರಿಯಾದುದಲ್ಲ. ಬಹುತೇಕ ಸಾಮಾನ್ಯ ಜನರು ಈ ಬಸ್ಸುಗಳಲ್ಲೇ ಓಡಾಡಬೇಕಾಗಿದೆ. ಈಗ ಹಾಕಿರತಕ್ಕಂತಹ ತೆರಿಗೆಯ ಹೊರೆಯನ್ನೇ ಹೊತ್ತುಕೊಂಡರೆ ಸಾಕಾಗಿದೆ. ಬೆಲೆಯನ್ನು ಜಾಸ್ತಿ ಏರಿಸುವುದಕ್ಕಿಂತ ಬದಲಾಗಿ ನಮ್ಮ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಹಣ ವಿಪರೀತ ಪೋಲಾಗುತ್ತಿದೆ. ಆ ರೀತಿ ಪೋಲಾಗುತ್ತಿರುವ ಹಣವನ್ನು ನಿಲ್ಲಿಸಿದರೆ ಈ ರೀತಿ ಬೆಲೆಯ ಬಗ್ಗೆ ಪುನರ್ ವಿಮರ್ಶೆ ಮಾಡಬೇಕಾದುದು ಅನಾವಶ್ಯಕ. ಕೂಡಲೇ ಇದನ್ನು ನಿವಾರಣೆ ಮಾಡಬೇಕೆಂಬ ಮಾತನ್ನು ಹೇಳುತ್ತಿದ್ದೇನೆ.

ಈ ಮಾರಾಟ ತೆರಿಗೆಯಲ್ಲಿ ಸೋರಿಹೋಗುವ ಹಣವನ್ನು ತಡೆಯಲು ಒಂದು ಸರಿಯಾದ ನೀತಿಯನ್ನು ರೂಪಿಸಬೇಕು ಎಂದು ಹೇಳುತ್ತೇನೆ. ಈ ಒಂದು ಕರವನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಮಾಡಿದರೆ ಸರಿಯಾದ ನೀತಿ ನಿಯಮಾವಳಿಗಳನ್ನು ರೂಪಿಸಿಕೊಂಡು ಮಾಡಿದರೆ ಇದರಲ್ಲಿ ಬರತಕ್ಕಂಥಾ ಕರ ಏನು ಇದೆ ಅದನ್ನು ಪಡೆಯುವುದಕ್ಕೆ ಸಾಧ್ಯ ಇದೆ ಮತ್ತು ಇದರಿಂದ ಸುಮಾರು 25 ಕೋಟಿ ರೂಪಾಯಿಯಷ್ಟು ಆದಾಯ ಬರುವಂತೆ ಮಾಡಬಹುದೆಂದು ಸರ್ಕಾರದ ಗಮನಕ್ಕೆ ನಾನು ತರಬಯಸುತ್ತೇನೆ.

ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ನಿರುದ್ಯೋಗದ ಸಮಸ್ಯೆ, ಕಾರ್ಮಿಕರ ಸಮಸ್ಯೆ ಇನ್ನೂ ಅನೇಕ ಸಮಸ್ಯೆಗಳನ್ನು ಏನೇನು ಇವೆ, ಅವುಗಳಿಗೆ ಸರಿಯಾದ ಒಂದು ಪರಿಹಾರವನ್ನು ಸೂಚಿಸುವ ಹಾಗೆ ಸರ್ಕಾರ ಮಾಡಿದರೆ ಅದರಿಂದ ಬಡವರ, ಹರಿಜನ ಗಿರಿಜನರ ಹಾಗೂ ಹಿಂದುಳಿದ ವರ್ಗದವರ ಆಶೋತ್ತರಗಳು ಏನು ಇವೆ ಅವುಗಳನ್ನು ಈಡೇರಿಸಲು ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಹಾಕಿಕೊಂಡು ಒಳ್ಳೆಯ ಕೆಲಸಗಳನ್ನು ಮಾಡಬಹುದು. ಅಂಥಾ ಒಂದು ಬಜೆಟನ್ನು ಮಂಡಿಸುವಂಥಾ ಸರ್ಕಾರ ಆಗಬೇಕು. ಜನತೆಯ ಜನಾರ್ಧನ ಅನ್ನುವ ಸರ್ಕಾರ ಆಗಬೇಕು. ಈ ಬಗ್ಗೆ ಬಜೆಟ್ಟನ್ನು ಸ್ವಲ್ಪ ಮಟ್ಟಿಗೆ ಸ್ವಾಗತ ಮಾಡಿದರೂ ಕೂಡ ಚಿಂತನೆಯ ಬಗ್ಗೆ ಎರಡು ಮಾತುಗಳನ್ನು ಹೇಳಿದ್ದೇನೆ. ಇಷ್ಟು ಹೇಳಿ ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಚೌಡಯ್ಯನವರು ಮಾತನಾಡಿ.

ಶ್ರೀ ಚೌಡಯ್ಯ.—ಈಗ ೬ ಗಂಟೆಗೆ ಇನ್ನು ೭ ನಿಮಿಷಗಳು ಮಾತ್ರ ಇದೆ. ನನಗೆ ಕೊನೇ ಪಕ್ಷ ಅರ್ಧ ಗಂಟೆಯಾದರೂ ಬೇಕು. ಕಾಲ ನಿಗದಿ ಮಾಡಿದರೆ ಮಾತನಾಡುತ್ತೇನೆ.

ಉಪಾಧ್ಯಕ್ಷರು.—ಈವಾಗ ಶುರು ಮಾಡಿ. ನಾಳೆ ಮುಂದುವರೆಸಬಹುದು.

ಶ್ರೀ ಚೌಡಯ್ಯ.—ನಾನು ನಾಳೆ ಇರುವುದಿಲ್ಲ, ನಾಳಿದ್ದು ಮಾತನಾಡುತ್ತೇನೆ.

ಉಪಾಧ್ಯಕ್ಷರು.—ಗಣಪತಿಯವರೇ ಮಾತನಾಡಿ.

ಶ್ರೀ ಗಣಪತಿ.—ಈಗ ನಾನೇನೋ ಮಾತನಾಡುತ್ತೇನೆ. ಆದರೆ ನಾಳೆಯೂ ಮುಂದುವರೆಸುವುದಕ್ಕೆ ಅವಕಾಶ ಕೊಟ್ಟರೆ ಈಗ ಶುರು ಮಾಡುತ್ತೇನೆ.

ಶ್ರೀ ಬಿ. ರಘುಪತಿ.—ಶ್ರೀಮಾನ್ ಚೌಡಯ್ಯನವರೇನೋ ಮಾತನಾಡುವುದಕ್ಕೆ ಮೀಟಿಂಗಳಿಗೆ ಹೋಗಬೇಕು. ಅದು ಸರಿಯಲ್ಲವೇ ಇವತ್ತಿನಿಂದ ಮಾತನಾಡಲಿಲ್ಲ [illegible] ಮೀಟಿಂಗಳಿಗೆ ಹೋಗುತ್ತೀರಾ ?

ಶ್ರೀ ಗಣಪತಿ.—ನಾನು ಯಾವ ಮೀಟಿಂಗಳಿಗೆ ಹೋಗುವುದಿಲ್ಲ. [illegible] ಇರುವುದರಿಂದ ನಾಳೆಯೂ ಮುಂದುವರೆಸುವುದಕ್ಕೆ ಅವಕಾಶ ಕೊಡುತ್ತೇನೆ ಎಂದರೆ ನಾನು ಮಾತನಾಡುತ್ತೇನೆ.

ಉಪಾಧ್ಯಕ್ಷರು.—ನೀವು ಮಾತನಾಡುವುದಕ್ಕೆ ಶುರು ಮಾಡಿ.

ಶ್ರೀ ಗಣಪತಿ.—ಮಾನ್ಯ ಮುಖ್ಯಮಂತ್ರಿಗಳು ಈ ಬಜೆಟ್ಟನ್ನು ಏನು ತಯಾರು ಮಾಡಿದ್ದಾರೆ ಅದನ್ನು ನಾನು ಬೆಂಬಲಿಸುತ್ತೇನೆ.

[illegible].—ನೀವು ಬಜೆಟ್ ಅನ್ನು ಓದಿದ್ದೀರಾ ?

ಶ್ರೀ ಪಂಪಾಪತಿ.—ನಾನೇನು ಓದಿಲ್ಲಾ, ನಿಮ್ಮ ಹಾಗೆ ಬಿ.ಎ., ಪಾಸು ಮಾಡಿಕೊಂಡು ಬಂದಿಲ್ಲಾ, ನಾನು ನಿಮ್ಮಷ್ಟು ವಿದ್ಯಾವಂತನಲ್ಲಾ, ನಾನು ಒಬ್ಬ ಕಾರ್ಮಿಕ ಮುಖಂಡ. ನಾನೇನಾದರೂ ಮಾತನಾಡಿದರೆ ಅದರಲ್ಲಿ ಏನಾದರೂ ತಪ್ಪು ಬರಬಹುದು, ತಪ್ಪಿದ್ದರೆ ಕ್ಷಮಿಸಬೇಕು. ಆದರೆ ನಾನು ನಿಮ್ಮಷ್ಟು ಒರಟಾಗಿ ಮಾತನಾಡುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ನಾನು ಈ ಬಡ್ಜೆಟ್ಟನ್ನು ಬೆಂಬಲಿಸುತ್ತೇನೆ ಹೇಗೆ ಬೆಂಬಲಿಸುತ್ತೇನೆ, ಯಾವ ರೀತಿಯಾಗಿ ಬೆಂಬಲಿಸುತ್ತೇನೆ ಅನ್ನುವುದನ್ನಾದರೂ ಕೇಳಿ.

ಉಪಾಧ್ಯಕ್ಷರು.—ನೀವು ಮಾತನಾಡುವುದಕ್ಕೆ ಮೊದಲು ಶುರು ಮಾಡಿ.

ಶ್ರೀ ಪಂಪಾಪತಿ.—ಮಾನ್ಯ ಮುಖ್ಯಮಂತ್ರಿಗಳು ಈ ಆಯವ್ಯಯ ಪತ್ರವನ್ನು ಈ ಸಭೆಯ ಮುಂದೆ ಏನು ಮಂಡಿಸಿದ್ದಾರೆ ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾರಣ ಏನು ಅನ್ನೋದನ್ನೂ ಸಹ ಹೇಳುತ್ತೇನೆ. ಏನು ಕಾರಣ ಅಂದರೆ ನಾವು ಜನತಾ ಪಕ್ಷದವರು, ಕ್ರಾಂತಿರಂಗದವರು ಎಂದು ಎಲ್ಲರೂ ಒಗ್ಗಟ್ಟಾಗಿ ಏತಕ್ಕಾಗಿ ಇದನ್ನು ಬೆಂಬಲಿಸುತ್ತಾರೆ ಎಂದರೆ ಅದನ್ನು ಸಹ ನಾನು ಹೇಳುತ್ತೇನೆ ಕೇಳಿ. ನಾವೆಲ್ಲರೂ ಒಟ್ಟಾಗಿ ಸೇರಿ ರಾಜ್ಯದ ಜನತೆಗೆ ೩೫ ವರ್ಷಗಳಿಂದಲೂ ಆಡಳಿತ ನಡೆಸುತ್ತಿದ್ದಂಥಾ ಈ ಪಕ್ಷವನ್ನು ಕೆಳಗೆ ಇಳಿಸುತ್ತೇವೆ ಎಂದು ಏನು ಒಂದು ಭಾವನೆಯನ್ನು ಮೂಡಿಸಿದ್ದೇವೋ ಅದು ಈವೊತ್ತಿನ ದಿವಸ ನಮ್ಮ ರಾಜ್ಯದ ಜನತೆ ನೋಡುತ್ತಿದ್ದಾರೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—೧೯೭೭ರಲ್ಲಿ ತಾವು ಯಾವ ಭಾವುಟದಲ್ಲಿ ಬಂದಿರಿ ಅದನ್ನು ಮರೆಯಬೇಡಿ, ಆವಾಗ ನಿಮ್ಮ ಮನೋಭಾವನೆ ಏನು ಇತ್ತು ಅದನ್ನೂ ಹೇಳಿಬಿಡಿ.

ಶ್ರೀ ಪಂಪಾಪತಿ.—೧೯೭೭ರಲ್ಲಿ ನಮಗೆ ಆವಾಗ ೩ ಸೀಟು ಸಹಾಯ ಮಾಡಿದಿರಿ, ಅದಕ್ಕೆ ನಾವು ನಿಮಗೆ ೩೦ ಸೀಟಿಗೆ ಸಹಾಯ ಮಾಡಿ ಗೆಲ್ಲಿಸಿದೆವು. ನಮ್ಮ ಸಹಾಯದಿಂದಲೇ ಆವೊತ್ತು ನೀವು ಬಂದದ್ದು ಅನ್ನುವುದನ್ನು ನೀವು ಮರೆತಂತೆ ಕಾಣುತ್ತದೆ. ಈಗಲಾದರೂ ನಿಮಗೆ ನಾನು ನೆನಪು ಮಾಡಿ ಕೊಡುತ್ತೇನೆ. ಈವೊತ್ತು ನಾವು ಕಮ್ಯೂನಿಸ್ಟ್ ಪಾರ್ಟಿಯವರು ನಿಜ. ಆವೊತ್ತಿನ ದಿವಸ ನಿಮ್ಮೊಂದಿಗೆ ಹೊಂದಾಣಿಕೆ ಇದ್ದುದೂ ನಿಜ. ಆದರಿಂದ ನಿಮಗೆ ೩೦ ಸೀಟುಗಳಿಗೆ ಸಹಾಯ ಮಾಡಿ ಗೆಲ್ಲಿಸಿದ್ದೇವೆ ತಿಳಿದುಕೊಳ್ಳಿ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ನಂತರ ನೀವು ನಮ್ಮ ನೀತಿ ನಿಯಮ ನೋಡಿ ಹೊರ ಬಂದದ್ದೂ ನಿಜವಲ್ಲವೇ ?

ಶ್ರೀ ಪಂಪಾಪತಿ.—ನಾನು ಆ ಬಗ್ಗೆ ಇನ್ನು ಹೆಚು ಹೇಳುವುದಕ್ಕೆ ಹೋಗುವುದಿಲ್ಲ. ಅದೇನೆ ಇರಲಿ. ಈವೊತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಏನು ಒಂದು ಆಯವ್ಯಯ ಪತ್ರವನ್ನು ಮಂಡಿಸಿದ್ದಾರೋ ಅದನ್ನು ನಾವೆಲ್ಲರೂ ಒಟ್ಟಾಗಿ ಸೇರಿ ಸ್ವಾಗತ ಮಾಡಿದ್ದೇವೆ ಹಾಗೂ ನಮ್ಮ ಜನತೆಗೆ ಈ ಬಗ್ಗೆ ಒಂದು ಭರವಸೆಯನ್ನೂ ಕೊಟ್ಟಿದ್ದೇವೆ. ಅದೇನೆಂದರೆ ನಮ್ಮ ರಾಜ್ಯದಲ್ಲಿ ದಕ್ಷ ಆಡಳಿತವನ್ನು ನಡೆಸುತ್ತೇವೆಂದು. ಅದರ ಪ್ರಕಾರ ಈ ಆಯವ್ಯಯ ಪತ್ರ ಇರುವುದರಿಂದ ನಾವು ಇದನ್ನು ಬೆಂಬಲಿಸುತ್ತಿದ್ದೇವೆ. ಇದನ್ನು ಬೆಂಬಲಿಸುವುದರ ಜೊತೆಗೆ ಇದರಲ್ಲಿರುವ ಕೆಲವು ಲೋಪ ದೋಷಗಳನ್ನೂ ಸಹ ಎತ್ತಿ ಹಿಡಿಯಬೇಕಾಗಿದೆ.

ಮೊದಲನೆಯದಾದ ಶಿಕ್ಷಣದ ಬಗ್ಗೆ ಹೇಳುತ್ತೇನೆ. ಇದರಲ್ಲಿ ಪ್ರವೇಶ ಶುಲ್ಕ ಏನು ಇದೆ ಅದನ್ನು ಈವೊತ್ತಿನ ದಿವಸ ಶಿಕ್ಷಣ ಸಂಸ್ಥೆಗಳು ವಸೂಲ್ಮಾಡುತ್ತಿದ್ದಾರೆ ಅನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನು ಕ್ಯಾಪಿಟೇಷನ್ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಮೆಡಿಕಲ್ ಕಾಲೇಜಿನಲ್ಲಿ ಒಂದೊಂದು ಮೆಡಿಕಲ್ ಕಾಲೇಜಿನಲ್ಲೂ ಕೂಡ ಪ್ರವೇಶ ಶುಲ್ಕವನ್ನು ಯಾವ ರೀತಿ ಸಂಗ್ರಹ ಮಾಡುತ್ತಿದ್ದಾರೆ ಅನ್ನುವುದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಬೆಂಗಳೂರು ಕೆಂಪೇಗೌಡ ಮೆಡಿಕಲ್ ಕಾಲೇಜಿನಲ್ಲಿ ೧,೮೮,೭೫೦ ರೂಪಾಯಿ ಪ್ರವೇಶ ಶುಲ್ಕ ವಸೂಲ್ಮಾಡುತ್ತಾರೆ, ದಾವಣಗೆರೆ ಮೆಡಿಕಲ ಕಾಲೇಜನಲಿ ೧,೮೪,೧೩೦ ರೂಪಾಯಿ ವಸೂಲ್ಮಾಡುತ್ತಾರೆ, ಗುಲ್ಬರ್ಗ ಎಂ. ಆರ್. ಮೆಡಿಕಲ್ ಕಾಲೇಜಿನಲ್ಲಿ ೧,೫೪,೧೩೦ ರೂಪಾಯಿಯನ್ನು ಸಂಗ್ರಹ ಮಾಡುತ್ತಿದ್ದಾರೆ. ಮಣಿಪಾಲ್ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನಲ್ಲಿ ೩,೪೬,೫೦೦ ರೂಪಾಯಿಯನ್ನು ಸಂಗ್ರಹ ಮಾಡುತ್ತಿದ್ದಾರೆ. ಇವರು ಈ ರೀತಿಯಾಗಿ ಸಂಗ್ರಹ ಮಾಡತಕ್ಕಂಥಾ ಹಣ ಏನು ಅದು ಬಹಳ ಜಾಸ್ತಿ. ಈ

ಪ್ರವೇಶ ಶುಲ್ಕ ಏನು ಇದೆ ಒಂದೊಂದು ಮೆಡಿಕಲ್ ಕಾಲೇಜಿನಲ್ಲೂ ಒಂದೊಂದು ತರಹವಾಗಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ವ್ಯವಸ್ಥೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಸರ್ಕಾರದವರು ಈ ಕ್ಯಾಪಿಟೇಷನ್ ಶುಲ್ಕವನ್ನು ಆದಷ್ಟು ಜಾಗ್ರತೆಯಾಗಿ ತೆಗೆಯುತ್ತೇವೆ ಅಂತ ಏನು ಹೇಳಿದ್ದಾರೆ ಅದನ್ನು ೫ ವರ್ಷದೊಳಗಾದರೂ ಕೂಡ ಅದನ್ನು ತೆಗೆಯುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಆ ಬಗ್ಗೆ ಮುಂದೆ ನಾವು ಕಾದು ನೋಡಬೇಕಾಗಿದೆ. ಈ ಕರ್ನಾಟಕ ರಾಜ್ಯದಲ್ಲಿ ೩೫ ವರ್ಷದಿಂದಲೂ ಹಿಂದಿನವರು ಏನು ಆಡಳಿತ ನಡೆಸುತ್ತಾ ಇದ್ದರು ಅವರು ಮಾಡಿರತಕ್ಕಂಥಾ ಲೋಪದೋಷಗಳು ಏನಿವೆ ಅವೆಲ್ಲವನ್ನೂ ಸಹ ಒಂದೇಸಾರಿ ಸರಿಪಡಿಸುವುದಕ್ಕಾಗುವುದಿಲ್ಲ. ಹಂತಹಂತವಾಗಿ ಸರಿಪಡಿಸಬೇಕಾಗಿದೆ. ಆ ರೀತಿಯಾಗಿ ಈ ಸರ್ಕಾರ ಹೆಜ್ಜೆ ಇಡುತ್ತಾರೆಂದು ನಾನು ಭಾವಿಸುತ್ತೇನೆ.

ಇನ್ನು ಆಯವ್ಯಯ ಪತ್ರದಲ್ಲಿ ರೈತರ ಬಗ್ಗೆ ಏನು ತೋರಿಸಿದ್ದಾರೆ ಮತ್ತು ಸ್ವಲ್ಪ ಮಟ್ಟಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲವು ತೆರಿಗೆಗಳನ್ನು ಏನು ಕಡಿಮೆ ಮಾಡಿದ್ದಾರೆ ಅದನ್ನು ನಾವು ಸ್ವಾಗತ ಮಾಡಬೇಕಾದದ್ದೇ. ಆದರೆ ಇದರಲ್ಲಿ ನೋಡಿದರೆ ಕಾರ್ಮಿಕರ ಬಗ್ಗೆ ಏನೂ ಅನುಕೂಲತೆ ಇದ್ದಹಾಗೆ ಇಲ್ಲ. ಇದರಲ್ಲಿ ಕಾರ್ಮಿಕರ ಬಗ್ಗೆ ಒಂದೇ ಒಂದು ಅನುಕೂಲ ಏನು ಮಾಡಿಕೊಟ್ಟಿದ್ದಾರೆ ಎಂದರೆ ಮೇ ದಿನಾಚರಣೆ ಆ ಒಂದು ದಿವಸ ಸಂಬಳ ಸಹಿತ ರಜಾ ಅನ್ನುವುದನ್ನು ಘೋಷಣೆ ಮಾಡಿದ್ದಾರೆ. ಈ ಬಗ್ಗೆ ರಾಜ್ಯದಲ್ಲಿರುವ ಎಲ್ಲಾ ಕಾರ್ಮಿಕರೂ ಕೂಡ ಈ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಆದರೆ ಇದು ಖಾಸಗೀ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೂ ಅನ್ವಯಿಸುತ್ತದೋ ಇಲ್ಲವೋ ಅನ್ನುವುದನ್ನು ಹೇಳಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನನ್ನ ಭಾವನೆ ಏನಾದರೂ ತಪ್ಪಿದ್ದರೆ ಕ್ಷಮಿಸಬೇಕು.

ಇನ್ನು ಹೋಟೆಲ್ಸ್ ಬಗ್ಗೆ ಹೇಳುವುದಾದರೆ ಈಗಾಗಲೇ ಹೋಟೆಲ್ಸ್‌ಗಳಲ್ಲಿ ತಿಂಡಿ ಬೆಲೆ ಜಾಸ್ತಿಯಾಗಿದೆ ಅನ್ನುವ ಕೂಗು ಈಗ ಇದ್ದೇ ಇದೆ.

ಸಂಜೆ ೫-೦೦ ಗಂಟೆ

ಇಲ್ಲಿ ಹೋಟೆಲುಗಳು ಎಂದರೆ ಸುಮಾರು ವರ್ಷಕ್ಕೆ ೪೦-೫೦ ಸಾವಿರ ರೂಪಾಯಿಗಳವರೆಗೆ ವ್ಯಾಪಾರ ಮಾಡತಕ್ಕವರಿಗೆ ತಾವು ಸುಮಾರು ೭೫೦೦ ರೂಪಾಯಿಗಳ ತೆರಿಗೆಯನ್ನು ಹಾಕಿದ್ದೀರಿ. ನನ್ನ ಅಭಿಪ್ರಾಯದಲ್ಲಿ ಇದು ಬಹಳ ಜಾಸ್ತಿಯಾದ ತೆರಿಗೆಯೆಂದು ಹೇಳಬೇಕಾಗಿದೆ. ಸಾಮಾನ್ಯವಾದ ಹೋಟೆಲಿನಲ್ಲಿ ಒಂದು ದಿವಸಕ್ಕೆ ೧೨೦-೧೫೦ ರೂಪಾಯಿಗಳ ವ್ಯಾಪಾರವಾದರೆ ಅವರು ಎಷ್ಟು ಲಾಭವನ್ನು ಸಂಪಾದಿಸಬಹುದು ಎಂದು ನಾವೇ ಯೋಚನೆ ಮಾಡಬೇಕಾಗಿದೆ. ಬೆಳಗಿನಿಂದ ಸಾಯಂಕಾಲದವರೆಗೆ ಕೂತುಕೊಂಡು ಬ್ಯಾಂಕಿನಿಂದ ಹಣವನ್ನು ತಂದು ಬಡ್ಡಿ ಕೊಟ್ಟು ಇವರಿಗೆ ಟ್ಯಾಕ್ಸ್ ಕೂಡ ಕೊಡಬೇಕೆಂದರೆ ತಾವು ವಿಧಿಸಿರುವಂಥ ಟ್ಯಾಕ್ಸ್ ಬಹಳ ಜಾಸ್ತಿಯಾಗುತ್ತದೆ. ದೊಡ್ಡ ದೊಡ್ಡ ಹೋಟೆಲುದಾರರು ಇದನ್ನು ಏನೂ ಕಷ್ಟವಿಲ್ಲದೆ ಕೊಡಬಹುದು ಆದರೆ ಸಣ್ಣ ಸಣ್ಣ ಹೋಟೆಲುದಾರರಿಗೆ ಇಷ್ಟು ತೆರಿಗೆಯನ್ನು ಕೊಡುವುದು ಎಂದರೆ ತೊಂದರೆಯಾಗುತ್ತದೆ. ಈ ದೃಷ್ಟಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ವ್ಯಾಪಾರಸ್ಥರನ್ನು ಕರೆಯಿಸಿ ಅವರೊಡನೆ ಸಮಾಲೋಚನೆ ಮಾಡಿ ತಾವು ವಿಧಿಸುವ ತೆರಿಗೆಯಿಂದ ಅವರಿಗೆ ಅನುಕೂಲವೇ ಅನಾನುಕೂಲವೇ ಇದನ್ನು ಅವರು ಕೊಡಬಲ್ಲರೇ ಎಂದು ವಿಚಾರ ಮಾಡಬೇಕಾಗಿತ್ತು. ಸಣ್ಣ ಸಣ್ಣ ವ್ಯಾಪಾರಸ್ಥರು ಈ ತೆರಿಗೆಯನ್ನು ಬಹಳ ಕಷ್ಟದಿಂದ ಕೊಡುವುದಲ್ಲದೆ ಅಧಿಕಾರಿಗಳು ಇವರ ಮೇಲೆ ದೌರ್ಜನ್ಯ ನಡೆಸುವುದು ಜಾಸ್ತಿಯಾಗುತ್ತದೆ. ಸರ್ಕಾರದವರು ಈ ಹೋಟೆಲುಗಳ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಬದಲಾಗಿ, ಹೋಟೆಲುಗಳಲ್ಲಿ ಮಾರಾಟ ಮಾಡುವ ತಿಂಡಿಗಳ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತಿತ್ತು ಎಂದು ನನ್ನ ಅಭಿಪ್ರಾಯ. ಈಗಾಗಲೇ ಶಾಸಕರ ಭವನ ಮತ್ತು ಅನೇಕ ಕಡೆಗಳಲ್ಲಿ ಒಂದು ರೂಪಾಯಿಗೆ ಒಂದು ಇಡ್ಲಿ ಮತ್ತು ಒಂದು ರೂಪಾಯಿಗೆ ಒಂದು ದೋಸೆ ಆಗಿದೆ. ತಾವು ತೆರಿಗೆಯನ್ನು ಹಾಕಿದ ಮೇಲೆ ಇವುಗಳ ಬೆಲೆ ಇನ್ನೂ ಜಾಸ್ತಿಯಾಗಬಹುದು, ಹೀಗಾದರೆ ನಮ್ಮ ಗತಿ ಏನು ? ನಮ್ಮ ಗತಿ ಹೀಗಾದ

ಮೇಲೆ ಹೊರಗಡೆ ಕಾರ್ಮಿಕರು ಯಾವ ರೀತಿ ಜೀವನ ಮಾಡಬೇಕು ಅವರ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ತಾವುಗಳು ಯೋಚನೆ ಮಾಡಬೇಕು. ಆದ್ದರಿಂದ ತಾವು ತೆರಿಗೆಯನ್ನು ಜಾಸ್ತಿ ಮಾಡುವುದರಿಂದ ಬೆಲೆಗಳು ಜಾಸ್ತಿಯಾಗಿ ತೊಂದರೆಯೇ ಜಾಸ್ತಿಯಾಗುತ್ತದೆ. ಆದ್ದರಿಂದ ತಾವು ಇದನ್ನು ಕಡಿಮೆ ಮಾಡುವ ಪ್ರಯತ್ನ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ ಮತ್ತು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅರ್ಧ ಗಂಟೆ ಕಾಲದ ಚರ್ಚೆ

(೨೪ನೆ ಸಂಖ್ಯೆಯ ಚುಕ್ಕೆ ಗುರುತಿನ ಪ್ರಶ್ನೆಗೆ ನೀಡಲಾದ ಉತ್ತರದಿಂದ ಉದ್ಭವಿಸಿದ ವಿಷಯದ ಮೇಲೆ.)

ವಿಷಯ : — ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ. —

ಶ್ರೀ ಧರ್ಮಸಿಂಗ್ (ಜೇವರಗಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಬಾಪೂಗೌಡ ಅವರು ಹೈದರಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದಾಗ ಕೆಲವು ವಿಚಾರಗಳನ್ನು ಮಾನ್ಯ ಮಂತ್ರಿಗಳಾದ ದೇವೇಗೌಡ ಅವರು ಹೇಳಿದರು. ಈ ಒಂದು ವಿಷಯದ ಬಗ್ಗೆ ನಮ್ಮ ಏರಿಯಾದ ಎಲ್ಲಾ ಸದಸ್ಯರು ಕೂಡಿ ಇಲ್ಲಿ ಚರ್ಚೆ ಮಾಡಬೇಕು ಎಂದು ತಮ್ಮ ಅನುಮತಿಯನ್ನು ಕೇಳಿದ್ದಕ್ಕೆ ತಾವು ಅವಕಾಶವನ್ನೂ ಕೊಟ್ಟಿದ್ದೀರಿ. ಈಗ ಮಾನ್ಯ ಮುಖ್ಯ ಮಂತ್ರಿಗಳೂ ಸಹ ಸಭೆಯಲ್ಲಿದ್ದಾರೆ. ಈ ಚರ್ಚೆಯ ಉದ್ದೇಶ ಏಂದರೆ, ನಮ್ಮ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಯಾವರೀತಿಯಲ್ಲಿ ಕೆಲಸಕಾರ್ಯಗಳು ಆಗಬೇಕಾಗಿದೆ, ೧೯೫೬ ರಿಂದ ಈ ಭಾಗದಲ್ಲಿ ಯಾವ ರೀತಿಯಲ್ಲಿ ಕೆಲಸಕಾರ್ಯಗಳು ಅಗಿವೆ ಎನ್ನುವುದನ್ನು ನಾವು ನೋಡಿದಾಗ, ಅಲ್ಲಿ ಇನ್ನೂ ಹೆಚ್ಚಿನ ಕೆಲಸ ಕಾರ್ಯಗಳು ಆಗಬೇಕಾಗಿರುವುದು ನಮಗೆ ಕಂಡುಬರುತ್ತದೆ ಈ ಭಾಗದಲ್ಲಿ ಜನರಿಗೆ ಹೆಚ್ಚಿನ ಅನುಕೂಲಗಳಿಲ್ಲ, ಇದರ ಬಗ್ಗೆ ಸರ್ಕಾರದವರೂ ಕೂಡ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲವೆಂದು ನಮ್ಮ ಭಾವನೆ. ಈ ಒಂದು ಭಾವನೆಯಿಂದಲೇ ನಾವುಗಳು ಅಲ್ಲಿ ಸಾಕಷ್ಟು ಕೆಲಸಕಾರ್ಯಗಳು ಜನರಿಗೆ ಆಗಬೇಕಾಗಿದೆ, ಈ ಭಾಗ ಬಹಳ ಹಿಂದುಳಿದ ಭಾಗವಾಗಿದೆ, ಮತ್ತು ರೀಜನಲ್ ಇಂಬ್ಯಾಲೆನ್ಸ್ ಎನ್ನತಕ್ಕ ಮಾತು ಏನು ಇದೆ ಅದನ್ನು ಸರ್ಕಾರದವರು ಮನಗಂಡು ತಕ್ಷಣ ಇದನ್ನು ಹೋಗಲಾಡಿಸುವ ಕೆಲಸಕ್ಕೆ ಆದ್ಯತೆ ಸಿಕ್ಕಬೇಕು ಎನ್ನುವಂಥ ಉದ್ದೇಶದಿಂದ ನಾವು ಈ ಚರ್ಚೆಯನ್ನು ಮಾಡಬೇಕಾಗಿದೆ. ಇದರ ಒಂದು ಪರಿಣಾಮವಾಗಿ ಹಿಂದೆ, ೧೯೮೦ರ ಮೇ, ದಿನಾಂಕ ೩ ರಂದು ಹಿಂದಿನ ಸರ್ಕಾರದವರು ಒಂದು ಬೋರ್ಡನ್ನು ಕಾನ್ಸ್‌ಟಿಟ್ಯೂಟ್ ಮಾಡಿದರು. ಆ ಕಮಿಟಿಯ ಅಧ್ಯಕ್ಷ ನಾನೆ ಆಗಿದ್ದು, ಅದರಲ್ಲಿ ಜಿಲ್ಲಾ ಮಂತ್ರಿಗಳು ಮತ್ತು ಶಾಸಕರು ಲೋಕಸಭೆಯ ಸದಸ್ಯರು ಸದಸ್ಯರಾಗಿದ್ದರು. ಈ ಕಮಿಟಿಯವರು ಈ ಭಾಗದಲ್ಲಿ ಯಾವ ರೀತಿಯ ಕೆಲಸ ಕಾರ್ಯಗಳು ಆಗಬೇಕು, ಯಾವ ರೀತಿಯಲ್ಲಿ ಸರ್ಕಾರ ಸಹಾಯ ಮಾಡಬೇಕು ಎಂದು ಕೆಲವು ಸಲಹೆಗಳನ್ನು ಅವರು ಕೊಡಬೇಕಾಗಿತ್ತು. ಇಂಥ ಒಂದು ಪರಿಪಾಠ ಬೇರೆ ರಾಜ್ಯಗಳಲ್ಲಿಯೂ ಇದೆಯೆಂದು ನಾನು ತಿಳಿದುಕೊಂಡು, ಅಲ್ಲಿ ಯಾವ ರೀತಿಯ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆಂದು ತಿಳಿದುಕೊಳ್ಳುವುದಕ್ಕೆ ಹೈದರಾಬಾದ್‌ಗೂ ಸಹ ಹೋಗಿ ಬಂದಿದ್ದೇನೆ. ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಹಿಂದೆ ೧೯೬೮ರಲ್ಲಿ ತೆಲಂಗಾಣದಲ್ಲಿ ಅಂದಿನ ಸರ್ಕಾರ ಈ ಭಾಗಕ್ಕೆ ಸರಿಯಾದ ರೀತಿಯಲ್ಲಿ ಅನುಕೂಲ ಮಾಡುತ್ತಿಲ್ಲ, ದುಡ್ಡು ಕೊಡುತ್ತಿಲ್ಲವೆಂದು ಅವರು ಒಂದು ದೊಡ್ಡ ಆಂದೋಲನವನ್ನು ಮಾಡಿದರು. ಅದರ ಪರಿಣಾಮವಾಗಿ ಸರ್ಕಾರದವರು ಅಲ್ಲಿ ಸುಮಾರು ಮೂರುಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಅಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನೂ ಕೂಡ ಖರ್ಚು ಮಾಡಿದರು. ಇದಲ್ಲದೆ ಅವರು ಅಲ್ಲಿ ರಾಯಲ್ ಸೀಮಾ ಬೋರ್ಡ್ ಎಂದು ಒಂದು ಬೋರ್ಡನ್ನು ಮಾಡಿಕೊಂಡು ಹಿಂದುಳಿದ ಭಾಗಗಳನ್ನು ಅಭಿವೃದ್ಧಿ ಮಾಡುವಂಥ ಕೆಲಸವನ್ನು ಮಾಡುತ್ತಿದ್ದಾರೆ, ಅದೇ ರೀತಿಯಲ್ಲಿ ಮಹಾರಾಷ್ಟ್ರದಲ್ಲಿಯೂ ಸಹ ಮಹಾರಾಷ್ಟ್ರ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ, ವೆಸ್ಟ್ ಬಂಗಾಳದಲ್ಲಿಯೂ ಸಹ ಒಂದು ಬೋರ್ಡನ್ನು ಮಾಡಿದ್ದಾರೆ. ಉತ್ತರ ಪ್ರದೇಶದಲ್ಲಿಯೂ ಸಹ ಅವರೂ ಒಂದು ಬೋರ್ಡನ್ನು ಮಾಡಿಕೊಂಡಿದ್ದಾರೆ. ಈ ರಾಜ್ಯಗಳಲ್ಲಿ ಯಾವುದೇ ಒಂದು ಭಾಗ